ದ್ವಿತೀಯ ಮುದ್ರಣ ೧,೫೦೦ ಪ್ರತಿಗಳು

ಕ್ರೌನ್ ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು

೧೯೧೫

[...-೦] [ಕ್ರಯ ೦-[illegible]-೦

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.
ಪ್ರಕಾಶಕರೂ, ಪುಸ್ತಕ ವ್ಯಾಪಾರಿಗಳು.
ಮಾಳಮಡ್ಡಿ, ಧಾರವಾಡ.

Sateehitaishini Granthamala

ಸುಶೀಲ್

Second Edition (*1,500 copies*)

Edited and Published
by
Srimati Tirumalamma
at the
'Sateehitaishini Granthamala' Office
Nanjangud

1915

For Subscribers 0—7—0] [Price 0—7—0

ಸಮರ್ಪಣಂ.

ಶ್ರೀ

ಶ್ರೀರಾಮಶ್ಶರಣಮ್.

ಶ್ಲೋ || ಪತಿರೇವಪರಂ ದೈವಂ-ಪತಿಸೇವಾ ಕುಲವಧೂಶರಣಮ್ ||
ಪತ್ಯುರ್ನಾನ್ಯತ್ ಪರಮಿಹ-ಪತಿಪದಮೇಕಂ ಸ್ಮರೇನ್ನಿತ್ಯಂ ||

ಅಸ್ಮದಾರಾಧ್ಯ ದೇವನೂ, ಮದೀಯಾಂತರಂಗವಾಸಿಯೂ ಆದ ನನ್ನ ಸ್ವಾಮಿಯ ಚರಣಾರವಿಂದದಲ್ಲಿ ಈ ಗ್ರಂಥಪುಷ್ಪವನ್ನು ಅನನ್ಯ ಭಕ್ತಿಭಾವದಿಂದ ಸಮರ್ಪಿಸಿರುವೆನು.

ಗ್ರಂಥಕರ್ತ್ರೀ.

ವಿಷಯಾನುಕ್ರಮಣಿಕಾ.

ಪ್ರಥಮಮುದ್ರಣದ ಪ್ರಸ್ತಾವನೆ.

ಪ್ರಿಯಸೋದರಿಯರೇ! ಸುಹೃತ್ಸೋದರರೇ!!

ನಾನು ವಿದ್ಯಾಗಂಧವನ್ನೇ ತಿಳಿಯದ ಅಲ್ಪಮತಿಯಾದ ಸಾಮಾನ್ಯ ಸ್ತ್ರೀ; ನವನಾಗರಿಕತೆಯ ಸುಳಿವಾಗಲೀ, ತಿಳಿವಳಿಕೆಯ ತಿರುಳಾಗಲೀ ತಿಳಿಯದ ಬಾಲಿಶೆ; ಆದರೂ, ನಮ್ಮ ಸೋದರೀವರ್ಗಕ್ಕೆ ನನ್ನ ಕಯ್ಯಲ್ಲಾಗುವ ಸೇವೆಯನ್ನು ಮಾಡಬೇಕೆಂಬ ಅತ್ಯುತ್ಕಟೇಚ್ಛೆಯು ನನ್ನನ್ನು ಬಿಡಲೊಲ್ಲದು.

"ಸೋದರೀವರ್ಗವನ್ನು ಹೇಗೆ ಸೇವಿಸಲಿ? ಹೇಗೆ ಉಪಕರಿಸಲಿ?" ಎಂದು ಚಿನ್ತಿಸಿ, ಚಿನ್ತಿಸಿಯೇ, ನನ್ನ ಸ್ವಾಮಿಯ ವಿಯೋಗಕಾಲದಿಂದ ಮೊದಲು, ಈವರೆಗಿನ ಕಾಲವನ್ನೂ ಕಳೆದು, ದೈವಯೋಗಬಲದಿಂದ ಈಗ ಈ ಗ್ರಂಥರಚನಾಕಾರ್ಯದಲ್ಲಿ ತೊಡಗಿರುವೆನು. ಕೇವಲ ಪಂಡಿತರಿಗೆ, ಮತ್ತೂ, ಬಹು ಭಾಷಾವಿಶಾರದರಿಗೆ ಮಾತ್ರವೇ ಸಾಧ್ಯವಾದ ಈ ಪ್ರಯತ್ನವು, ನನ್ನಿಂದ ಸಾರ್ಥಕ್ಯವನ್ನು ಹೊಂದಲಾರದೆಂಬ ಭರವಸೆಯಿದ್ದರೂ ವಿದ್ವನ್ಮಣಿಗಳೂ, ದೇಶವತ್ಸಲರೂ, ಭಾಷಾಭೂಷಣರೂ ಆದ ಸುಹೃದರ ಸಹಾಯ ಸಂಪತ್ತಿಯೇ ಸರ್ವಪ್ರಕಾರದಿಂದೆಯೂ ಪ್ರೋತ್ಸಾಹಿಸದಿರಲಾರದೆಂಬ ಬಲವಾದ ನಂಬುಗೆಯೊಂದು ಈ ಕಾರ್ಯದಲ್ಲಿ ಕಯ್ಹಾಚಿರುವ ನನ್ನನ್ನು ಪ್ರೋತ್ಸಾಹಿಸುತ್ತಿರುವುದು. ಈ ಸಂಸಾರಿಕ ಕಾದಂಬರಿಯು ಕೇವಲ ಬಾಲಿಶ ವಿದ್ಯಾರ್ಥಿನಿಯ ಸ್ವಕಪೋಲ ಕಲ್ಪಿತವು; ಕಥಾನಕವು ಅಷ್ಟಾಗಿ ಸ್ವಾರಸ್ಯವಾಗಿಲ್ಲವೆಂದರೂ ಗೃಹಿಣಿಯರಿಗೆ ಸಾಕಾದಷ್ಟು ನೀತಿಬೋಧಕವಾಗಿರುವುದೆಂಬ ಭರವಸೆಯುಂಟು. ಕೆಲವೆಡೆಗಳಲ್ಲಿ ತೋರಿಬರುತ್ತಿರುವ ದೂಷ್ಯವಚನಗಳಿಗೆ ಆಯಾ ದೂಷ್ಯಪಾತ್ರಗಳೇ ಕಾರಣ

ಗಳು. ಹಾಗೂ ಅಂತಹ ಕೆಟ್ಟ ಬಯ್ಗುಳಿಂದಾಗುವ ಕೇಡಾವುದೆಂಬುದನ್ನು ಸೂಚಿಸಲಿಕ್ಕೆಂದರೂ ಸಾಕು.

ಈ ಚಿಕ್ಕ ಕಾದಂಬರಿಯಲ್ಲಿ ದೋಷಗಳೇನಾದರೂ ಇದ್ದರೆ ಅವೆಲ್ಲವೂ ನನ್ನವೆಂದೂ, ಗುಣಗಳೆಲ್ಲವೂ ನನ್ನ ಸ್ವಾಮಿಗೆ ಸೇರಿದವೆಂದೂ ಭಾವಿಸಬೇಕಾಗಿ ಪ್ರಾರ್ಥಿಸುವೆನು. ಮತ್ತು ದೋಷಗಳನ್ನು ತೋರಿಸಿಕೊಟ್ಟವರಿಗೆ ವಂದನೆಗಳನ್ನು ಸಮರ್ಪಿಸಿ ಚಿರಕೃತಜ್ಞಳಾಗಿರುವೆನಲ್ಲದೆ, ದೋಷಗಳನ್ನು ಸರಿಪಡಿಸಿ, ಮತ್ತೆ ಅಂತಹ ದೋಷಗಳುಂಟಾಗದಂತೆ ಎಚ್ಚತ್ತುಕೊಳ್ಳುವೆನು.

ಈ ಗ್ರಂಥವು ಪ್ರೋತ್ಸಾಹಾರ್ಹವಾದುದಾಗಿದ್ದರೆ, ಪ್ರೋತ್ಸಾಹವಿತ್ತು ನನ್ನ ಇತರ-ಇದಕ್ಕೂ ಉತ್ತಮವಾದ ಗ್ರಂಥಗಳು ಜಾಗ್ರತೆಯಾಗಿ ಪ್ರಕಟವಾಗಲು ಅವಕಾಶವನ್ನು ಕಲ್ಪಿಸಿ, ತನ್ಮೂಲಕ ದೇಶಭಾಷಾಸೇವೆಯಿಂದ ಧನ್ಯಳನ್ನಾಗಿ ಮಾಡಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತಿರುವೆನು.

10–1–1915 }
ನಂಜನಗೂಡು } ತಿರುಮಲಮ್ಮ.

ದ್ವಿತೀಯ ಮುದ್ರಣದ ಪೀಠಿಕೆ.

ಸಹೃದಯ ವಾಚಕರೇ !

ಸತೀಹಿತೈಷಿಣೀ ಗ್ರಂಥಮಾಲೆಯ ಪ್ರಥಮ ಪುಸ್ತಕವಾದ ಈ ಸುಶೀಲೆಯ ಪ್ರಥಮ ಮುದ್ರಣದ ಒಂದು ಸಾವಿರ ಪ್ರತಿಗಳು ಮುಗಿದುಹೋದುವು.

ದೇಶಭಾಷಾವತ್ಸಲರಾದ ಗ್ರಾಹಕರ ಉದಾರಾಶ್ರಯದಿಂದೆಯೂ, ದೇಶೋದ್ಧಾರಕರೂ, ಗುಣೈಕದೃಕ್ಕುಗಳೂ ಆದ ಮೈಸೂರು, ಮದರಾಸು ಮತ್ತು ಬೊಂಬಾಯಿ ವಿದ್ಯಾಂಗದವರ ಬಲವತ್ಸಹಾಯ ಸಂಪತ್ತಿಯಿಂದೆ

ಯೂ ಈ ಗ್ರಂಥವು ಈಗಳೀಗಳೇ ಪುನರ್ಮುದ್ರಣವಾಗುವಂತಾಯ್ತೆಂದು ಹೇಳಲು ಸಂತೋಷವಾಗುವುದು.

ಅಲ್ಲದೆ ಉದಾತ್ತರಾದ ಬೊಂಬಾಯಿ ಮತ್ತು ಮದರಾಸು ವಿದ್ಯಾಭ್ಯಾಸದ ಸಂಘದವರು, ಅತ್ತಲಿನ ಬಾಲಿಕಾಜನೋಪಯೋಗಕ್ಕಾಗಿ ಇದನ್ನು ವಿನಿಯೋಗಿಸಬಹುದೆಂದು ನಿಯಮಿಸಿರುವುದರಿಂದ, ಮತ್ತಷ್ಟು ಹೆಚ್ಚಾಗಿಯೂ ಆತುರವಾಗಿಯೂ ಮುದ್ರಣಕಾರ್ಯವು ನಡೆದಿರುವುದು. ಮತ್ತು ಈ ಗ್ರಂಥದ ಪ್ರಥಮಮುದ್ರಣಕಾಲದಲ್ಲಿ ಶ್ರೀಯುತ ಹನೂಮಾನ್ ಕಂಪೆನಿಯವರ ಹೆಸರಿಂದ ಪ್ರಕಾಶಕ್ಕೆ ತಂದ ಕಾರಣವೂ, ಅತ್ಯಲ್ಪಕಾಲದಲ್ಲಿ ಅದನ್ನೂ ನಾವೇ ವಹಿಸಿಕೊಂಡುದರ ಉದ್ದೇಶವೂ, ಮಾಲೆಯ ಆಯ್ದನೆಗ್ರಂಥವಾದ ನಂದಿನಿಯ ಸ್ವವಿಷಯದಲ್ಲಿ ವಿವರಿಸಲ್ಪಟ್ಟಿರುವುದು.

ನಮ್ಮ ಸುಹೃದ್ವರ್ಗದವರು ಪ್ರಥಮ ಮುದ್ರಣದಲ್ಲಿ ತೆಗೆದು ತೋರಿಸಿದ ದೋಷಭಾಗಗಳನ್ನು ತಕ್ಕಮಟ್ಟಿಗೂ ಕ್ರಮಪಡಿಸಿ ಸಾಧ್ಯವಾದಷ್ಟು ಸುಧಾರಿಸಿಯೆ ಮುದ್ರಿಸಿರುವುದು. ಈಗಳೂ ಅಲ್ಲಲ್ಲಿ ಅಜ್ಞಾತವಾಗಿದ್ದು ತೋರುವ ದೋಷಗಳಾವುವೆಂಬುದನ್ನು ಸೂಚಿಸಿದವರಿಗೆ ಕೃತಜ್ಞತೆಯಿಂದ ವಂದನೆಯನ್ನು ಸಮರ್ಪಿಸುವುದು.

4-4-1915
ನಂಜನಗೂಡು. }

ಇತಿ ಹಿತೈಷಿಣಿ.

॥ ಶ್ರೀ ॥

॥ ಶ್ರೀರಾಮಶ್ಶರಣಮ್ ॥

"ಸಮಸ್ತಜನನೀಂವನ್ದೇ ಚೈತನ್ಯಸ್ತನ್ಯದಾಯಿನೀಮ್ ॥
ಶ್ರೇಯಸೀಂ ಶ್ರೀನಿವಾಸಸ್ಯ ಕರುಣಾಮಿವರೂಪಿಣೀಮ್ ॥೬॥"

ಸು ಶೀ ಲೆ

ಪ್ರಥಮಪರಿಚ್ಛೇದ.

(ವಿಷಬೀಜ)

ಸಂಧ್ಯಾಕಾಲವು ಸಮೀಪಿಸಿದ್ದುದು. ಭಗವಂತನಾದ ಭಾಸ್ಕರನು, ಸಂಧ್ಯಾಲಿಂಗನದಲ್ಲಿ ಆತುರಗೊಂಡಿದ್ದಂತೆ ಭಾಸವಾಗುತ್ತಿದ್ದುದು. ಪಶು ಪಕ್ಷಿಸಮೂಹಗಳು ನಿಜನಿವಾಸಗಳಿಗಭಿಮುಖವಾಗಿ, ಸ್ವಬಂಧುಗಳನ್ನು ಕುರಿತು ಕೂಗುತ್ತಿದ್ದುವು. ಆದರೂ ವಿನೋದನು ಇನ್ನೂ ಮನೆಗೆಬಂದಿಲ್ಲ. ಪತಿಯ ಆಗಮನನಿರೀಕ್ಷೆಯಿಂದ ಸಾಧ್ವೀಮಣಿಯಾದ ಸುಶೀಲೆ, ಇನ್ನೂ ನಿರಾಹಾರೆ!

ವಿನೋದನು ಮಲಯಪುರದಲ್ಲಿ, ವಿದ್ಯಾವಂತನಾದ ಶ್ರೀಮಂತ ಯುವಕನು. ವಿದ್ಯಾವೈಭವಗಳಿಗೆ ತಕ್ಕಂತಹ ಅಧಿಕಾರವು ತನಗೆ ದೊರೆ ಯಲಿಲ್ಲವಾದುದರಿಂದ, ಸರ್ಕಾರದ ಉದ್ಯೋಗವಾವುದಕ್ಕೂ ಈತನು ಸೇರಿರಲಿಲ್ಲ. ಮನೆಯಲ್ಲಿ ಸತಿಪತಿಯರಲ್ಲದೆ ಮತ್ತಾರೂ ಇರಲಿಲ್ಲ. ಆದರೆ ಸುಶೀಲೆಯ ಸಹಾಯಕ್ಕಾಗಿ ಚೇಟಿಯೊಬ್ಬಳೂ, ಇಬ್ಬರು ಆಳುಗಳೂ ಇದ್ದರು. ಇವರೂ ಈ ವೇಳೆಯಲ್ಲಿ ತಮ್ಮತಮ್ಮ ಕಾರ್ಯಗಳಲ್ಲಿ ನಿರತ

ರಾಗಿದ್ದರು. ಆದುದರಿಂದ ಸುಶೀಲೆಯೊಬ್ಬಳೇ ಮನೆಯ ವಿಶಾಲವಾದ ಅಂಗಳದ ಮಧ್ಯದಲ್ಲಿ ಕುಳಿತು, ಮನಸ್ಸಮಾಧಾನಕ್ಕಾಗಿ ಆವುದೋ ಪುಸ್ತಕವನ್ನು ಓದುತ್ತಿದ್ದಳು. ಬೀದಿಯ ಬಾಗಿಲು ತೆರೆದಿದ್ದಿತು.

ಸುಶೀಲೆಯು ಕುಳಿತಿದ್ದೆಡೆಗೆ, ನಡುಹರೆಯದ ಹೆಂಗಸೊಬ್ಬಳು ಬಂದು ನಗುತ್ತ ನಿಂತಳು. ಪುಸ್ತಕಾವಲೋಕನದಲ್ಲಿದ್ದ ಸುಶೀಲೆ, ತಲೆಯೆತ್ತಿ, ತನ್ನ ಮುಂದೆ ನಿಂತಿದ್ದವಳನ್ನು ನೋಡಿ, ವಿಸ್ಮಯದಿಂದ;— "ಗಿರಿಯಮ್ಮನವರೇ! ಇದೇಕೆ ಹೀಗೆ ನಗುವಿರಿ? ಕುಳಿತುಕೊಳ್ಳಿರಿ." ಎಂದಳು.

ಗಿರಿಯಮ್ಮ:—ಕುಳಿತುಕೊಂಡು,—'ಇದೇನೆ? ಸುಮ್ಮನೆ ಕುಳಿತೆ?'

ಸುಶೀಲೆ:—ಓದುತ್ತಿರುವೆನು; ಸುಮ್ಮನೆ ಕುಳಿತಿಲ್ಲ.

ಗಿರಿ:—ಓದುವುದು ಇಂತಹಹೊತ್ತಿನಲ್ಲೆ?

ಸುಶೀಲೆ:—ಮತ್ತೇನು? ಸದ್ಯದಲ್ಲಿ ಮಾಡಬೇಕಾದ ಕೆಲಸವೇನೂ ಇಲ್ಲ. ವಿರಾಮವು ದೊರೆತಾಗ ಓದಿದರೆ ನಷ್ಟವಿಲ್ಲವಷ್ಟೆ!

ಗಿರಿ:—ಒಳ್ಳೆಯ ಓದು! ಒಳ್ಳೆಯ ಓದು!! ವಿರಾಮದೊರೆತು, ಹೊತ್ತು ಹೋಗದಿದ್ದರೆ ಹಾಳು ಪುಸ್ತಕವನ್ನೇ ಓದಬೇಕೆ? ನಮ್ಮ ಮನೆಗೆ ಬರಬಾರದಾಗಿತ್ತೇ? ಇಲ್ಲವೆ ನನ್ನನ್ನು ಕರೆದರೆ ನಾನೇ ಬರುತ್ತಿದ್ದೆ? ಈಗಲೂ ಏನಾಯ್ತು? ನೀನು ಕರೆಯದೆಯೇ ನಾನೇ ಬಂದಿರುವೆನು.

ಸುಶೀಲೆ:—ಅಮ್ಮಾ! ನೀವು ದೊಡ್ಡವರು; ಹೇಗೆಬೇಕಾದರೂ ಹೇಳಬಲ್ಲಿರಿ! ಮನೆಯನ್ನು ಬಿಟ್ಟು ಹೆರವರಮನೆಗೆ ಹೋಗಿ, ಸುಮ್ಮನೆ ಕೆಲಸಕ್ಕೆಬಾರದ ಹರಟೆಯನ್ನು ಹರಟಲು, ನನಗೆ ಇಷ್ಟವಿಲ್ಲ. ನಿಮ್ಮನ್ನು ಕರೆಯಬಹುದಾಗಿತ್ತೆಂದು ಹೇಳುವಿರಿ; ಆದರೆ, ನಮ್ಮ ನಮ್ಮ ಕಾರ್ಯಗೌರವಗಳಿಗೆ ತಕ್ಕಂತೆ ನಾವು ಪ್ರವರ್ತಿಸಬೇಕಲ್ಲವೆ? ನಿಮ್ಮನ್ನು ಕರೆದು ನಿಮ್ಮ ಕೆಲಸವನ್ನು ಕೆಡಿಸುವುದು ನನಗೆ ತಕ್ಕುದಾಗಿ ಕಾಣಲಿಲ್ಲ.

ಗಿರಿ:—ನನ್ನನ್ನು ಕರೆಯದಿದ್ದರೇನಾಯ್ತು? ನೀನೇ ನಮ್ಮ ಮನೆಗೆ ಬಂದು ನಿನಗೆ ಹರಟೆ ಬೇಡವಾಗಿದ್ದರೆ, ಒಳ್ಳೆಯಮಾತುಗಳನ್ನೇ ಆಡಬಹುದಾಗಿತ್ತು.

ಸುಶೀಲೆ:—ಅಮ್ಮಾ! ನೀವು ಈರೀತಿ ಮಾತನಾಡಬಾರದು. ನಾನು ಕೂಗಿದ್ದರೆ ನೀವು ನಿಮ್ಮ ಕೆಲಸಗಳನ್ನೆಲ್ಲಾ ಬಿಟ್ಟು ಬರಬೇಕಾಗಿತ್ತಲ್ಲವೆ?

ಗಿರಿ:—ಕೆಲಸದಮನೆ ಹಾಳಾಯ್ತು! ಅದು ಇದ್ದೇ ಇದೆ!! ನಾನು ಸಿಡಿದುಬಿದ್ದಾಗಲ್ಲವೇ ಅದೂ ಮುಗಿಯಬೇಕು!!!

ಸುಶೀಲೆ:—ಹಾಗೆ ಹೇಳಲಾದೀತೆ? ಕ್ಲಿಪ್ತಕಾರ್ಯಗಳನ್ನು ಕ್ಲಿಪ್ತಕಾಲದಲ್ಲಿ ಮಾಡದೆ ಬಿಡಲಾರದಲ್ಲವೆ?

ಗಿರಿ:—ಯಾವಾಗಲಾದರೂ ಮಾಡಿದರಾಯ್ತು, ಇಲ್ಲವೆ ಬಿದ್ದಿರಲೆಂದು ಬಿಟ್ಟರೂ ಆಯ್ತು. ಒಂದೆರಡುಗಳಿಗೆಯಾದರೂ ವಿರಾಮವೇ ಬೇಡವೇ? ವಿನೋದದಿಂದ ಹೊತ್ತುಕಳೆಯದಿರಲು ನನ್ನಿಂದಾಗದಮ್ಮ! ಹಾಳು ಕೆಲಸಕ್ಕೆ ಬೆಂಕಿಬೀಳಲಿ!

ಸುಶೀಲೆ:—ಅಮ್ಮ! ನೀವು ಹೇಳುವುದು ಸರಿಯಾಗಿರುವಂತೆ ನನಗೆ ಕಾಣುವುದಿಲ್ಲ, ಕಾಲವೆಂಬುದು ಅತ್ಯಮೂಲ್ಯವಾದುದು. ಅದನ್ನು ಕಳೆದುಕೊಳ್ಳುವುದು ನಷ್ಟಕ್ಕೆ ಆಕರವು. ಕ್ಲಿಪ್ತಕಾಲದಲ್ಲಿ, ಕ್ಲಿಪ್ತಕಾರ್ಯವನ್ನು ನೆರವೇರಿಸಿಬಿಟ್ಟರೆ, ವಿರಾಮವು ದೊರತೇ ದೊರೆವುದು. ಸಕಾಲದಲ್ಲಿ ಕಾರ್ಯವನ್ನು ನೆರವೇರಿಸುವುದರಿಂದ ಮನಶ್ಶಾಂತಿ, ಸಮಾಧಾನ, ಆನಂದ, ಉತ್ಸಾಹಗಳು ಹೆಚ್ಚುವುವಲ್ಲವೆ? ಸಕಾಲದಲ್ಲಿ ಕೆಲಸವನ್ನು ಮಾಡದೆ, ಅವುಗಳನ್ನು ಮೂಲೆಗೊತ್ತರಿಸಿ, ಹರಟೆಗೆ ಕುಳಿತರೆ, ಅವು ಹಾಳಾಗುವುವಲ್ಲದೆ ನಾವೂ ಸೋಮಾರಿಗಳಾಗುವೆವು. ಹಾಗೆ ಸೋಮಾರಿಗಳಾದ ನಾವು, ಹೊತ್ತುಕಳೆವುದಕ್ಕೆ ಪರನಿಂದೆ, ಆತ್ಮಪ್ರಶಂಸೆ, ಅಹಂಕಾರ,

ಮಾತ್ಸರ್ಯ, ಅನ್ಯಸಂಸಾರಛಿದ್ರಾನ್ವೇಷಣೆ ಮೊದಲಾದ ದುರ್ಗುಣ ಗಳಿಗೆಡೆಗೊಡುವೆವು. ಈ ದುರ್ಗುಣಗಳಲ್ಲಿ ಒಂದೊಂದೇ ಆತ್ಮ ನಾಶಕ್ಕೂ, ಧರ್ಮಚ್ಯುತಿಗೂ ಸಾಕಾಗಿದೆ. ಈ ವಿಷಯವನ್ನು ತಿಳಿದೂ ನಾವು ಅಕೃತ್ಯವನ್ನು ಕಯ್ಕೊಳ್ಳಬಹುದೆ?

ಗಿರಿ:—ತಲೆಯನ್ನು ಓರೆಮಾಡಿ ವ್ಯಂಗಸ್ವರದಿಂದ,—'ಅಹುದಮ್ಮಾ-ಅಹುದು! ನೀನು ಮಹಾಜ್ಞಾನಿ? ಅಲ್ಲವೇ ಸುಶೀಲೆ!! ನೀನಿನ್ನೂ ನನ್ನ ಮುಂದಿನ ಹುಡುಗಿ! ನಿನಗಿಷ್ಟು ಬುದ್ಧಿವಂತಿಗೆಯೇ? ಇದೆಲ್ಲ ನೀಗಡೆಯ ಬಣ್ಣದ ಮಾತುಗಳೆಂದು ಬಲ್ಲೆನೆ! ತಾನೇ ನೋ ಮಹಾ ಕಾರ್ಯಗಳನ್ನು ಕ್ರಮವಾಗಿ ಮಾಡಿಟ್ಟು ವಿರಾ ಮಕಾಲವನ್ನು ಸರಿಯಾಗಿ ವಿನಿಯೋಗಿಸುವಂತೆ ಹರಟುವಳು. ಅಹುದೇ? ನಾವೆಲ್ಲರೂ ಸೋಮಾರಿಗಳು; ಕಾಲವನ್ನು ಕೊಲ್ಲುವವರು; ನಮ್ಮ ಪೂರ್ವಿಕರು ಧಡ್ಡರು. ನೀನೇ ಬಹುಬುದ್ಧಿವಂತೆ! ಪೂರ್ವಿಕರು, ಮಾತು, ಕಥೆ, ಪಗಡೆ, ದಚ್ಚೀಪಾರ, ಕವಡೆ, ಮತ್ತು ಗಜ್ಜುಗ ಮೊದಲಾದುವುಗಳನ್ನಾಡಿ ಹೊತ್ತುಕಳೆಯುತ್ತಿರಲಿಲ್ಲವೇನು? ನಿನ್ನಹಾಗೆ ಹಾಳುಪುಸ್ತಕವನ್ನೇ ಓದಿ ಹೊತ್ತುಕಳೆಯುತ್ತಿದ್ದರೆ?

ಸುಶೀಲೆ—ಅಮ್ಮಾ! ನೀವೇ ಮೊದಲು ಮಾತಿಗೆ ಪ್ರಾರಂಭಿಸಿದುದರಿಂದ ನಾನೂ ಇಷ್ಟುಮಾತುಗಳನ್ನಾಡಬೇಕಾಯ್ತು, ಸ್ವಲ್ಪ ವಿಚಾರ ಮಾಡಿ ನೋಡಿರಿ? ನಾವು ನಾಲ್ಕಯ್ದುಮಂದಿ ಹೆಂಗಸರು ಮಾತ ನಾಡಲು ಒಂದೆಡೆ ಕುಳಿತರೆ, ತುದಿ ಮೊದಲೇ ತಿಳಿವುದಿಲ್ಲ. ನಾವು ಕುಳಿತುಕೊಳ್ಳುವುದಕ್ಕೆ ಮೊದಲು ಇಂತಹ ವಿಷಯವನ್ನೇ ಕುರಿತು ಮಾತನಾಡಬೇಕೆಂದಾದರೂ ನಿಶ್ಚಯಿಸಿರುವುದಿಲ್ಲ. ಆದುದರಿಂದ ಬಾಯ್ಗೆಬಂದುದನ್ನೆಲ್ಲಾ ಆಡಿಬಿಡುವೆವು. ಅವುಗಳಲ್ಲಿ ಮೊದಲು ಅಡುಗೆ, ಆ ಬಳಿಕ ಮನೆಗೆಲಸಗಳ ವಿಚಾರವು ಚರ್ಚಿಸಲ್ಪಡುವುದು.

ಇದಾಯ್ತೆಂದಕೂಡಲೇ, ನಮ್ಮ ಗುಂಪಿನಲ್ಲಿ ಇಲ್ಲದ ಹೆಂಗಸರ ಮನೆಯಾಡಳಿತದ ಗುಣದೋಷವಿಮರ್ಶೆಯೂ, ಬಲವಾಗಿ ನಡೆವುದು. ಇದರಲ್ಲಿ ಅನೇಕರ ನಿಂದೆ-ಆತ್ಮಸ್ತುತಿಪೂರ್ವಕವಾಗಿ, ಸ್ವಗೃಹಕೃತ್ಯದ ಗುಣಾಗುಣವೂ ಹೊರಹೊರಡುವುದು. ಇಂತಿರುವಿವುಗಳ ನಡುವೆ, ಪರದೈವಸ್ವರೂಪನಾದ ಪತಿಯ ದೋಷವೂ, ಮಾತೃಸದೃಶೆಯಾದ ಅತ್ತೆಯ ನಿಷ್ಠುರವೂ ಆರೋಪಿತವಾಗಿಯೇ ಇರುವುವು, ಹೀಗಾಗುವುದರಿಂದ ನಮ್ಮ ಕುಂದು ಹೆರವರಿಗೂ, ಹೆರವರ ಕುಂದು ನಮಗೂ ತಿಳಿಯಲಾಗುವುದು. ಅಲ್ಲಿಗೆ “ ಸಂಸಾರಗುಟ್ಟು ವ್ಯಾಧಿರಟ್ಟು ” ಎಂಬ ನಿಯಮವು ತಪ್ಪಿಹೋಗುವುದು. ಸಂಸಾರದ ರಹಸ್ಯಗಳು, ಹೊರಬೀಳುವುದರಿಂದ ಎಂತೆಂತಹ ಅನಾಹುತವಾಗುವುದೆಂಬುದನ್ನು ನಾನಿಲ್ಲಿ ಹೇಳಲಾರೆನು ! ಕೆಲವು ಸಂದರ್ಭಗಳಲ್ಲಿ ಗುಂಪಿಗೆ ಸೇರದವರಿಗೂ, ಅನೇಕಾನೇಕ ತೊಂದರೆಗಳು ಸಂಭವಿಸುವುವು. ಇವೆಲ್ಲವೂ ವಯೋವೃದ್ಧರಾದ ತಮಗೆ ತಿಳಿದವಿಷಯವೇ ಆಗಿದೆ.

ಗಿರಿ—ಪೋಗಲಮ್ಮ ! ಹರಟೆಯೇನೋ ಕೆಟ್ಟುದು ; ಪಗಡೆಯನ್ನೂ ಆಡಬಾರದೊ ? ಅದೇನುಮಾಡುವುದು ?

ಸುಶೀಲೆ—ಪಗಡೆಯೂಡುವುದು ವಿನೋದವನ್ನಲ್ಲದೆ ಮತ್ತೇನನ್ನೂ ಮಾಡಲಾರದು. ಆದರೆ, ಗ್ರಂಥಕಾಲಕ್ಷೇಪವು ಅದಕ್ಕೂ ಒಳ್ಳೆಯದೆಂದು ನಾನು ನಂಬಿರುವೆನು.

ಗಿರಿ—ಹಾಗಾದರೆ, ನೀನು ವಿರಾಮಕಾಲದಲ್ಲಿ ಯಾವಾಗಲೂ ಪಗಡೆಯಾಡುವುದೇ ಇಲ್ಲವೊ ?

ಸುಶೀಲೆ—ಇಲ್ಲ. ಆಡುವುದನ್ನು ನೋಡುವುದೂ ಇಲ್ಲ !

ಗಿರಿ—ಆಡುವವರನ್ನು ಕಂಡರೇನುಮಾಡುವೆ ? ವಿನೋದಕಾಲಹರಣಕ್ಕೇನುಮಾಡುವೆ ?

ಸುಶೀಲೆ—ಆಡುವವರನ್ನು ಕಂಡರೆ, ಬೇಡವೆಂದು ಹೇಳುವೆನು. ವಿರಾಮ ಕಾಲದಲ್ಲಿ ಓದುವೆನು. ಬೇಸರವಾದರೆ ಗಿಡಗಳಿಗೆ ನೀರನ್ನು ಹಾಕುವೆನು. ಇಲ್ಲವೆ ಮತ್ತೇನನ್ನಾದರೂ ಮಾಡುವೆನು.

ಗಿರಿ—ಇದೆಲ್ಲವೂ ಬರಿಯಹರಟೆ ! ಕಯ್ಯಲ್ಲಿಬೇರೆ ಆ ರೀತಿ ಮಾಡುವುದಿಲ್ಲ. ಇಷ್ಟೆಲ್ಲಾ ಹೇಳುವವಳು ನಿನ್ನ ಗಂಡನನ್ನೇಕೆ ದಾರಿಗೆ ತರಬಾರದು ? ಮೂರುವೇಳೆಯೂ ಜೂಜುಗಾರರ ಮನೆಯಲ್ಲಿರುವನಲ್ಲ ?

ಸುಶೀಲೆ—ಏನು ? ಜೂಜುಗಾರರಮನೆಯಲ್ಲಿ !

ಗಿರಿ—ಜೂಜುಗಾರನಷ್ಟೇ ಅಲ್ಲವಮ್ಮ ! ನಿನ್ನಗಂಡ ಜಾರಾಗ್ರಣಿ ! ಅವನಿಗಿರುವುದೆಲ್ಲ ರಂಡೆಮುಂಡೆಯರ ಸಹವಾಸವೇ ?

ಸುಶೀಲೆ—ಅಮ್ಮಾ ! ನೀವು ಹಿರಿಯರು ! ಈ ರೀತಿ ದೋಷವನ್ನು ಆರೋಪಿಸಬಾರದು ? ನನ್ನ ಸ್ವಾಮಿ, ಜೂಜುಗಾರರೆಂದು ನಾನೆಷ್ಟು ಮಾತ್ರಕ್ಕೂ ಹೇಳಲಾರೆನು.

ಗಿರಿ—ಸರಿ; ನಾನೂ ಸುಳ್ಳಾಡುವೆನೆ ? ನನಗದರಿಂದ ಬರುವಲಾಭವೇನು ? ಅವನಂತಹ ಪಟಿಂಗನು ಮತ್ತೊಬ್ಬನಿಲ್ಲ. ಅವನೇನಾದರೂ ನನಗೆ ಗಂಡನಾಗಿದ್ದರೆ ಏನುಮಾಡಿಬಿಡುತ್ತಿದ್ದೆನೋ ? ನಮ್ಮಮನೆಯವರು............ಸ್ವಲ್ಪ ಆಟವಾಡಿದವರೇನು ? ಅವರನ್ನು ಇಷ್ಟರಮಟ್ಟಿಗೆ ತರಲು ನಾನೆಷ್ಟರಪ್ರಯತ್ನಪಟ್ಟೆನೊ ? ನೀನು ಯಾವಭಾಗದಲ್ಲಿ—ರೂಪು, ಲಾವಣ್ಯ, ವಿದ್ಯೆ, ಐಶ್ವರ್ಯಗಳಲ್ಲಿ ಏತರಲ್ಲಿ ಕಡಮೆಯಾಗಿರುವೆಯೆಂದು ಅವನು ಹಾಗೆಮಾಡಬೇಕು ? ನೀನೊಂದು ಪೆದ್ದು ; ಅದಕ್ಕೇ ನಿನ್ನನ್ನು ಬಿಟ್ಟು ಅವನು ಹಾಗೆ ಅಲೆದಾಡಿ ಸಾಯುತ್ತಿದ್ದಾನೆ.........

ಸುಶೀಲೆಗೆ ಕೋಪವು ಮಿತಿಮೀರಿತು ; ಸಂಕಟದಿಂದ ತಲ್ಲಣಿಸಿದಳು. ಶರೀರವಾದ್ಯಂತವೂ ರೋಮಾಂಚನದಿಂದ ಕೂಡಿತು. ಕಣ್ಣಿನಲ್ಲಿ ನೀರು ತುಂಬಿತು. ಗದ್ಗದಸ್ವರದಿಂದ ಹೇಳಿದಳು;—‘ ಗಿರಿಯಮ್ಮ ! ಸಾ

ಕು ! ನಿಮ್ಮ ಮಾತುಗಳನ್ನು ನಿಲ್ಲಿಸಿರಿ. ನಾನು ಮೊದಲೇ ಹೇಳಲಿಲ್ಲವೇ ? ಕಯ್ಮುಗಿದು ಹೇಳುವೆನು ಸುಮ್ಮನಿರಿ. ನನ್ನ ಸ್ವಾಮಿಗೆ ನನ್ನಲ್ಲಿ ಪೂರ್ಣ ಪ್ರೇಮವಿದೆ. ಅವರ ದಯೆಯಾದರೂ ನನ್ನ ವಿಚಾರದಲ್ಲಿ ಅಪಾರವಾಗಿದೆ. ನನಗೆ ಅವರ ಪ್ರೇಮ, ಕ್ಷೇಮ, ದಯೆಯೇ ಸಾಕಾದ ನಿಧಿ ? ಇನ್ನಾದರೂ ತಿಳಿಯಲಿಲ್ಲವೆ ? ನೀವು ಅವರಲ್ಲಿ ದುರ್ಗುಣಗಳನ್ನು ಕಲ್ಪಿಸಿ ಹೇಳಿ ನನ್ನನ್ನು ಕೆರಳಿಸಬೇಡಿರಿ.

ಗಿರಿ—ಹುಚ್ಚಿ ! ಹುಚ್ಚಿ !! ನಾನೇನು ಕೆಟ್ಟುದಕ್ಕೆ ಹೇಳುವೆನೆ ? ನೀನು ಅವನನ್ನು ಇನ್ನೂ ಹೀಗೆಯೇ ಬಿಟ್ಟರೆ ಇನ್ನು ಸ್ವಲ್ಪಕಾಲದಲ್ಲಿಯೇ ಕೆಟ್ಟುಹೋಗುವನಲ್ಲದೆ ಮಾರ್ಗಕ್ಕೆ ಬಂದಾನೆ ? ಅವನಾವಾಗಲೂ ಆ ರಂಡೆಯ ಮನೆಯಲ್ಲಿಯೇ ಸಾಯುತ್ತಿರುವನು.

ಸುಶೀಲೆ—ಇದಕ್ಕಾಗಿಯೇ ನೀವಿಲ್ಲಿಗೆ ಬಂದಿರೇನು ? ನನ್ನ ಸ್ವಾಮಿಯ ಕ್ಷೇಮಲಾಭವು, ನನ್ನ ಹಿತಚಿನ್ತೆಗೊಳಪಟ್ಟುದಲ್ಲದೆ ನಿಮ್ಮ ನಿಷ್ಠುರಕ್ಕೆ ಒಳಗಾಗತಕ್ಕುದಲ್ಲ. ಈ ವಿಷಯವನ್ನು ಚೆನ್ನಾಗಿ ತಿಳಿದಿರಿ! ಪತಿಯ ದೋಷಗಳನ್ನು ಕೇಳಿ, ದೂಷಕರನ್ನು ಪುರಸ್ಕರಿಸುವ ಮಾತುಗಳನ್ನಾಡಿ ; ಅವರಿಗೆ ವಸತಿಯನ್ನು ಅಣಿಮಾಡಿಕೊಡುವವಳು ನಾನೆಂದು ತಿಳಿಯಬೇಡಿರಿ ? ಇನ್ನುಮುಂದೆ ಇಂತಹ ಮಾತುಗಳನ್ನು ಹೇಳಲಾಗದು.

ಗಿರಿ—ಸಾಕು ; ಸಾಕು ! ನಿನ್ನ ಪುರಾಣವನ್ನು ಕಟ್ಟಿಡು ! ಉಪಯೋಗವಿಲ್ಲದಮಾತು !! ರಾತ್ರಿ ಏಳುಗಂಟೆಯಾಗುತ್ತಿದ್ದರೂ ಇನ್ನೂ ನಿನ್ನ ಗಂಡನು ಮನೆಗೆಬಂದಿಲ್ಲ. ನೀನು ಹಸಿದು ಸಾಯುತ್ತಿರುವೆ. ಅವನು ಅಲ್ಲಿ ಹೊಟ್ಟೆಬಿರಿವಂತೆ ತಿಂದು, ಕುಡಿದು, ಬಿದ್ದು ಒದ್ದಾಡುತ್ತಿರುವನು. ಅವನು ಬಾರದಿದ್ದರೆ ನೀನೇಕೆ ಹಸಿದಿರಬೇಕು ?

ಸುಶೀಲೆ—(ಜಿಗುಪ್ಸೆಯಿಂದ) ಅಮ್ಮ ! ಅವೆಲ್ಲವೂ ಹೆಚ್ಚುಮಾತುಗಳು. ನಾನು ಊಟಮಾಡಿದರೇನು ? ಬಿಟ್ಟರೇನು ? ನಿಮಗದರಿಂದಾಗುವ

ಲಾಭನಷ್ಟಗಳಾದರೂ ಯಾವುವು ? ವೃಥಾಕಾಲಹರಣ ! ನನ್ನ ಮನಸ್ಸಮಾಧಾನ-ಅಭ್ಯುದಯಗಳಿಗೆ ಕಾರಣವಾಗಿದ್ದ ಪುಸ್ತಕಾವಲೋಕನವನ್ನೂ ತಪ್ಪಿಸಿ, ಮನಸ್ಸನ್ನು ಅತಿಯಾಗಿ ನೋಯಿಸಿದಿರಿ ? ಇದು............

ಗಿರಿ—ಎಲೆ ! ನೀನು ಸ್ವಲ್ಪ 'ಕಾ ಕೂ' ಕಲ್ತಿರುವುದರಿಂದಲೇ ಹೀಗೆ ಮಲೆತುಹೋಗಿರುವೆ; ದುರಹಂಕಾರದಿಂದ ಮರ್ಯಾದೆ ಮೀರಿ ಮಾತನಾಡುತ್ತಿರುವೆ. ಇನ್ನೊಬ್ಬರಿಗೆ ಉಪದೇಶಮಾಡುವುದಕ್ಕೆ ಮಾತ್ರ ನಾಲ್ಕು ಬಾಯಾಗುವುವು. ಸಾಕು ; ಬಿಡು ! ನಿಮ್ಮಮ್ಮನು ನನಗೆ ಸಂಗಾತಿಯಾದುದರಿಂದಲೂ, ನೀನು ಅಭಿವೃದ್ಧಿಗೆ ಬರಬೇಕೆಂಬ ಕುತೂಹಲದಿಂದಲೂ, ನಿನಗೆ ಹಿತವನ್ನು ಬಯಸಿ, ಬುದ್ಧಿ ಹೇಳಿದುದಕ್ಕೆ, ತಕ್ಕ ಪುರಸ್ಕಾರವನ್ನು ಮಾಡಿದೆಯೆ ? ಸಾಣ್ಗೆಟ್ಟವಳೆ ! ನೀನು ಹೇಳುವ ಮಾತುಗಳಿಂದ ನಾನೇನು ಹೆದರುವೆನೆಂದು ತಿಳಿದೆಯೋ ? ನಿನ್ನನ್ನು ಆ ನಿಮ್ಮಮ್ಮ.........ಈ ನತದಿಷ್ಟನಿಗೆ ಕೊಟ್ಟು ಹಾಳುಮಾಡಿದಳು ! ಪಾಪ ! ನಿನ್ನ ಬಾವ ಎಷ್ಟೋಬಗೆಯಿಂದ ನಿನ್ನನ್ನು ತನಗೆ ಮದುವೆಮಾಡಿಕೊಡೆಂದು ನಿಮ್ಮಮ್ಮನಲ್ಲಿ ಪ್ರಾರ್ಥಿಸಿದನು. ಕೊಡಲಿಲ್ಲ ಕೊಟ್ಟಿದ್ದರೆ, ಅವನೆಷ್ಟುಸುಖ...............

ಸುಶೀಲೆ, ಮುಂದೆ ಕೋಪವನ್ನು ತಡೆಯಲಾರದೆ ಎದ್ದುನಿಂತು, ದರ್ಪಿತಸ್ವರದಿಂದ ಹೇಳಿದಳು. "ಗಿರಿಯಮ್ಮ ! ಇನ್ನು ನಿಲ್ಲಬೇಡಿರಿ ; ಮನೆಗೆ ನಡೆಯಿರಿ ! ಈ ಮಾತುಗಳನ್ನು ನಾನು ಕೇಳಲಾರೆನು ! ಇನ್ನು ಕ್ಷಣವಾದರೂ ನನಗೆ ಇಲ್ಲಿರಲಾಗದು. ನಿಮ್ಮ ದುರ್ಭಾಷೆಗಳು ನನ್ನ ಹೃದಯಭೇದಕಗಳಾದ ಕ್ರೂರನಾರಾಚಗಳಾಗಿವೆ ! ದೇವರು ನಿಮಗೆ ಇಂತಹ ಬುದ್ಧಿಯನ್ನೇಕೆ ಕೊಟ್ಟನೊ ? ನಿಮಗಿಷ್ಟುವಯಸ್ಸಾದುದೂ ವ್ಯರ್ಥ !!" ಎಂದು ಹೇಳಿ ನಿಲ್ಲದೆ ಮನೆಯೊಳಕ್ಕೆ ಹೊರಟುಹೋದಳು. ಗಿರಿಯಮ್ಮನು,

ಮಹದಾಗ್ರಹವ್ಯಗ್ರಳಾಗಿ ಬಿರಬಿರನೆ ನೋಡುತ್ತೆ, 'ಎಲೆಲೆ! ತಟವಾಣಿ! ನಿನ್ನೀ ಅಹಂಕಾರಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ನಾನು ಇನ್ನು ಒಂದುವಾರದೊಳಗಾಗಿಯೇ ಮಾಡದಿದ್ದರೆ ನನ್ನ ಹೆಸರು ಗಿರಿಯಮ್ಮನಲ್ಲ! ಚೆನ್ನಾಗಿ ತಿಳಿದಿರು.' ಹೀಗೆ ಹೇಳಿ ಅಲ್ಲದ ಸಲ್ಲದ ದೋಷಾರೋಪದಿಂದ ವಿಷಬೀಜವನ್ನು ನೆಟ್ಟು ಸ್ವಗೃಹಾಭಿಮುಖಿಯಾಗಿ ಹೊರಟುಹೋದಳು. (ಇಂತಹ ವಿಷಬೀಜವನ್ನು ಬಿತ್ತಿ ಬೆಳೆಸತಕ್ಕ ಗಿರಿಯಮ್ಮನವರು ಈಗಲೂ, ಅಲ್ಲಲ್ಲಿ ಕಾಣುತ್ತಿರುವರಲ್ಲವೆ? ಇರಲಿ.)

ದ್ವಿತೀಯ ಪರಿಚ್ಛೇದ.

(ಸಂಪ್ರಾರ್ಥನೆ.)

ಭಗವಾನ್ ಭಾಸ್ಕರನು ಆಯಾಸ ಪರಿಹಾರಕ್ಕಾಗಿ ಅಪರಾಂಬುಧಿಯಲ್ಲಿ ಧುಮ್ಮಿಕ್ಕಿದನೇನೋ? ಆತನ ಸುಳಿವೇ ಇಲ್ಲ. ಕ್ಷಣಮಾತ್ರದಲ್ಲಿ ನಾಲ್ಕು ಕಡೆಯಿಂದೆಯೂ ಕತ್ತಲೆಯಾವರಿಸಿದುದು. ಆಕಾಶವು ಮೇಘಮಯ; ಪ್ರಚಂಡಮಾರುತನ ಅಭ್ಯುದಯ! ಕ್ಷಣಕ್ಕೊಮ್ಮೆ ವಿದ್ಯುಲ್ಲತೆಯ ಸಂದರ್ಶನ!! ಬೀದಿಯಲ್ಲಿ ಒಬ್ಬರಾದರೂ ಇಲ್ಲ! ಕತ್ತಲೆಯಾಗಿ ಇನ್ನೂ ಹೆಚ್ಚು ಹೊತ್ತಾಗಿಲ್ಲ. ಆಗಲೇ ಶಾನ್ತಿರಾಜ್ಯಸ್ಥಾಪನೆಯಾಗಿ ಹೋಗಿದೆ! ಸಾಲದುದಕ್ಕೆ ಮಳೆಬರುವ ಸಂಭವವೂ ಉಂಟಾಗಿದೆ.

ಸುಶೀಲೆಯು ಆಕಾಶವನ್ನು ನೋಡಿದಳು. ಮಳೆಬರುವುದೆಂಬ ಭಯದಿಂದ ಆಳುಗಳನ್ನು ಮನೆಗೆ ಕಳಿಸಿಬಿಟ್ಟಳು. ದಾಸಿಯಾದ ಮಯೂರಿಯೊಬ್ಬಳನ್ನು ಮಾತ್ರ ಮನೆಯಲ್ಲಿರುವಂತೆ ಹೇಳಿ, ಒಳಹೊಕ್ಕು ದೇವಗೃಹವನ್ನು ಸೇರಿ, ದೀಪಾರಾಧನೆಯನ್ನು ನಡೆಯಿಸಿ, ಸ್ವಾಮಿಯನ್ನು

ಅನನ್ಯಭಕ್ತಿಭಾವದಿಂದ ಸಂಪ್ರಾರ್ಥಿಸ ತೊಡಗಿದಳು,—“ಸರ್ವೇಶ್ವರ ! ಸರ್ವಶಕ್ತ!! ಕೃಪೆಮಾಡು!! ಆವ ನಿನ್ನ ಕಟಾಕ್ಷಮಾತ್ರದಿಂದ ಚರಾಚರಾತ್ಮಕವಾದೀ ಪ್ರಪಂಚವು ಸೃಷ್ಟಿಸಲ್ಪಟ್ಟು ಸ್ಥಾಯಿಗೊಂಡಿರುವುದೋ, ಆವ ನಿನ್ನ ಸಂಕಲ್ಪಮಾತ್ರದಿಂದ ಕ್ಷಣಕಾಲದಲ್ಲಿ ನಾಶಹೊಂದಬಹುದೋ ಅದನ್ನು ಬಲ್ಲವರಾರು ? ದೇವದೇವ ! ಆ ನಿನ್ನ ಕಟಾಕ್ಷ ಕಿರಣರಾಶಿಯಲ್ಲಿ ಒಂದು ಕಿರಣವಾದರೂ ನನ್ನಲ್ಲಿ ಪ್ರಸರಿಸಲಿ ! ಜಗನ್ನಾಥ ! ಅಹಲ್ಯೆಯ ಪಾಪರಾಶಿಯನ್ನು ಆವ ನಿನ್ನ ಪಾದರಜಸ್ಸು ನಾಶಗೊಳಿಸಿತೋ, ಆ ರಜಸ್ಸಿನ ಒಂದು ರೇಣು ಮಾತ್ರವಾದರೂ ನನ್ನಿಂದ ಧರಿಸಲ್ಪಡುವಂತೆ ಅನುಗ್ರಹಿಸು ! ಪರಮಪುರುಷ, ಆವ ನಿನ್ನ ದಿವ್ಯನಾಮಗುಣ ಕಥನಮಾತ್ರದಿಂದ ವಾಲ್ಮೀಕಿ, ಮಹರ್ಷಿಯೂ, ಕವಿ ಸಾರ್ವಭೌಮನೂ ಆಗಿ ಆಚಂದ್ರಾರ್ಕವಾಗಿ ಕೀರ್ತ್ಯಂಗನೆಯಿಂದ ಸೇವೆಮಾಡಿಸಿಕೊಳ್ಳುತ್ತಿರುವನೋ, ಆ ನಿನ್ನ ದಿವ್ಯನಾಮಾವಳಿಯನ್ನು ಜಪಿಸುವಂತೆ ನನಗೆ ಕಟಾಕ್ಷಿಸು ! ದಯಾಮಯ !! ಈ ಸ್ತ್ರೀಜನ್ಮಧಾರಣೆಗೆ ಆವುದು ಮುಖ್ಯವಾದ ಆಶ್ರಯವಸ್ತುವೋ-ಆವುದು ಇಹಪರ ಸೌಖ್ಯಕ್ಕೂ ಸಾಧನಸ್ವರೂಪವೋ-ಆವಮೂರ್ತಿಯನ್ನುಳಿದು, ವ್ರತನಿಯಮಾದಿಗಳೂ ಅಪ್ರಯೋಜಕಗಳೋ ಆ ನನ್ನ ಸ್ವಾಮಿಯನ್ನು ಸನ್ಮಾರ್ಗಗಾಮಿಯನ್ನಾಗಿ ಮಾಡು ! ವಿವೇಕವನ್ನುಂಟುಮಾಡು !! ದೇವ ! ಕೃಪಾರ್ಣವ !! ಆ ನನ್ನ ಸ್ವಾಮಿಗೆ ಇಹದಲ್ಲಿ,-ಅಪ್ರಿಯವೂ, ಅಹಿತವೂ ಆದ ಕರ್ಮವಾವುದೇ ಆದರೂ, ನನ್ನಿಂದ ಚಿಂತಿಸಲ್ಪಡದಿರಲಿ ! ಆ ನನ್ನ ಸ್ವಾಮಿಯಲ್ಲಿ ನನಗೆ ಭಕ್ತಿ, ಪ್ರೀತಿಗಳು ಮತ್ತು ಮತ್ತೂ ಹೆಚ್ಚುತಿರಲಿ ! ಆ ನನ್ನ ಪ್ರಭುವಿನ ವಿಚಾರವಾಗಿ ಅಪಲಪಿಸುವ ಕುಹುಕರ ಕುತ್ಸಿತವಾರ್ತೆಗೆ ನನ್ನ ಕಿವಿಯೂ-ಮನಸ್ಸೂ-ವಿಮುಖವಾಗಿದ್ದು ನಿಜ ಕರ್ತವ್ಯಪಾಲನೆಯಲ್ಲಿ ಮನವು ನೆಲೆಗೊಂಡಿರಲಿ ! ಹೇ, ದೀನಬಂಧೋ ! ಮತ್ತೊಂದು ವರವನ್ನು ಅನುಗ್ರಹಿಸು ! ಸತೀತ್ವರಕ್ಷಣೆಗೆ ಅತ್ಯವಶ್ಯವಾದ-ಕುಮಂತ್ರಕುಠಾರಸ್ವರೂಪಗಳಾದ ಧೈರ್ಯ-ಸ್ಥೈರ್ಯ-ಸಾಹಸ-ಕ್ಷಮ-ದ

ಮಾದಿಗುಣಗಳು ನನ್ನಲ್ಲಿ ಬೇರೂರುವಂತೆ ಕೃಪೆಮಾಡು, ಅಷ್ಟುಮಾತ್ರ ಮಾಡು ! ಇಂದಿನ ....

ಸುಶೀಲೆಯ ಸಂಪ್ರಾರ್ಥನೆ, ಇನ್ನೂ ಮುಗಿದಿರಲಿಲ್ಲ. ಅಷ್ಟರಲ್ಲಿ ಅಂಗಳಕ್ಕೆ ಆಗಂತುಕನಾವನೋ ಬಂದು ಹೊರಗೆ ಕಾವಲಿದ್ದ ಮಯೂರಿ ಯನ್ನು ಕುರಿತು ಪೃಚ್ಛಿಸಿದನು —

"ಮಯೂರಿ ನಿಮ್ಮ ಯಜಮಾನಿಯುವರೆಲ್ಲಿ ?"

ಮಯೂರಿ—'ಅವರು ದೇವರ ಸಮುಖದಲ್ಲಿ ಪ್ರಾರ್ಥಿಸುತ್ತಿರುವರು'.

ಆಗಂತುಕನು ದೇವರ ಕಿರುಮನೆಯೊಳಹೊಕ್ಕು, ಸುಶೀಲೆಯ ಮುಂಗಡೆ ಹೋಗಿ ನಿಂತನು.

ಸುಶೀಲೆ—ಗಾಬರಿಯಿಂದ ತಲೆಯೆತ್ತಿನೋಡಿ ಎದ್ದುನಿಂತಳು. ಆಗಂತು ಕನನ್ನು ನೋಡಿದೊಡನೆಯೇ ಇವಳ ಧೈರ್ಯಸ್ಥೈರ್ಯಗಳು ಮರೆಯಾ ದುವು. ಮನವು ಕಳವಳಕ್ಕೀಡಾದುದು. ವಾಕ್ಶಕ್ತಿಲೋಪದಿಂದ ಮಾತಿಲ್ಲದೆ ನಿಂತುಬಿಟ್ಟಳು.

ಆಗಂತುಕ—ನಗುತ್ತ,–'ಏಕೆ ? ಸುಶೀಲೆ ! ನನ್ನನ್ನು ಮರೆತೆಯೊ ? ನಾನಾರು ಗೊತ್ತಿಲ್ಲವೊ ? ಈಗ ನೋಡು ! ನಾನು ನಿನ್ನ ಬಾವ ತಂತ್ರನಾಥನಲ್ಲವೆ ?

ಸುಶೀಲೆ—ನೆನಪಿಲ್ಲದಿಲ್ಲ.

ತಂತ್ರ—ಹಾಗಿದ್ದೂ ಬೆಜ್ಜರಗೊಳ್ಳುವುದೇ ? ನೀನು ಮೊದಲ ಸುಶೀಲೆ ಯಲ್ಲ ! ನಿನ್ನ ಸ್ವಭಾವವು ಈಚೆಗೆ ಬಲು ಬದಲಾಯಿಸಿಹೋಗಿದೆ. ಪೀಗಾಯ್ತೇಕೆ ?

ಸುಶೀಲೆ—ಅದು ಆಗತಕ್ಕುದೇ ಸಹಜ; ಆದಿರಲಿ. ಮನೆಯಲ್ಲಿ ಎಲ್ಲರೂ ಸೌಖ್ಯವಷ್ಟೆ ?

ತಂತ್ರ—ಎಲ್ಲರೂ ಸೌಖ್ಯವಾಗಿಯೇ ಇರುವರು. ಆದರೆ ನಿಮ್ಮ ಅಕ್ಕನು ಸತ್ತಂದಿನಿಂದ ಒಬ್ಬನು ಮಾತ್ರವೇ ಅಸುಖಿ !

ಸುಶೀಲೆ—ಕಯ್ಯೂಸೊ ?

ತಂತ್ರ—ಕೂಸಿಗೆ ಅಸೌಖ್ಯವಾಗುವ ಕಾರಣವಿಲ್ಲ. ಈಗ ಅಸುಖಿಯಾದ ವನು ನಾನೊಬ್ಬನೇ !

ಸುಶೀಲೆ—ಅದೇನು ? ಸ್ವಲ್ಪಕಾಲದ ದುಃಖ. ಹೊಸಹೆಂಡತಿ ಮನೆಗೆ ಬಂದರೆ ಅವಳಲ್ಲಿ ಅನುರಾಗ ಹೆಚ್ಚಿದಂತೆಲ್ಲಾ ಹಳೆಯ ಹೆಂಡತಿಯ ನೆನಪು ಮರೆಯುವುದೇ ಲೋಕಸ್ವಭಾವವಾಗಿದೆ. ನಮ್ಮ ಅಕ್ಕನು ಸತ್ತುದು, ಶೋಕವನ್ನುಂಟುಮಾಡತಕ್ಕ ವಿಚಾರವಾಗಿದ್ದರೂ, ಅವಳು ತನ್ನ ಪತಿಯಿದಿರೆ ಮೃತಿಹೊಂದಿದುದು ಶ್ರೇಯಸ್ಕರವೆಂದೇ ನಾನು ನಂಬಿರುವೆನು.

ತಂತ್ರ—ಆದಿರಲಿ, ಸುಶೀಲೆ! ನಾನು ಇದೇ ಊರಲ್ಲೇ ಇದ್ದರೂ ಅಡಿಗ ಡಿಗೆ ಬಂದು ನಿನ್ನನ್ನು ನೋಡಲಾಗಲಿಲ್ಲವೆಂದು ಚಿನ್ತಿಸುವೆನು· ಬರಬೇಕೆಂಬ ಆಶೆ. ಆದರೆ—ಹೇಗೆ ಬರಲಿ ? ಇನ್ನುಮುಂದೆ ಹೇಗಾದರೂ ತಪ್ಪದೆ ಬರುತ್ತೇನೆ.

ಸುಶೀಲೆ—ಬಾವ ! ನೀವು ಬರಲಿಲ್ಲವೆಂಬ ಅಸಮಾಧಾನವಾರಿಗೂ ಇಲ್ಲ. ಬಾರದೇ ಇದ್ದರೂ, ಆಕ್ಷೇಪಿಸುವವರಾರೂ ಇಲ್ಲ. ನಿಮ್ಮ ಅನು ಕೂಲ್ಯವು ಹೇಗೋ ಹಾಗೆ ಮಾಡಬಹುದು. ಮನೆಗೆಲಸವನ್ನು ಬಿಟ್ಟುಬರಬೇಕಾದ ಅವಶ್ಯವೇನು ? ಇಲ್ಲದ ಚಿನ್ತೆಗಳನ್ನು ಹತ್ತಿ ಸಿಕೊಳ್ಳುವುದು ಸರಿಯಾದುದಲ್ಲ.

ತಂತ್ರ—ಅಹುದು, ನಿಜ ! ನಾನು ಸುಮ್ಮನೆ ಚಿನ್ತಿಸುವುದೊಂದೆ! ನಿನಗೆ ಬೇರೆ ನನ್ನಲ್ಲಿ ಪ್ರೇಮವಿಲ್ಲ ? ನನ್ನ ಹೆಂಡತಿಯಿದ್ದಾಗ ನಿನಗೆ ನನ್ನಲ್ಲಿ ಎಷ್ಟು ಮರುಕವಿತ್ತು ? ಆಗ ನೀನು ಎಷ್ಟೋ ಬಗೆಯಿಂದ ನನ್ನ ನ್ನು ಪ್ರೀತಿಸುತ್ತಿದ್ದೆ, ಈಗ ಅವೆಲ್ಲವೂ ಎಲ್ಲಿ ?

ಸುಶೀಲೆ—ಹೀಗೆ ಹೇಳಲಾಗದು. ಆಗಿನ ಮಮತೆಯೇ ಈಗಲೂ ಇದೆ ಯೆಂದು ಧೈರ್ಯವಾಗಿ ಹೇಳಬಲ್ಲೆನು. ಆಗಳಿನ ಭ್ರಾತೃಭಾವವೇ ಈಗಲೂ ನನ್ನ ಹೃದಯದಲ್ಲಿ ದೃಢವಾಗಿರುವುದು.

ತಂತ್ರ—ಸುಶೀಲೆ ! ಇದೇನು ? ಇಂದು ನಿನ್ನ ಮುಖವು ಇಷ್ಟು ಬಾಡಿ ಹೋಗಿರುವುದು ?

ಸುಶೀಲೆ—ಅಂತಹದೇನೂ ಇಲ್ಲ.

ತಂತ್ರ—ನನಗೆ ಗೊತ್ತಿದೆ. ಸುಶೀಲೆ ! ಬಲ್ಲೆನು. ಅದಕ್ಕೆಂದೇ ನಾನಿಲ್ಲಿಗೆ ಬಂದೆನು. ಇಂದು ನೀನು ಈ ವರೆಗೂ ಉಪವಾಸವೆಂಬುದನ್ನು ತಿಳಿದೇ ಇಲ್ಲಿಗೆ ನಾನು ಬರಬೇಕಾಯ್ತು.

ಸುಶೀಲೆ—ನಾನು ಉಪವಾಸದಿಂದ ಇದ್ದರೇನು ? ಅದು ತಮ್ಮ ಆಗಮನಕ್ಕೆ ಹೇಗೆ ಹೇತುವಾದೀತು ?

ತಂತ್ರ—ಅದೇ ಹೇತುವಲ್ಲದಿದ್ದರೂ, ನಾನು ನನ್ನ ಕರ್ತವ್ಯವನ್ನು ನೆರವೇರಿಸಲಿಕ್ಕೂ, ನಿನ್ನ ಗಂಡನ ನಡತೆಯನ್ನು ತಿಳಿಸಲಿಕ್ಕೂ ಬಂದೆನು. ಸುಶೀಲೆ ! ಹೇಗೂ ನನ್ನ ಮನಸ್ಸಿಗೆ ಸಮಾಧಾನವಿಲ್ಲ.

ಸುಶೀಲೆ—ಅದೇಕೆ ?

ತಂತ್ರ—ದುರ್ವೃತ್ತಿ ಹೆಚ್ಚುತ್ತಿದೆ. ಯಾವಾಗಲೂ,—..........

ಸುಶೀಲೆ—ಅಷ್ಟಕ್ಕೇ ತಡೆದು,–‹ಬಾವ ! ಇನ್ನು ಸಾಕು ! ಹೊತ್ತುಮೀರುತ್ತಿದೆ. ನಿಮ್ಮ ಮನೆಯಲ್ಲಿ ಜನರು ಊಟಕ್ಕೆ ಕಾದಿರಬಹುದು. ಇನ್ನು ಹೊರಡಿರಿ. ಗಂಡಸರಾರೂ ಮನೆಯಲ್ಲಿಲ್ಲದ ವೇಳೆ-ಅದರಲ್ಲಿಯೂ ಇಷ್ಟು ಹೊತ್ತಿನಲ್ಲಿ ನೀವು ಬಂದುದೇ ಸರಿಯಲ್ಲ. ಅದು ಸಾಲದೆ ಇಂತಹ ಮಾತುಗಳನ್ನಾಡುವುದು ಸರ್ವಥಾ ಸರಿಯಾಗಿ ಕಾಣುತ್ತಿಲ್ಲ. ಅವರು ಬಂದ ಬಳಿಕ ಅವರಲ್ಲಿಯೇ ಅವರ ದುರ್ಗುಣಗಳನ್ನು ತೋರಿಸಬಹುದು. ಈಗ ಯಾವುದೂ ಹೇಳತಕ್ಕುದಿಲ್ಲ.

ತಂತ್ರ—ಭಲೆ ! ಸುಶೀಲೆ ಭಲೆ !! ಬಲು ಚೆನ್ನಾಗಿ ಹೇಳಿದೆ. ನಿನ್ನನ್ನು ಬಿಟ್ಟು ನಿನ್ನ ಗಂಡನೇ ನನಗೆ ಬೇಕಾದವನೋ ? ಅವನಲ್ಲಿ ನನಗೆ ನಿಜವಾದ ಅಭಿಮಾನವುಂಟೆಂದು ತಿಳಿದೆಯೊ ? ನಿನ್ನ ತಂದೆ, ಅವನ ಆಸ್ತಿಗೆ ಮರುಳಾಗಿ ನ್ಯಾಯವಾಗಿಯೂ ನನಗೆ ಸಲ್ಲಬೇಕಾಗಿದ್ದ

ನಿನ್ನನ್ನು ಅವನಿಗೆ ಮದುವೆಮಾಡಿಕೊಟ್ಟಮಾತ್ರಕ್ಕೇ ನನಗೆ ನಿನ್ನಲ್ಲಿರುವ ಅಭಿಮಾನವು ತಪ್ಪುವುದೆಂದಿರುವೆಯೊ ? ನೀನಿನ್ನೂ ಮುಗ್ಧೆ ! ಆವುದನ್ನೂ ತಿಳಿದವಳಾಗಿಲ್ಲ. ನಿನ್ನ ಗಂಡನಿಗೆ ನಿನ್ನಲ್ಲಿ ಸ್ವಲ್ಪವಾದರೂ ಪ್ರೇಮವಿರುವುದೆ ? ನೋಡು ! ಐಶ್ವರ್ಯಕ್ಕೆ ಕೊರತೆಯಿಲ್ಲ. ಎಷ್ಟಿದ್ದರೂ ನಿನ್ನ ಮಯ್ಮೇಲೆ ಒಂದು ಪಾವು ಭಂಗಾರವನ್ನಾದರೂಹಾಕಿಲ್ಲ. ನಿನಗೆ ಸವಿಯೂಟಕ್ಕಾದರೂ ಅವಕಾಶವಿರುವುದೋ ಹೇಗೆ ?.........ಈಗ ನೋಡು ಇಷ್ಟು ಹೊತ್ತಾದರೂ ಇನ್ನೂ ಮನೆಗೆ ಬಂದಿಲ್ಲ. ಅಲ್ಲಿ ಅವನು ಉಂಡು ನಲಿಯುತ್ತಿರುವನು. ಇಲ್ಲಿ ನೀನು ಹಸಿದು ಸಾಯುತ್ತಿರುವೆ ? ಹಣವನ್ನೆಲ್ಲಾ ಹಾಳುಮಾಡುತ್ತಿರುವನು. ಸುಶೀಲೆ! ನಿನ್ನೀ ಸೌಂದರ್ಯ ......

ಸುಶೀಲೆ—ಕೋಪವನ್ನು ತಡೆಯಲಾರದೆ ತಲೆಯೆತ್ತಿ ದರ್ಪಿತಸ್ವರದಿಂದ–‘ ಮಹಾಶಯ ! ಕ್ಷಮಿಸಿರಿ ! ನಿಮ್ಮ ಅತ್ಯುಕ್ತಿ ನನಗೆ ಬೇಕಾಗಿಲ್ಲ. ತಮ್ಮ ಉಪದೇಶಕ್ಕಾಗಿ ಇದೆ ಇದೆ ನೂರಾರು ವಂದನೆಗಳು ಇನ್ನು ಹೊರಡಿರಿ.''

ತಂತ್ರ—ಗರ್ವದಿಂದ ಪರಿಹಾಸವಾಗಿ ನಗುತ್ತೆ,–ಮುಗ್ಧೆ ! ಅನ್ಯಾಯವಾಗಿ ಕೆಟ್ಟುಹೋಗುವೆ. ನವಯೌವನ ರೂಪಲಾವಣ್ಯಾದಿಗಳನ್ನು ಈಗಳೇ ಸರಿಯಾದ ದಾರಿಯಲ್ಲಿ ವಿನಿಯೋಗಿಸು. ನಿನ್ನ ಗಂಡನು ಅದರ ಬೆಲೆಯನ್ನು ತಿಳಿದವನಾಗಿಲ್ಲ. ಇನ್ನಾದರೂ ನನ್ನ ಮಾತನ್ನು ಕೇಳಿ ನನ್ನೊಡನೆ ಹೊರಡು. ನಿನಗೆ ಸ್ವರ್ಗಸುಖವನ್ನೇ ಉಂಟು ಮಾಡುವೆನಲ್ಲದೆ ನಾನೂ ನಿನ್ನ ದಾಸಾನುದಾಸನಾಗಿರುವೆನು. ನಿನಗೆಂದೆಂದಿಗೂ ಯಾವಭಾಗದಲ್ಲಿಯೂ ಕೊರತೆಯಾಗದಂತೆ ನಡೆದುಕೊಳ್ಳುವೆನು ವಿಳಂಬಿಸಬೇಡ ....

ಸುಶೀಲೆಗೆ ಕೋಪವು ಮಿತಿಮೀರಿತು. ಶೋಕದಿಂದ ಕಣ್ಣುಗಳಲ್ಲಿ ನೀರುತುಂಬಿತು. ಆಗಳೇ ತಂತ್ರನಾಥನನ್ನು ಹೊರಗೆ ಓಡಿಸಬೇಕೆಂದು

ತೋರಿತು. ಆದರೆ ಒಬ್ಬರೂ ಇರಲಿಲ್ಲ. ಉಪಾಯಾಂತರವಿಲ್ಲದೆ ಕಡೆಗೆ ವಿಕೃತಸ್ವರದಿಂದ—"ಹುಚ್ಚ! ಹೊರಡು, ಇಲ್ಲಿ ನಿಲ್ಲಬೇಡ ! ನಿನ್ನ ಭೋಗ ಭಾಗ್ಯಾದಿಗಳು ನನಗೆ ಬೇಡ. ಪಾತಿವ್ರತ್ಯಕ್ಕೆ ಮಿಗಿಲಾದ ವಸ್ತು ಈ ಜಗತ್ತಿನಲ್ಲೇ ಮತ್ತಾವುದೂ ಇಲ್ಲ. ಚೆನ್ನಾಗಿ ತಿಳಿದಿರು. ಮೂರ್ಖ ! ರಾವಣನಿಗೆ ಐಶ್ವರ್ಯ-ಅಧಿಕಾರಾದಿಗಳು ಹೇರಳವಾಗಿತ್ತೆಂಬುದು ಸೀತೆಗೆ ತಿಳಿದೇ ಇದ್ದುದು ; ಆದರೂ ಅವಳು ಅವುಗಳೆಲ್ಲವನ್ನೂ ಹುಲ್ಲಿಗೂ ಕಡೆಯಾಗಿ ಭಾವಿಸಿ, ತನ್ನ ನಿಶ್ಚಲಮನೋವೃತ್ತಿಗೆ ತಕ್ಕ ಮಹತ್ಫಲವನ್ನೇ ಹೊಂದಿದಳಲ್ಲವೆ ? ಆ ದೇವಿಯ ದಾಸಿಯೇ ನಾನೆಂದು ತಿಳಿ. ಈ ಶರೀರ-ಮನಸ್ಸು-ಐಶ್ವರ್ಯಗಳೇ ಮೊದಲಾದ ಸರ್ವಸ್ವವನ್ನೂ ನನ್ನ ಸ್ವಾಮಿಗೆ ಸಮರ್ಪಿಸಿರುವೆನು. ಆತನ ಅನುಗ್ರಹ ಬಲದಿಂದ ಈ ಶರೀರವು ನಷ್ಟವಾದರೂ ಆತನಲ್ಲಿ ಸೇರಿರುವ ನನ್ನ ಮನಸ್ಸು ಮಾತ್ರ ಚಲಿಸಲಾರದೆಂದು ನಂಬು ! ನೀನೀ ಪರಸ್ವಾಪಕ್ಕೆರಗುವುದು ಸರಿಯಲ್ಲ. ನಡೆ !

ತಂತ್ರ—ಕಾತರಸ್ವರದಿಂದ,—'ಬೇಡ, ಸುಶೀಲೆ ! ಹೀಗೆ ನಿಷ್ಠುರೆಯಾಗಬೇಡ !! ನಿನ್ನ ಸುಖವನ್ನೇ ಕೋರುತ್ತಿರುವವನಲ್ಲಿ ಈ ಬಗೆಯಾದ ಬಿರುನುಡಿ ತಕ್ಕುದಲ್ಲ. ಸುಮ್ಮನೆ ಹಟಮಾಡಬೇಡ.

ಸುಶೀಲೆ—ಸುಮ್ಮನೇಕೆ ದುರ್ಲಭವಸ್ತುವನ್ನು ಬಯಸುವೆ ? ಈ ದುರಾಶೆಯನ್ನು ಬಿಟ್ಟುಬಿಡು.

ತಂತ್ರ—ಹಾಗೆಂದು ಹೇಳುವೆಯಲ್ಲವೆ ? ಸುಶೀಲೆ ! ನೀನಾಗಿ ನನ್ನ ಮಾತನ್ನು ನಡೆಯಿಸಿಕೊಡದಿದ್ದರೆ ನಾನು ಬಲವಂತದಿಂದಾದರೂ ನನ್ನಿಚ್ಛಾಪೂರ್ತಿಗಾಗಿ ಇಂದಿಲ್ಲದಿದ್ದರೆ ಎಂದಾದರೊಂದುದಿನ ನಿನ್ನನ್ನು ಭ್ರಷ್ಟಳನ್ನಾಗಿ ಮಾಡದಿರಲಾರೆನು. ಇನ್ನಾದರೂ ನನ್ನ ಅನಂತ ....

ಸುಶೀಲೆ—ಪಾಪಿ ! ನಿನ್ನೀ ಉನ್ಮತ್ತಪ್ರಲಾಪಕ್ಕೆ ಧಿಕ್ಕಾರ ! ಮತ್ತೆ ಈ ಮಾತೆತ್ತದೆ ಅಲ್ಲಿಂದ ಹಾಗೆಯೇ ಹೊರಟುಹೋಗು. ನನ್ನ ಸುಖ

ಚಿಂತೆ ನನ್ನ ಸ್ವಾಮಿಗೆ ಮಾತ್ರವೇ! ನನ್ನ ಅಭ್ಯುದಯಕ್ಕೆ ಕಾರಣವಾದರೂ ಸತೀತ್ವವೊಂದೇ! ನೀನು ನನ್ನನ್ನು ಎಂದಿಗೂ ಮುಟ್ಟಲಾರೆ. ಭ್ರಷ್ಟ! ಹೆಂಗಸು ಎಂದಿನವರೆಗೆ ತನ್ನ ಸತೀತ್ವವನ್ನು ರಕ್ಷಿಸಿಕೊಂಡಿರುವಳೋ ಅಂದಿನವರೆಗೆ ಅವಳು ಅಬಲೆ, ಆದರೆ ನಿನ್ನಂತವರ ವಿಚಾರದಲ್ಲಿ ಅವಳು ಅತಿಬಲೆಯೇ! ? ಸುಳ್ಳಲ್ಲ. ಅವಳು ತನ್ನ ಪಾತಿವ್ರತ್ಯವನ್ನು ಕಡೆಗಣಿಸಿದವಳಾದರೆ, ಆಗ ಅವಳಂತಹ ನೀಚವಸ್ತುವೊಂದೂ ಇರುವುದಿಲ್ಲ. ಇದನ್ನು ಚೆನ್ನಾಗಿ ತಿಳಿದಿರು. ಹೋಗು! ನಿನ್ನ ಆಶೆಯಲ್ಲಿ ಎಳ್ಳಷ್ಟಾದರೂ ಈ ಜನ್ಮದಲ್ಲಿ ಮಾತ್ರವಲ್ಲ; ಎಂದೆಂದಿಗೂ ಕಯ್ಗೂಡಲಾರದೆಂದು ತಿಳಿ.

ತಂತ್ರ—ಹಾಗೋ ನಿಜವೋ ? ನಾನೊಬ್ಬನೇ ಹೊರಡಲೊ ? ನೀನು...

ಸುಶೀಲೆ—ಚಿಃ! ....ನಿಲ್ಲಬೇಡ, ನನ್ನ ಸ್ವಾಮಿಯ ಅನುಗ್ರಹವು ಪೂರ್ಣವಾಗಿರುವವರೆಗೂ, ಮತ್ತೂ ಗುರುಜನರ ಉಪದೇಶಾಮೃತವು ನನ್ನ ಹೃದಯದಲ್ಲಿ ನೆಲೆಗೊಂಡಿರುವವರೆಗೂ ಆತ್ಮದ್ರೋಹ, ಗುರುದ್ರೋಹ, ಪತಿದ್ರೋಹಾದಿಗಳಿಗೆಂದಿಗೂ ನಾನು ಎಡೆಕೊಡಲಾರೆನು. ಹೊರಟುಹೋಗು.

ತಂತ್ರ—ಹಾಗಾದರೆ ನೀನು ಸಾಯುವೆ! ನಿನಗಾಗಿ ನಿನ್ನ ಗಂಡನೂ ಸಾಯುವನು. ಇದು ನಿಜವು.

ಸುಶೀಲೆ—ಸಾಯುವೆನು ; ನನ್ನ ಪತಿಯ ಸಂಗಡ ನಾನೂ ಸಾಯುವುದೆಂದರೆ ಸಂತೋಷವೇ ಸರಿ. ಹಗಲನ್ನು ಬಿಟ್ಟು ಇರುಳೂ, ನೆರಳನ್ನು ಬಿಟ್ಟು ವಸ್ತುವೂ ಹೇಗೆ ಇರಲಾರದೊ, ಹಾಗೆಯೇ ಹುಟ್ಟು (ಜನ್ಮ) ಸಾವನ್ನು ಬಿಟ್ಟಿರಲಾರದು. ನನ್ನ ಪತಿಯ ಸಾವಿಗೆ ನೀನು ಕಾರಣಭೂತನಾದರೆ ಇಹಪರಗಳಲ್ಲಿ ಎಂತಹ ಯಾತನೆಗಳಿಗೆ ಗುರಿಯಾಗುವೆಯೆಂಬುದನ್ನು ಕ್ಷಣಕಾಲ ಭಾವಿಸಿ ನೋಡು? ಇನ್ನು ಹೇಳಲಾರೆನು. ಇಲ್ಲಿಂದ ಮೊದಲು ಹೊರಡು.

ತಂತ್ರ—ಕಯ್ಬೆರಲುಗಳನ್ನು ಕಚ್ಚಿಕೊಳ್ಳುತ್ತೆ ಕರ್ಕಶಸ್ವರದಿಂದ-'ಪಾಪಿ! ಚಂಡಿ !! ಹೀಗೆ ಹೇಳಿದೆಯಲ್ಲವೆ ? ಇರಲಿ. ಇನ್ನು ಒಂದು ವಾರದೊಳಗಾಗಿಯೇ ನಿನ್ನೀ ಕಾಠಿಣ್ಯಕ್ಕೆ ತಕ್ಕ ಪ್ರತೀಕಾರವನ್ನು ಹೊಂದುವೆ!'' ಎಂದುಸಿರಿ ಅಲ್ಲಿ ನಿಲ್ಲದೆ ಉನ್ಮತ್ತನಂತೆ ಹೊರಟು ಹೋದನು.

ಪಾಪ! ಸುಶೀಲೆಗೆ ಚಿನ್ತೆ,-ಅನುತಾಪ,-ಕಳವಳಗಳು ಮಿತಿಮೀರಿದ್ದುವು. ಚದರಿರುವ ಧೈರ್ಯವನ್ನು ಮತ್ತೆ ಹೊಂದಲು ಅವಕಾಶವಿಲ್ಲ. ಮುಂದೆ ಮಾಡುವುದೇನೆಂಬುದನ್ನರಿಯಲಾರದೆ ಕಾತರಿಸಿ, ಕಣ್ಣೀರುಸುರಿಸುತ್ತೆ ಮತ್ತೆ ದೇವತಾಪ್ರಾರ್ಥನೆಗೆ ತೊಡಗಿ—ದೇವರ ಜಗುಲಿಯ ಮೇಲೆಯೇ ತಲೆಯಿಟ್ಟು ಮಲಗಿ ಪರವಶಳಾದಳು.

ತೃತೀಯ ಪರಿಚ್ಛೇದ.

(ಕ್ರೋಧಾನಲ)

ರಾತ್ರಿ ಹನ್ನೊಂದುಗಂಟೆ ಹೊಡೆದುಹೋಗಿದ್ದುದು. ಶಾನ್ತಿದೇವಿ, ತನ್ನ ಜಯಪತಾಕೆಯನ್ನೆತ್ತಿಹಿಡಿದು, ರಾಜ್ಯಭಾರವನ್ನು ನಿರ್ವಹಿಸುತ್ತಿದ್ದಳು. ತೊಟ್ಟಿಯಲ್ಲಿ ಮಯೂರಿಯೊಬ್ಬಳೇ ತೂಕಡಿಸುತ್ತೆ ಕುಳಿತಿದ್ದಳು. ಬೀದಿಯಬಾಗಿಲು ಹಾಕಲ್ಪಟ್ಟಿದ್ದುದು. ಸುಶೀಲೆಗೆ ಇನ್ನೂ ಬಾಹ್ಯ ವ್ಯಾಪಾರದ ಸ್ಮೃತಿಯೇ ಉಂಟಾಗಿರಲಿಲ್ಲ. ತೂಕಡಿಸುತ್ತಿದ್ದ ಮಯೂರಿಯ ಕಿವಿಯನ್ನು ಕೊರೆವಂತೆ ಮನೆಯ ಯಜಮಾನನಾದ ವಿನೋದನು ಬೀದಿಯ ಬಾಗಿಲನ್ನು ತಟ್ಟಿ ಕೂಗಿದ ಶಬ್ದವು ಕೇಳಬಂದುದು. ಮಯೂರಿಯು ಕೂಡಲೆ ಎದ್ದುಹೋಗಿ ಬಾಗಿಲನ್ನು ತೆರೆದು ತಾನು ಮೊದಲು ಕುಳಿತಿದ್ದೆಡೆಗೇ ಬಂದು ನಿಂತಳು.

ವಿನೋದ:—'ಮಯೂರಿ! ಯಜಮಾನಿಯೆಲ್ಲಿ?'

ಮಯೂರಿ:—ದೇವರಮನೆಯಲ್ಲಿ—

ವಿನೋದನು ದೇವರಮನೆಯೊಳಹೊಕ್ಕು ನೋಡಿದನು. ಸುಶೀಲೆ ವಿಸ್ಮೃತಿಯಲ್ಲಿದ್ದುದರಿಂದ ತಿಳಿಯಲಿಲ್ಲ.—'ಸಾಕು; ಏಳು-ಏಳು!' ಎಂದೆರಡುಬಾರಿ ಕೂಗಿದನು. ಆದರೂ ಸುಶೀಲೆಗೆ ಎಚ್ಚರವಾಗಲಿಲ್ಲ. ವಿನೋದನು ಕೋಪಗೊಂಡು,—'ಈ ಹಾಳು ಪೈಶಾಚವು ಇನ್ನೂ ಸಾಯಲಿಲ್ಲ.' ಎಂದು ಹೇಳಿ ಕಾಲಿಂದೆ ಒದ್ದನು.

ಸುಶೀಲೆಗೆ ಎಚ್ಚರವಾಯ್ತು,—ಚಕಿತೆಯಾಗಿ—'ಯಾರದು?' ಎಂದು ಕೂಗಿದಳು.

ವಿನೋದ:—ಕರ್ಕಶಸ್ವರದಿಂದ—ನಾನು, ನಿನ್ನ ಭಾಗದ ಮೃತ್ಯು!

ಸುಶೀಲೆ:—ಕುತೂಹಲದಿಂದ ತಲೆಯೆತ್ತಿ ನೋಡಿದಳು. ಸಾಕಾರಬ್ರಹ್ಮ ಸ್ವರೂಪನಾದ ಪತಿಯ ಸಾಕ್ಷಾತ್ಕಾರ! ಆನಂದಕ್ಕೆ ಪಾರವಿಲ್ಲ; ಅನುತಾಪಕ್ಕೆ ಅಂತವಿಲ್ಲ; ವಂದಿಸಿದಳು. ಅನುಕಂಪಿತಸ್ವರದಿಂದ ಹೇಳಿದಳು:—ಸ್ವಾಮಿನ್! ಇಂದೇಕೆ ಇಷ್ಟು ಹೊತ್ತಾಯ್ತು?''

ವಿನೋ:—ಆದಿರಲಿ; ದೇವರಮುಂದೆ ಮಹಾತಪಸ್ಸನ್ನು ಮಾಡುತ್ತಿದ್ದೆ ಯಲ್ಲವೆ? ಏನೇನುವರಗಳನ್ನು ಬೇಡಿಕೊಂಡೆ? ನಾನು ಸಾಯ ಬೇಕೆಂದೊ?

ಸುಶೀಲೆ:—ಅಂತಹ ವರವೇನೂ ನನಗೆ ಬೇಕಾಗಿಲ್ಲ. ನಾನು ಕೋರಿದ ವರವು ನನಗೆ ದೊರೆತಿದೆ.

ವಿನೋ:—ಏನದು?

ಸುಶೀಲೆ:—ತಮ್ಮ ಆಗಮನವೇ!

ವಿನೋ:—ಹೇಗೆ? ನಾನು ಬಾರದಿದ್ದರೆಯೇ ನಿನಗೆ ಸಂತೋಷವಲ್ಲವೆ?

ಸುಶೀಲೆ:—ತಮ್ಮ ಪಾದಸೇವೆಯೊಂದೇ ನನಗೆ ಬೇಕಾದುದಲ್ಲದೆ ಮತ್ತಾ ವುದೂ ಬೇಕಾಗಿರದು. ತಮ್ಮ ಮೇಲೆ ಹೊರೆಯಿಸುತ್ತಿರುವ ಅಪ

ಲಾಪಿಗಳ ಅಲ್ಲದಸಲ್ಲದ ಅಪನಿಂದೆಯನ್ನು ದೂರಮಾಡಬೇಕೆಂಬುದೇ ಭಗವಂತನಲ್ಲಿ ಪ್ರಾರ್ಥನೆ.

ವಿನೋ:—ಗರ್ವದಿಂದ ನಕ್ಕು,—ನಿನ್ನ ತಂತ್ರಗಳನ್ನೂ ಈ ಕುಟಿಲ ನಟನೆಯನ್ನೂ ಬಲ್ಲೆನು. ಇಂತಹ ಚಾಕಚಕ್ಯವೂ, ಮರುಳುಮಾಡುವ ಮೋಹಿನೀವಿದ್ಯೆಯೂ, ನಿನ್ನಂತಹ ಸ್ತ್ರೀಯರೊಡನೆಯೇ ಹುಟ್ಟಿತೆಂಬುದನ್ನೂ ಚೆನ್ನಾಗಿ ಬಲ್ಲೆನು.

ಸುಶೀಲೆ:—ನಾಥ! ತಮ್ಮ ಅನುಗ್ರಹವಿರುವವರೆಗೂ, ನಾನು ಅಂತಹ ದೋಷಕ್ಕೆ ಎಡೆಗೊಡಲಾರೆನು. ತಾವು ಹೇಗೆ ಭಾವಿಸಿದರೂ ನನಗೆ ಸಂತೋಷವೇ!

ವಿನೋ:—ಆಗಲಿ; ನಿಜವನ್ನು ಹೇಳು?

ಸುಶೀಲೆ:—ನಾನು ಹೇಳತಕ್ಕುದೇನು? ನನ್ನನ್ನು ಕೇಳದೆಯೇ ನೀವು ನನ್ನ ಮನೋಭಾವವನ್ನು ತಿಳಿಯುತ್ತಿದ್ದಿರಿ; ನನ್ನ ಕೋರಿಕೆಯನ್ನೂ ನೆರವೇರಿಸುತ್ತಿದ್ದಿರಿ. ಈಗ ನನ್ನ ಮಾತುಗಳಲ್ಲಿ ನಂಬುಗೆಯೇ ಇಲ್ಲದಿದ್ದರೆ, ನಾನೇನುಮಾಡಲಿ?

ವಿನೋ:—ಸ್ತ್ರೀಯರೂ, ಅವರ ಮಾತುಗಳೂ ಎಂದಿಗೂ ನಂಬುಗೆಗೆ ಅರ್ಹವಾದವುಗಳಲ್ಲ. ಸ್ತ್ರೀಯರ ಸ್ವಭಾವವಾದ ಚಪಲಚಿತ್ತವು ಕ್ಷಣಕ್ಕೆ ಅರವತ್ತುಬಗೆಯಾಗಿ ತಿರುಗುವುದು! ಎಲ್ಲರಲ್ಲಿಯೂ, ವಂಚನೆಯೇ! ಅವರಿಗೆ ಸುಳ್ಳೆಂಬುದೇ ಕುಲದೇವತೆ!

ಸುಶೀಲೆ:—ನಾಥ! ನಾನೆಂದಿಗೂ ಸುಳ್ಳಾಡುವವಳಲ್ಲ. ಸ್ತ್ರೀಯರಲ್ಲಿ ಯಾರಾದರೂ, ಕೆಲವರು ಸುಳ್ಳನ್ನು ಹೇಳಬಹುದು. ಆದ ಮಾತ್ರಕ್ಕೆ ಸ್ತ್ರೀ ಜಾತಿಗೇ ಕಲಂಕವನ್ನು ಹೊರೆಯಿಸುವುದು ಸರಿಯಲ್ಲ! ಸದಾಚಾರಸಂಪನ್ನೆಯಾಗಿದ್ದ ನಿಮ್ಮ ತಾಯಿಯ ಮೇಲೆ ಆರಾದರೂ ಅನೃತದ ಹೊರೆಯನ್ನು ಹೊರೆಯಿಸುತ್ತಿದ್ದರೆ ನೋಡಿ ಸುಮ್ಮನಿರಲಾದೀತೆ? ಸತ್ಯಾತ್ಮರಲ್ಲಿ ದೋಷವನ್ನಾರೋಪಿಸುವುದು ತಕ್ಕುದಲ್ಲವೆಂದು ಹೇಳಬೇಕೆ! ಇದೇಕೆ ಶಂಕೆ?

ವಿನೋ:—ನಿನ್ನ ವೇದಾಂತಗಳನ್ನು ಕೇಳಲಿಲ್ಲ. ನೀನು ಮಹಾ ಸಾಧ್ವಿ! ಆದಿರಲಿ. ಮಧ್ಯಾಹ್ನದಲ್ಲಿ ಮನೆಗೆ ಆರಾರು ಬಂದಿದ್ದರು? ಏನೇನು ನಡೆಯಿತು? ಯಾರಾರು ಏನೇನನ್ನು ಹೇಳಿದರು? ಎಲ್ಲವನ್ನೂ ಹೇಳು.

ಸುಶೀಲೆ:—ಮನೆಗೆಲಸಗಳೆಲ್ಲವನ್ನೂ ಮುಗಿಸಿ, ತಮ್ಮ ಬರುವಿಕೆಯನ್ನಿದಿರು ನೋಡುತ್ತೆ, ಓದುತ್ತಿದ್ದೆನು. ನೆರೆಮನೆಯ ಗಿರಿಯಮ್ಮನು ಬಂದಿದ್ದಳು. ಅವಳು ಹೊರಟುಹೋದಬಳಿಕ ತಂತ್ರನಾಥನೂ ಬಂದಿದ್ದನು. ನನ್ನ ಗ್ರಹಚಾರವಶದಿಂದ ಅವರೇನೇನನ್ನೋ ಕೆಲವು ಅಪ್ರಿಯಮಾತುಗಳನ್ನಾಡಿ ನನ್ನಿಂದ ಅವಮಾನಿತರಾಗಿ ಹೊರಟು ಹೋದರು.

ವಿನೋ:—ಅದೆಂತಹ ಅಪ್ರಿಯವಾದ ಮಾತುಗಳು?

ಸುಶೀಲೆ:—ಆ ಮಾತುಗಳು, ನೆನೆಯಿಸಿಕೊಳ್ಳುವುದಕ್ಕೂ ಯೋಗ್ಯವಲ್ಲ!

ವಿನೋ:—ನನ್ನಲ್ಲಿಯೂ ಮರೆಮಾಚುವುದನ್ನು ಬಿಡುವುದಿಲ್ಲವೆ?

ಸುಶೀಲೆ:—ಮರೆಮಾಚುವುದಲ್ಲ. ಅವರ ಮಾತುಗಳು ತಮ್ಮ ಅನಿಷ್ಟವನ್ನೇ ಕೋರತಕ್ಕವುಗಳಾಗಿವೆ. ಆದನ್ನು ಹೇಗೂ ನಾನು ಹೇಳಲಾರೆನು. ಇಷ್ಟಕ್ಕೇ ಬೇರೆಯಾಗಿ ಬಗೆಯದೆ ಕ್ಷಮಿಸಬೇಕು! ಅವೆಲ್ಲವೂ ಅಪನಿಂದೆ—

ವಿನೋ:—ಏನು? ನನ್ನಮೇಲಿನ ಅಪನಿಂದೆಯೆ? ನಿನ್ನ ಬಾವನು ನನ್ನನ್ನು ನಿಜವಾಗಿ ನಿಂದಿಸಿದನೆ? ಛೀ! ಇಂದು ನಿನ್ನ ಅಭಿಸಂಧಾನವು ತಿಳಿದುಬಂದಿದೆ. ಏಕೆ ಈ ಸುಳ್ಳು? ಮಾಡು! ನಿನ್ನ ಇಷ್ಟವಿದ್ದಂತೆ ಮಾಡು!! ನಾನು ಕಾರ್ಯಗೌರವದಿಂದ ಮನೆಗೆಬರಲು ತಡವಾದರೆ, ಹಸಿದಿರಬೇಡವೆಂದು ನಿನಗೆ ಎಷ್ಟುಸಾರಿ ಹೇಳಿಲ್ಲ? ಆದರೂ ನೀನು ಊಟಮಾಡದೆ ಸಾಯುತ್ತಿರುವುದೇಕೆ? ಕಂಡವರೊಡನೆ ಮನೆವಾಳ್ತೆಯನ್ನುಕುರಿತು ಮನಬಂದಂತೆ ಹೇಳುವುದೇಕೆ?

ಸುಶೀಲೆ:—ಕಂಪಿತಸ್ವರದಿಂದ,—‘ಪ್ರಭೋ! ತಾವು ನನ್ನಲ್ಲಿಯೂ ಇಂತಹ ಸಂದೇಹವನ್ನು ಕಲ್ಪಿಸಿಕೊಂಡು ತೊಳಲುವಿರೆಂದು ನಾನು ನಂಬಿರಲಿಲ್ಲ. ಬಾಲ್ಯದಿಂದಲೂ, ತಾಯ್ತಂದೆಗಳ ಶಿಕ್ಷಣೆಯಿಂದ ಬೆಳೆದು ಈವರೆಗೂ ತಮ್ಮ ಅನುಗ್ರಹದಿಂದ ಎಷ್ಟೋ ಸುಖವನ್ನನುಭವಿಸಿರುವೆನು. ನಾನು ಅಂತಹ ಅಭಿಸಂಧಾನವನ್ನೇ ಮಾಡಬೇಕಾದುದಿಲ್ಲ! ನೀವೇ ನನ್ನ ಜೀವನಸರ್ವಸ್ವ! ಇತರರು ಆರೋಪಿಸುತ್ತಿರುವ ದೋಷಗಳು ಒಂದುವೇಳೆ ತಮ್ಮಲ್ಲಿದ್ದರೂ, ಅದನ್ನು ನಾನು ನಿಜವಾಗಿರತಕ್ಕವುಗಳೆಂದು ಭಾವಿಸಲಾರೆನು. ತಮ್ಮ ಕ್ಷೇಮಲಾಭವೊಂದಲ್ಲದೆ ಮತ್ತಾವುದೂ ನನಗೆ ಬೇಕಾಗಿಲ್ಲ. ಇನ್ನೇನನ್ನು ಹೇಳಲಿ?—ಸುಶೀಲೆಗೆ ಮುಂದೆ ಮಾತು ಹೊರಡದೆ ಕಣ್ಣುಗಳಲ್ಲಿ ನೀರುತುಂಬಿತು. ಪತಿಯ ಮುಖವನ್ನು ನೋಡಿದಳು.

ವಿನೋ:—ತಲೆದೂಗಿ ಪರಿಹಾಸದಿಂದ ನಗುತ್ತ,—‘ಮಾಯಾವಿನಿ! ‘‘ಅತಿವಿನಯಂ ಧೂರ್ತಲಕ್ಷಣಂ’’ ಎಂಬುದು ಸುಳ್ಳಲ್ಲ. ನಿನ್ನ ಆತ್ಮನು ಕಲುಷಿತನಾಗಿರುವನೆಂದು ನಿರ್ಧರವಾಗಿ ತಿಳಿದೆನು. ನೀನು ನನಗೆ ದ್ರೋಹವನ್ನಾಚರಿಸುತ್ತಿರುವೆಯೆಂಬುದನ್ನು ನನ್ನ ಪ್ರಿಯಜನರ ಬಾಯಿಂದ ಕೇಳಿ ತಿಳಿದೇ ಇಲ್ಲಿಗೆ ಬಂದಿರುವೆನು. ನನಗೆ ನಿನ್ನ ನಟನೆಯೊಂದೂ ರುಚಿಸುವಂತಿಲ್ಲ.’’ ಎಂದಾಡಿ ಭಯಂಕರವಾದ ಕೆಂಗಣ್ಣುಗಳಿಂದ ಒಮ್ಮೆ ಕ್ರೂರವಾಗಿ ಪತ್ನಿಯನ್ನು ನೋಡಿದನು.

ಸುಶೀಲೆ:—ಉಕ್ಕಿ ಸುರಿಯುತ್ತಿದ್ದ ಕಣ್ಣೀರನ್ನು ತಡೆದು, ಗದ್ಗದಸ್ವರದಿಂದ,—‘‘ಸ್ವಾಮಿನಾಥ! ನನ್ನ ಮಾತನ್ನು ನಂಬಲಾರದವರು, ತಮ್ಮನ್ನು ತಾವೇ ನಂಬಲಾರದವರು. ತಮ್ಮ ಈ ಬಗೆಯ ಸಂಶಯಕ್ಕೆ ನಾನು ಎಷ್ಟುಮಾತ್ರಕ್ಕೂ ಪಕ್ಕಾಗತಕ್ಕವಳಲ್ಲವೆಂದು ದೃಢವಾಗಿ ತಿಳಿಯಿರಿ!’’ ಎಂದು ಹೇಳುತ್ತಿದ್ದಂತೆಯೇ ಪತಿಯ ಪದತಲದಲ್ಲಿ ಬಿದ್ದಳು.

ವಿನೋ:—ಉನ್ಮತ್ತನಂತೆ ವಿಕೃತಸ್ವರದಿಂದ,—ಧೂರ್ತೆ! ನೀನೇ ನನ್ನ ಸುಖದ ದಾರಿಯಲ್ಲಿರುವ ಪ್ರಬಲ ಕಂಟಕೆ. ನಿನ್ನೀಕರ್ಮಕ್ಕೆ ತಕ್ಕ ಫಲವನ್ನು ಇಷ್ಟರಲ್ಲಿಯೇ ಹೊಂದದಿರಲಾರೆ! ತಿಳಿದೆಚ್ಚೆತ್ತಿರು.'' ಎಂದು ಧಿಕ್ಕರಿಸಿ, ಎಡಗಾಲಿಂದೊದ್ದು ನೂಕಿ ಬಾಗಿಲನ್ನು ತೆಗೆದುಕೊಂಡು ಹೊರಟುಹೋದನು.

ಅಬಲೆಯೂ, ಆರ್ತೆಯೂ, ಪತ್ಯಾಗ್ರಹಭೀತಿಸಂತಪ್ತೆಯೂ ಆದ ಸುಶೀಲೆ, ಏನನ್ನುಮಾಡಬಲ್ಲಳು? ನೀರವವಾಗಿ ರೋದಿಸುತ್ತೆ ಅಲ್ಲಿಯೇ ಮೈಮ್ಮರೆದು ಮಲಗಿದಳು. ಅವಳ ಆಗಳಿನ ಮನೋವ್ಯಾಕುಲವು ಎಷ್ಟುಮಟ್ಟಿಗೆ ಇದ್ದುದೆಂಬುದನ್ನು ವರ್ಣಿಸಲು ನಿಜವಾಗಿಯೂ ನಮ್ಮಿ ಕ್ಷುದ್ರ ಲೇಖಣಿಗೆ ಶಕ್ತಿಯಿಲ್ಲ.

ಸಹೃದಯಸೋದರೀ ಸೋದರರೇ!

ಭಾರತವರ್ಷದಲ್ಲಿ, ಎಷ್ಟುಮನೆಗಳಲ್ಲಿ ಇಂತಹ ಸಂಸಾರಗಳಿಲ್ಲ? ಇದೇನು? ಮನೆಯೆ? ಸಂಸಾರವೆ? ನಿಷ್ಕಾರಣವಾಗಿ ಕೊಡಲ್ಪಡುವ ಕ್ರೂರದಂಡನೆಯಿಂದ ನಿಷ್ಕಪಟಿಯಾದ ಸಾಧ್ವಿಯು ಕಣ್ಣಿಂದ ಹರಿವ ಬೆನ್ನೀರು, ಆವದೇಶವನ್ನು ಸುಟ್ಟುಹಾಕಲೊಲ್ಲದು? ತನ್ನ ಸತಿಯು ನೈಜ ಮನೋಭಾವವನ್ನು ಚೆನ್ನಾಗಿ ತಿಳಿದೂ, ಸುಗುಣವತಿಯೆಂಬ ಅನುಭವವುಂಟಾಗಿದ್ದರೂ, ಅಂತಹ ನಾರೀಮಣಿಯನ್ನು ಸಂತಯಿಸದೆ, ಚಿನ್ತೆಗೀಡುಮಾಡುವಾತನು, ನಿಜವಾಗಿಯೂ ಕ್ಷುದ್ರಜೀವಿಗಳಾದ ನಾಯಿ-ನರಿಗಳಿಗೂ ಕಡೆಯಾದ ಲೋಕಕಂಟಕನೆನ್ನಿಸುವನಲ್ಲದೆ ಮಾನವನೆನ್ನಿಸುವನೆ? ಅಂತಹನಿಂದ ದೇಶವು ಅಭಿವೃದ್ಧಿಗೆ ಬರುವುದೆಂಬ ಆಶೆ ಎಳ್ಳಷ್ಟಾದರೂ ಇರುವುದೆ? ನಿರರ್ಥಕವಾದ ಅವನ ಜೀವಿತವು ಭೂಭಾರಭೂತವಲ್ಲದೆ ಮತ್ತೇನು?

ಚತುರ್ಥಪರಿಚ್ಛೇದ.

(ಅಂತರಂಗದ ಅಭಿಸಂಧಿ)

ಮಧ್ಯಾಹ್ನ ಮೂರುಘಂಟೆಯ ಸಮಯ; ಸಕಲ ಚರಾಚರಾತ್ಮಕ ಪ್ರಪಂಚವನ್ನೂ ಸಮತಾದೃಷ್ಟಿಯಿಂದ ನೋಡುತ್ತಿರುವ ಸೂರ್ಯದೇವನು ತನ್ನ ಪೂರ್ಣತೇಜಸ್ಸಿನಿಂದ ಪ್ರಕಾಶಿಸುತ್ತಿದ್ದನು. ಸಮಸ್ತ ಪ್ರಾಣಿಗಳ ಕೃತ್ಯಾಕೃತ್ಯಗಳಿಗೂ ಸಾಕ್ಷೀಭೂತನಾದ ಜಗಚ್ಚಕ್ಷುವೇ ಸರ್ವರಕ್ಷಕನು. ಆದರೂ, ಕ್ಷುದ್ರಮಾನವನು ಆತನನ್ನೇ ದೂರುವನು. (ಇದಲ್ಲವೇ ಸ್ವಕಾರ್ಯಧುರಂಧರರ ಸ್ವಭಾವವೆಂಬುದು?) ಅದಿರಲಿ, ನಮ್ಮ ಪಾಠಕರ ಪೂರ್ವಪರಿಚಿತೆಯಾದ ಗಿರಿಯಮ್ಮನು ತನ್ನ ಮನೆಯ ಮುಂಗಡೆಯ ಜಗಲಿಯ ಮೇಲೆ ಕುಳಿತು, ತಾಂಬೂಲಚರ್ವಣದಿಂದ ನಲಿದು, ಹಾಡುತ್ತ ಕುಳಿತಿದ್ದಳು. ಅಲ್ಲಿಗೇ ತಂತ್ರನಾಥನೂ ಬಂದು ಅವಳಿದಿರೆ ಹತ್ತಿರದಲ್ಲಿಯೇ ಕುಳಿತನು.

ಗಿರಿ:—ಹಾಡನ್ನು ನಿಲ್ಲಿಸಿ,—'ತಂತ್ರನಾಥ! ಮನೆಯಲ್ಲಿ ಎಲ್ಲರೂ ಸೌಖ್ಯವಷ್ಟೆ?

ತಂತ್ರ:—ಎಲ್ಲರೂ ಸೌಖ್ಯವೇ.

ಗಿರಿ:—ಇಂದೇಕೆ ಹೀಗಿರುವೆ? ದೇಹಸ್ಥಿತಿ ಆರೋಗ್ಯವಿಲ್ಲವೇನು?

ತಂತ್ರ:—ಆರೋಗ್ಯವಾಗಿಯೇ ಇದೆ; ಆದರೆ ನಿನ್ನೆಯಿಂದ ಮನಸ್ಸಮಾಧಾನವಿಲ್ಲ.

ಗಿರಿ:—ಅದೇಕೆ?

ತಂತ್ರ:—ಅದನ್ನೇಕೆ ಕೇಳುವಿರಿ? ಬಹು ಅಂತರಂಗ; ಅನರ್ಥಕಾರಿ!

ಗಿರಿ:—ಕುತೂಹಲದಿಂದ,—ಅದೇನು? ಹೇಳಲಾಗದಷ್ಟು ಗುಟ್ಟೇ?

ತಂತ್ರ:—ನಿಮ್ಮಲ್ಲಿ ಹೇಳಲಾಗದುದೇನೂ ಅಲ್ಲ; ಆದರೂ ಬಲು ಗುಟ್ಟಾಗಿರತಕ್ಕದು.

ಗಿರಿ:—ನನ್ನ ವಿಷಯವು ನಿನಗಿನ್ನೂ ತಿಳಿಯದೆ? ಹೇಳು—

ತಂತ್ರ:—ಅದನ್ನು ತಾವು ಹೊರಡಿಸುವುದಿಲ್ಲವೆಂದು ಮಾತುಕೊಟ್ಟರೆ ಹೇಳುವೆನು.

ಗಿರಿ:—ಇಲ್ಲವಪ್ಪ! ನನ್ನಾಣೆ! ಯಾರಿಗೂ ಹೇಳುವುದಿಲ್ಲ.

ತಂತ್ರ:—ಸುಶೀಲೆ ತಮಗೇನಾಗಬೇಕು?

ಗಿರಿ:—ಆ ದುರಹಂಕಾರದ ಹುಡಗಿಗೂ ನನಗೂ ಏನೂ ಸಂಬಂಧವಿಲ್ಲ. ಅವಳ ತಾಯಿ, ನನ್ನ ಚಿಕ್ಕಂದಿನ ಸಂಗಾತಿ. ಅವಳ ಅತ್ತೆಯೂ ನನಗೆ ಬೇಕಾದವಳೇ ಆಗಿದ್ದಳು.

ತಂತ್ರ:—ಅವಳ ನಡೆನುಡಿ ವಿಚಾರವೇನಾದರೂ ತಮಗೆ ತಿಳಿದಿದೆಯೊ!

ಗಿರಿ:—ಯಾರು ಬಲ್ಲರು? ನೋಡುವುದಕ್ಕೇನೋ ಬಲು ಒಳ್ಳೆಯವಳಾಗಿ ಕಾಣುವಳು. ಓದುಬರೆಹ ಬಲ್ಲ ಈ ಕಾಲದ ಹುಡುಗಿಯರನ್ನು ನಂಬುವುದು ಹೇಗೆ? ಯಾವಾಗ ನೋಡಿದರೂ ಪುಸ್ತಕವನ್ನು ಹಿಡಿದಿರುವಳು. ಒಳ್ಳೊಳ್ಳೆಯ ಮಾತುಗಳನ್ನಾಡುವಳು.

ತಂತ್ರ:—ನಿಜ, ಹಾಗೆಯೇ ಮಾಡಬೇಕಷ್ಟೆ! ಹತ್ತಿಯಹಣ್ಣು ಮೇಲೆ ನೋಡಲಿಕ್ಕೆ ಅಂದವಾಗಿಯೇ ಇರುವುದು, ಆದರೇನು? ಸುಶೀಲೆಯ ಹೆಸರೂ ಚೆನ್ನಾಗಿರುವುದು. ನಡತೆಯಲ್ಲಿ ಮಾತ್ರವೇ......

ಗಿರಿ:—ಗಿರಿಯಮ್ಮನ ಮುಖದಲ್ಲಿ ಉತ್ಸಾಹವು ಹೆಚ್ಚಿತು. ಆತುರದಿಂದ, 'ಏನು? ನಡತೆಯಲ್ಲಿ ಕುಂದೇನು?'

ತಂತ್ರ:—ಮತ್ತೇನು? ಕುಲಟಾವರ್ತನವೊಂದೇ ಸಾಲದೆ?

ಗಿರಿ:—ಸಂಭ್ರಮದಿಂದ,—'ನಿನಗೆ ಹೇಗೆ ತಿಳಿಯಿತು!'

ತಂತ್ರ:—(ಕಳ್ಳನೆಂದಿದ್ದರೂ ಹೊರಬೀಳುವನಲ್ಲವೆ?) ನನ್ನ ಚಿನ್ತೆಗೆ ಕಾರಣವಾದರೂ ಮತ್ತಾವುದು?

ಗಿರಿ:—ಹೇಗೆ? ನೀನೇನಾದರೂ ಅವಳ ಮನೆಗೆ ಹೋಗಿದ್ದೆಯೊ? ವಿಶೇಷ ವೇನು?

ತಂತ್ರ:—ವಿನೋದನನ್ನು ನೋಡಬೇಕೆಂದು ಹೋಗಿದ್ದೆನು, ಅವನು ಮನೆ ಯಲ್ಲಿರಲಿಲ್ಲ.

ಗಿರಿ:—ಅವಳೊಬ್ಬಳೇ ಇದ್ದಳೇನು? ಏನಾಯ್ತು?

ತಂತ್ರ:—ತುಟಿಯನ್ನು ತುದಿನಾಲಿಗೆಯಿಂದೆ ನೆಕ್ಕುತ್ತ, "ನಡೆದುದೆಲ್ಲ ವನ್ನೂ ಹೇಳಲು ನನಗೆ ಹೆದರಿಕೆಯಾಗುವುದು. ನೀವು ಯಾರೊ ಡನೆಯೂ, ...

ಗಿರಿ:—ತಂತ್ರನಾಥ! ನಾನು ಯಾರೊಡನೆಯಾದರೂ, ಎಂದಿಗಾದರೂ, ಹೇಳುವೆನೇನು?

ತಂತ್ರ:—ಹಜಾರಕ್ಕೆ ಹೋದೆನು. ನನ್ನನ್ನು ನೋಡಿದೊಡನೆಯೇ ಕೈ ಹಿಡಿದು ಒಳಕ್ಕೆ ಕರೆದುಕೊಂಡುಹೋದಳು. ಆಬಳಿಕ......

ಗಿರಿ:—ಓದಿ ಕೆಟ್ಟಳು! ತಿಳಿಗೇಡುವಿದ್ಯೆ!! ಆಮೇಲೆ?

ತಂತ್ರ:—ಅತ್ತಿತ್ತ ನೋಡಿ—ತೊದಲುನಾಲಿಗೆಯಿಂದ,—'ಆಮೇಲೇನು? ನಿನ್ನನ್ನೇ ಮದುವೆಯಾಗಬೇಕೆಂಬ ಆಶೆ ನನಗೆ ಬಲವಾಗಿತ್ತು. ಆದರೂ, ನನ್ನ ತಂದೆ.........ಹಾಗೆ ಮಾಡಲಿಲ್ಲ. ಈಗ ಳಾದರೂ ಏನಾಯ್ತು? ನೆನ್ನನ್ನು.........

ಗಿರಿ:—ಸಾಕು! ಸಾಕು!! ಕೇಳಲಾರೆನಪ್ಪ! ನಿನ್ನೆಯ ಸಾಯಂಕಾಲ, ನನಗೆಷ್ಟೋ ವೇದಾಂತಗಳನ್ನು ಬೋಧಿಸಿದವಳಿಗೆ ಈ ಕೆಟ್ಟಕೆಲಸ ಮಾಡಬಾರದೆಂಬ ತಿಳಿವು ಬೇಡವೇ? ಈಗಿನ ಹುಡುಗಿಯರೇನಪ್ಪ! ಹಾಳು ಶಾಲೆಯಲ್ಲೇ ಇದೆಲ್ಲವನ್ನೂ ಕಲ್ತುಬರುವರೆಂದೇ ಕಾಣು ವುದು. ಆಗಲಿ, ಈದಿನ ಅವಳಮನೆಗೆ ಹೋಗಿ, ಅವಳ ಗಂಡನೂ ಮನೆಯಲ್ಲಿಯೇ ಇರಬಹುದು. ಅವನಿದಿರಿಗಿಯೇ ಅವಳ ಪಿತ್ತ ವನ್ನು ಇಳಿಸಿಬರುತ್ತೇನೆ!

ತಂತ್ರ:—ನೋಡಿದಿರಾ ! ಇದಕ್ಕೇ ....

ಗಿರಿ:—ಇಲ್ಲವಪ್ಪ ! ನನಗೆ ಮಯ್ಯುರಿದುಹೋಗುತ್ತಿದೆ ! ಇರಲಿ, ಮುಂದೆಹೇಳು ?

ತಂತ್ರ:—ಅವಳು ನಿನ್ನೆಯರಾತ್ರಿಯೇ ನನ್ನೊಡನೆ ಓಡಿಬರಲು ಸಿದ್ಧಳಾಗಿದ್ದಳು. ಕಯ್ಗೆ ಸಿಕ್ಕಿದ ನಗನಾಣ್ಯಗಳನ್ನು ತರುವೆನೆಂದಳು ; ನನಗೇ ಭಯವಾಯ್ತು. ಉಪಾಯದಿಂದ ತಪ್ಪಿಸಿಕೊಂಡು ಮತ್ತೆ ಬರುವೆನೆಂದುಹೇಳಿ ಎಷ್ಟು ಕಷ್ಟದಿಂದ ಬಂದೆನೋ ? ಹೇಳಲಾರೆನು. ಇನ್ನು ಈ ಜನ್ಮವಿರುವವರೆಗೂ ಅವರಮನೆಗೆ ಹೋಗಬಾರದಮ್ಮ! ಅವಳ ಅಕ್ಕ ಆ ನನ್ನ ಹಿರಿಯ ಹೆಂಡತಿ, ಇದ್ದಳಲ್ಲ,-ಅವಳೆಂತಹ ಪತಿವ್ರತೆ ! ಇವಳಿಂದ ನಂಟರಿಗೆಲ್ಲಾ ಅಪಮಾನ ! ಈ ವಿಚಾರ ತುಂಬಾ ಗುಟ್ಟಾಗಿರಲಮ್ಮ ! ತಲೆಹೋಗುವಮಾತು! ಎಲ್ಲಿಯಾದರೂ ಬಾಯಿಬಿಟ್ಟೀರಿ ! ಜೋಕೆ ! ಜೋಕೆ !! ಗುಟ್ಟು ರಟ್ಟಾದರೆ ಕಷ್ಟ ತಪ್ಪದು.

ಗಿರಿ:—ಗಲ್ಲದಮೇಲೆ ಕಯ್ಯಿಟ್ಟುಕೊಂಡು,—‘ ಹಾಳಾಗಲಿ ಕೆಟ್ಟಸುದ್ದಿ ! ನೋಡು, ನನಗೂ ನಿನಗೂ ಯಾವ ನಂಟುತನವೂ ಇಲ್ಲದಿದ್ದರೂ ನಾವಿಬ್ಬರೂ ಎಷ್ಟು ಅನ್ಯೋನ್ಯವಾಗಿಲ್ಲ ? ನೀನೇನು ನನ್ನನ್ನು ಅಕ್ಕನಂತೆಯೇ ಭಾವಿಸುತ್ತಿರುವೆಯಲ್ಲವೆ ? ಅವಳಿಗೇನುಬಂದಿದೆ ? ಕೇಡುಗಾಲದ ಬುದ್ಧಿ ? ಪವಿತ್ರವಾದ ಕುಲ, ಅಸಾಧಾರಣವಾದ ರೂಪಲಾವಣ್ಯ, ಪ್ರಾಪ್ತವಾದ ಯೌವನ, ಶ್ರೇಷ್ಠವಾದ ನಾರೀ ಧರ್ಮ, ಇವೆಲ್ಲವನ್ನೂ ಕ್ಷಣಿಕಸುಖಕ್ಕಾಶಿಪಟ್ಟು ಹಾಳುಮಾಡಿಕೊಳ್ಳುವಳಲ್ಲಾ ! ಎಂಬುದೊಂದೇ ನನಗೆ ಸಂಕಟ! ಹೇಗಾದರೂ ಅವಳು ದಾರಿಗೆ ಬಂದರೆ ಸಾಕಾಗಿದೆ. ಆದರೆ ನಾನು ಮಾಡುವುದೇನು ? ಒಂದು ಮಾತನ್ನು ಹೇಳಿದರೆ ಅವಳು ಹತ್ತು ಮಾತುಗಳಾಡಿ ಹಳಿಯುತೊಡಗುವಳು,

ತಂತ್ರ:—ತಾವು ಹೇಳುವುದರಿಂದೇನೂ ಫಲವಿಲ್ಲ. ವಿನೋದನು ನಿಮ್ಮ ಮನೆಗೆ ಬರುವುದುಂಟೊ ?

ಗಿರಿ:—ಏಕೆ ? ನಿತ್ಯವೂ ಬರುತ್ತಿರುವನು. ನಮ್ಮ ಮನೆಯವರಲ್ಲಿ–ಅವನಿಗೆ ತುಂಬಾ ನಂಬಿಕೆ.

ತಂತ್ರ:—ಹಾಗಾದರೆ, ಇದು ಅವನಿಂದಲೇ ಸರಿಪಡಿಸಲ್ಪಡಬೇಕು. ಅವನು ನಿಮ್ಮ ಮನೆಗೆ ಬಂದಾಗ, ಈ ವಿಷಯವು ಅವನ ಕಿವಿಗೆ ಬೀಳುವಂತೆ ಮಾಡಿಬಿಟ್ಟರೆ, ಅವನೇ ಸರಿಪಡಿಸಿಕೊಳ್ಳುವನು.

ಗಿರಿ:—ಸರಿ ! ಸರಿ !! ನಿನ್ನ ಆಲೋಚನೆಯೇ ಸರಿಯಾದುದು. ಹಾಗೆಯೇ ಮಾಡುವೆನು, ನನಗೇನು ಭಯ ? ಅವನಪ್ಪನಿಗೂ ನಾನು ಹೆದರುವುದಿಲ್ಲ. ಸಮಯವೊದಗಿದರೆ ಇನ್ನುಮುಂದೆ ಅವನು, ನಮ್ಮ ಮನೆಗೆ ಬಾರದಂತೆಯೇ ಮಾಡಿಬಿಡುವೆನು.

ತಂತ್ರ:—ಅಮ್ಮಾ ! ನಾನು ಹೇಳಿದೆನೆಂದು ಬಾಯಿಬಿಟ್ಟೀರಿ. ನಮ್ಮಿ ಅಭಿಸಂಧಿ ಹೊರಬಿತ್ತೆಂದರೆ,–ನನ್ನ ಮತ್ತು ನಿಮ್ಮ ಇಬ್ಬರ ತಲೆಗಳೂ ಹೋದಾವು ! ಎಚ್ಚರಿಕೆ !—ಎಂದು ಹೇಳಿ ಹೊರಟು ಹೋದನು.

(ಸುಹೃದರೇ! ಏನೆನ್ನುವಿರಿ? ವಿನೋದನನ್ನು ದೂರುವಿರೊ ? ತಂತ್ರನಾಥನನ್ನು ದೂರುವಿರೊ ? ಕುತ್ಸಿತ ಕಾರ್ಯದಲ್ಲಿ ಬಿದ್ದರೂ, ಸಾಧ್ವಿಯಾದ ಪರಸ್ತ್ರೀಯಲ್ಲಿ ಕಲಂಕವನ್ನು ತೋರೆಯಿಸುವವನಲ್ಲದ ವಿನೋದನೇ ತಂತ್ರನಾಥನಿಗೂ ಮೇಲೆಂಬಿರಲ್ಲವೆ ? ಹಾಗೆಯೇ ಹೇಳಿರಿ.)

ಪಂಚಮ ಪರಿಚ್ಛೇದ.

(ನಮ್ಮ ಸ್ತ್ರೀ ಸಮಾಜದಲ್ಲಿ)

ಗಿರಿಯಮ್ಮನ ಮನೆ ದೊಡ್ಡದಲ್ಲ. ಸಾಮಾನ್ಯವಾದ ಹೆಂಚಿನಮನೆ. ಹಳೆಯ ಪದ್ಧತಿಯಂತೆಯೇ ಕಟ್ಟಲ್ಪಟ್ಟಿದ್ದುದು, ಬೀದಿಯ ಬಾಗಿಲಲ್ಲಿ ಎರಡು ಕಡೆಯಲ್ಲಿಯೂ ಪಡಸಾಲೆ; ಒಳಹೊಕ್ಕರೆ ಒಂದು ಸಣ್ಣ ನಡುಮನೆ; ಅಲ್ಲಿಂದ ಒಳಗೆ ಹೋದರೆ ದೊಡ್ಡದಾದ ಹಜಾರ; ಅದರ ಹಿಂದೆ ಒಂದೆರಡು ಕಿರುಮನೆಗಳು; ಹಿಂಗಡೆಯಲ್ಲಿ ಊಟದ ಅಂಗಳ; ಅದಕ್ಕೆ ಹಿಂಗಡೆ ಹಿತ್ತಲು; ಹಿತ್ತಲಲ್ಲಿ ಬಗೆಬಗೆಯ ಗಿಡಗಳಿದ್ದುವು. ಮಧ್ಯಭಾಗದ ಹಜಾರದಲ್ಲಿಯೇ ಗಿರಿಯಮ್ಮನ ಗಂಡನು ಓಲೆಯ ಪುಸ್ತಕಗಳನ್ನು ಹಿಡಿದು ಓದುತ್ತ ಕುಳಿತಿದ್ದನು.

ತಂತ್ರನಾಥನು ಹೊರಟುಹೋದ ಬಳಿಕ, ಗಿರಿಯಮ್ಮನು ಬಂದು ನಡುವೆಯಲ್ಲಿ ಕುಳಿತಳು. ನಿತ್ಯದಂತೆಯೇ ಬಂದ ವಿನೋದನು ಬಾಗಿಲಲ್ಲಿ ನಿಂದು,—"ಅಮ್ಮಾ! ಸಿದ್ಧಾಂತಿಯವರಿರುವರೆ?" ಎಂದು ಕೇಳಿದನು.

ಗಿರಿ:—'ಹಜಾರದಲ್ಲಿರುವರು ಹೋಗಪ್ಪ.' ಎಂದಾಡಿ ವಿನೋದನನ್ನು ಒಳಕ್ಕೆ ಕಳಿಸಿ, ಅತ್ಯವಸರದಿಂದ ಬೀದಿಗೆ ಬಂದು ದಾರಿಯಲ್ಲಿ ಹೋಗುತ್ತಿದ್ದ ವೆಂಕಮ್ಮ, ಮೀನಾಕ್ಷಮ್ಮ ಎಂಬ ತನ್ನ ಜತೆಗಾರ್ತಿಯರನ್ನು ಕೂಗಿ ಕರೆದುಕೊಂಡು ಊಟದಮನೆಗೆ ಹೊರಟುಹೋದಳು. ವಿನೋದನು ಹಜಾರಕ್ಕೆ ಬಂದು ಸಿದ್ಧಾಂತಿಯ ಬಳಿಯಲ್ಲಿ ಕುಳಿತು,– 'ಏನು ಸಿದ್ಧಾಂತಿಗಳೆ! ಏನೋ ವಿಚಾರದಲ್ಲಿರುವಂತಿದೆ?

ಸಿದ್ಧಾನ್ತಿ:—ವಿಚಾರವೇನು ? ಈ ವರೆಗೆ ಈ ವರ್ಷದ ಪಂಚಾಂಗಗಳು ಹನ್ನೆರಡು ಬಂದಿವೆ. ಅವಾವುದರಲ್ಲಿ ಏನೇನು ವ್ಯತ್ಯಾಸವಿರುವು ದೋ ನೋಡುತ್ತಿದ್ದೇನೆ. ಈಗೇನಪ್ಪ ! ಎಲ್ಲರೂ ಜ್ಯೋತಿಷ್ಕರೇ ಆಗಿರುವರು.

ವಿನೋದ:—ಕಿರುನಗೆಯಿಂದ,– ' ತಾವೇ ಒಂದು ಪಂಚಾಂಗವನ್ನು ಮಾ ಡಬಾರದೇಕೆ ?

ಸಿದ್ಧಾನ್ತಿ:—ಏಕಪ್ಪ ? ಏನಾದರೂ ಅನುಮಾನಬಂದರೆ ಗುಣಿಸಿ ನೋಡಿ ಕೊಂಡರಾಯ್ತು ! ನಾನೇಕೆ ಬರೆಯಲಿ ? ನೀನೇನು ಮೂರು ದಿನ ಗಳಿಂದ ಬರಲಿಲ್ಲ ? ಊರಲ್ಲಿರಲಿಲ್ಲವೇನು ?

ವಿನೋದ:—ಊರಲ್ಲಿಯೇ ಇದ್ದೆನು. ಆದರೆ, ನನ್ನ ಮಿತ್ರಮಂಡಲಿಯ ಪ್ರೀತ್ಯರ್ಥವಾಗಿ ನಿನ್ನೆ ಮತ್ತು ಮೊನ್ನೆ ಊಟವುಪಚಾರಗಳನ್ನು ನಡೆಯಿಸಿದೆನು. ಆ ಕೆಲಸದಲ್ಲಿ ನಿರತನಾಗಿದ್ದುದರಿಂದ ಇತ್ತ ಬರ ಲಾಗಲಿಲ್ಲ.

ಸಿದ್ಧಾನ್ತಿ:—ನ್ಯಾಯ. ಅಧಿಕಾರಿಗಳಾದ ಸ್ನೇಹಿತರಿಗೆ ಔತನಾದಿಗಳನ್ನು ಮಾಡಿ ಅವರನ್ನು ಮೆಚ್ಚಿಸಿಕೊಂಡರೆ, ಮುಂದೆ ದೊಡ್ಡ ಉದ್ಯೋ ಗವಾದರೂ ದೊರೆವುದು. ನಮ್ಮಿಂದೇನಾದೀತು ?

ವಿನೋದ:—ಹಾಗೆ ಹೇಳಲಾಗದು. ನಾನು ಹೊಂದಿರುವ ಅಲ್ಪಸ್ವಲ್ಪ ತಿಳಿವಿಗೂ ಕಾರಣಭೂತರಾದ ತಮ್ಮನ್ನೇ ಮರೆತರೆ ನಾನು ಕೃತ ಘ್ನನಲ್ಲದೆ ಮತ್ತೇನು ?

ಸಿದ್ಧಾನ್ತಿ:—ಹೋಗಲಿ ; ನಿನ್ನ ಹೆಂಡತಿಗೇನೋ ಅನಾರೋಗ್ಯವೆಂದು ಕೇಳಿದೆನು. ನಿಜವೆ ?

ವಿನೋದ:—ಹೇಳಿದವರಾರು ?

ಸಿದ್ಧಾನ್ತಿ:—ನಮ್ಮ ಮನೆಯಾಕೆ.

ವಿನೋದ—ಏನೆಂದೊ ?

ಸಿದ್ಧಾಂತಿ:—“ ಅವಳೇನೋ ಉನ್ಮಾದರೋಗಕ್ಕೆ ಗುರಿಯಾದಂತಿದೆ ” ಯೆಂದೂ, ಅದರಿಂದಲೇ ತನ್ನನ್ನು ಬಾಯ್ಗೆ ಬಂದಂತೆ ಬಯ್ದು ಕಳಿಸಿದಳೆಂದೂ, ಹೇಳಿದಳು.

ವಿನೋದ:—ಅದೊಂದೂ ನನಗೆ ತಿಳಿಯದು.

ಸಿದ್ಧಾಂತಿ:—ಹೆಂಗಸರು ಚಪಲೆಯರು; ಅವರ ಯಾವ ಮಾತನ್ನೂ ನಂಬಬಾರದು. ಒಂದಕ್ಕೆ ಸಾವಿರ ಕಯ್ಕಾಲುಗಳನ್ನಾದರೂ ಹುಟ್ಟಿಸಿ, ಊರಲ್ಲೆಲ್ಲಾ ಹಬ್ಬಿಸಬಲ್ಲರು. ಸಂಸಾರದ ಸ್ಥಿತಿಗತಿ ವಿಚಾರವು ಗುಟ್ಟಾಗಿರುವ ವರೆಗೂ ಚೆನ್ನಾಗಿರುವುದು. ಆ ಬಳಿಕ ರಸಹೀನವಾಗುವುದು. ಹೇಗೂ ಹೆಂಗಸರ ಮಾತನ್ನೇ ನಂಬಿ, ನಡೆವವರು ಬದುಕುವ ಸಂಭವವೇ ಇರುವುದಿಲ್ಲ.

ವಿನೋದ:—ಸ್ವಾಮಿ ! ನನ್ನ ಹೆಂಗಸಿನಲ್ಲಿಯೂ ಅಂತಹದೇನಾದರೂ ದೋಷವಿರಬಹುದೊ ?

ಸಿದ್ಧಾಂತಿ:—ನಾನೇನು ಬಲ್ಲೆನು ? ನೀನಾವಾಗಲೂ ಹೆರವರ ಮನೆಯಲ್ಲಿಯೇ ಬಿದ್ದಿರುವೆ? ನಾನು ಯಾವಾಗಲೂ ಮನೆಯಲ್ಲಿಯೇ ಇದ್ದರೂ ನಮ್ಮ ಮನೆ ಹೆಂಗುಸು, ನನ್ನ ಮುಂದೆಯೇ ನಡೆಯಿಸುವ ಕೆಲಸಗಳಿಂತಹವೆಂಬುದನ್ನು ನಾನೇ ತಿಳಿಯಲಾರೆನು. ಇನ್ನು ನಿನಗೆ ಹೇಳುವುದೇನು ?

ವಿನೋದ:—ನೀವು ಹಂಗಿಸಬಾರದು. ನಾನು ಯಾವುದಾದರೂ ಒಂದು ಉದ್ಯೋಗಕ್ಕೆ ಸೇರಬೇಕೆಂದಿರುವೆನು. ಜಾಗ್ರತೆಯಾಗಿಯೇ ಸೇರುವೆನು.

ಸಿದ್ಧಾಂತಿ;—“ ಅದೀಗ ತಕ್ಕನುಡಿ ! ” ಎಂದು ಪಂಚಾಂಗವನ್ನು ತಿರುಹಿ ಹಾಕುತ್ತೆ ಕುಳಿತನು. ವಿನೋದನೂ ಅವಾವುದೋ ವಿಷಯಗಳನ್ನು ಕುರಿತು ಮನದಲ್ಲಿಯೇ ವಿಚಾರಮಾಡುತ್ತೆ ಕುಳಿತನು.

ಹಿಂದೆ ಹೇಳಿರುವಂತೆ ಊಟದ ಮನೆಯ ಕಡೆಯಲ್ಲಿ ಗಿರಿಯಮ್ಮನ ಜತೆಗಾರ್ತಿಯರೊಡನೆ ಮಹಿಳೆಯರ ಕೂಟವು ಸೇರಿತ್ತು. ಈ ದಿನದ ಸಭೆಗೆ ಗಿರಿಯಮ್ಮನೇ ಅಗ್ರಸ್ಥಾನವನ್ನು ಅಲಂಕರಿಸಿದ್ದಳು. ಮೊದಲು ಸಭಿಕರ ಅಡುಗೆ ಊಟ, ಉಪಚಾರಾದಿಗಳ ವಿಚಾರವು ಸ್ವಲ್ಪಮಟ್ಟಿಗೆ ನಡೆಯಿಸಲ್ಪಟ್ಟಿತು. ಅಂದು ಸಭೆಗೆ ಬಾರದಿದ್ದವರ ವಿಚಾರಣೆಯೂ ಸ್ವಲ್ಪಮಟ್ಟಿಗೆ ಅತ್ಯಾದರದಿಂದ ನಡೆದು, ಅವರ ಆಗಮನಕ್ಕೆ ಅಭ್ಯಂತರವು ಅಲ್ಲದ್ದವರಿಂದೇ ತೀರ್ಮಾನಿಸಲ್ಪಟ್ಟುವು. ಆ ಬಳಿಕ ಎಷ್ಟೋ ವಿಚಾರಗಳು ನಡೆದುವು. ತಿಮ್ಮಕ್ಕನ ಗಂಡನ ಸಂಬಳ-ರಾಮಕ್ಕನ ಬಾವನ ವರಮಾನ-ಸೀತಮ್ಮನ ಗಂಡನ ವಿತರಣೆಯಿಲ್ಲದ ಖರ್ಚು-ರುಕ್ಮಿಣಿಯಮ್ಮನ ಮನೆಯ ಅಡುಗೆ-ಅಲಮೇಲಮ್ಮನ ಮನೆಯ ಸಮಾರಾಧನೆಯ ಆದರ-ತಿಮ್ಮಣ್ಣಭಟ್ಟರ ಆಲೆದಾಟ-ಹದಿನಾಲ್ಕು ವರ್ಷವಾದರೂ ಅವಿವಾಹಿತೆಯಾಗಿರುವ ಗೌರಮ್ಮನ ಮಗಳ ವಿಚಾರ-ಕೃಷ್ಣರಾಯರ ಮಗನು ಹನ್ನೊಂದುವರ್ಷವಾದರೂ ಉಪನಯನಕರ್ಮಹೀನನಾಗಿರುವ ವಿಷಯ-ವಿಧವಾವಿವಾಹ-ಸ್ತ್ರೀ ವಿದ್ಯಾಭ್ಯಾಸ-ಇನ್ನೂ ಎಷ್ಟೆಷ್ಟೋ ವಿಷಯಗಳು ಚರ್ಚಿಸಲ್ಪಟ್ಟುವು. ಅವೆಲ್ಲವನ್ನೂ ಹೇಳಬೇಕೆ ?

ವಾಚಕರೆ ! ಇಷ್ಟಕ್ಕೇ ನೀವು ಬೇಸರಪಟ್ಟಿರಬೇಕಲ್ಲವೆ ? ನಾವು ಎಲ್ಲಾ ವಿಷಯಗಳನ್ನೂ, ಅವುಗಳ ತೀರ್ಮಾನಗಳನ್ನೂ ಬರೆವುದಿಲ್ಲ. ಎಷ್ಟೋ ವಿಚಾರಗಳು ನಡೆದುದರಲ್ಲಿ ಸುಶೀಲೆಯ ವೃತ್ತಾಂತವೂ ಹೊರಹೊರಟುದು. ಆ ವಿಷಯವು ಮಾತ್ರ ನಮಗೆ ಬೇಕಾದುದರಿಂದ ಅದನ್ನು ಇಲ್ಲಿ ಉಲ್ಲೇಖಿಸುವುದು. ಆಗ್ರಹವಿಲ್ಲದೆ, ಬೇಸರಗೊಳ್ಳದೆ, ಓದಿದರೆ ಫಲವುಂಟು.

ವೆಂಕಮ್ಮ:—ಮೀನಾಕ್ಷಮ್ಮ! ಏನು ಕೇಡುಗಾಲವೆನ್ನಬೇಕಮ್ಮ ? ಹಾಳು ಸುಶೀಲೆ ಯಾವಾಗನೋಡಿದರೂ, ಪುಸ್ತಕವನ್ನು ಹಿಡಿದೇ ಇರುವಳು. ಹೆಂಗಸು......ಗೆ ಓದೆಂದರೇನು ?

ಗಿರಿ:—ಓದಿಗೆ ಬೆಂಕಿಬೀಳಲಿ! ಹಾಳು......ಸುದ್ದಿ!!

ಮೀನಾಕ್ಷಮ್ಮ:—ಏಕಮ್ಮ! ಅವಳ ಸೌಂದರ್ಯ, ಬುದ್ಧಿ, ಜಾಣ್ಮೆ, ಗುಣ, ವಿವೇಚನಾಶಕ್ತಿ, ಪಾತಿವ್ರತ್ಯ-ಇವೆಲ್ಲವೂ ಚೆನ್ನಾಗಿಲ್ಲವೇನಮ್ಮ? ಓದಿದರೆ ಕುಂದೇನು?

ಗಿರಿ:—ಎಲ್ಲವೂ ಇವೆ. ಆದರೆ ದುರ್ಗುಣಗಳು ಇಲ್ಲದಿದ್ದರೆ ಚೆಂದ!

(ಹಜಾರದಲ್ಲಿ ಆಲೋಚನಾಪರನಾಗಿ ಕುಳಿತಿದ್ದ ವಿನೋದನಿಗೆ ಕಿವಿಗಳು ನಾಲ್ಕಾದಂತಾದುವು. ಆತುರದಿಂದ ಕೇಳತೊಡಗಿದನು. ಮತ್ತೆ ಮಾತಿಗೆ ಮೊದಲಾಯ್ತು.)

ಮೀನಾಕ್ಷಮ್ಮ:—ಹಾ! ಏನಮ್ಮ? ಅವಳಲ್ಲಿರುವ ದುರ್ಗುಣಗಳು? ನಾನೇನೋ ಅವಳನ್ನು ಒಳ್ಳೆಯವಳೆಂದೇ ತಿಳಿದಿರುವೆನು.

ಗಿರಿಯಮ್ಮ:—ಅವಳ ಒಳ್ಳೆಯ ತನವು ಉರಿದು ಹೋಯ್ತು. . . . . .ಅವಳನ್ನು ಯಾವ ವಿಲಾಸವತಿಗೆ ಕಡಿಮೆಯೆಂದಿರುವಿರಿ?

ವೆಂಕಮ್ಮ:—ಹಾಳು ಓದುಬರೆಹಬಲ್ಲ ಹೆಂಗಸರು! ಅವರು ಮಾಡುವುದೆಲ್ಲ ಕೆಟ್ಟಕೆಲಸವೇ!! ಹೊರಗೆ ಮಾತ್ರ ಬಹು ಸಜ್ಜನೆಯರಂತೆ ಕಾಣುತ್ತಿರುವರು. ಮೀನಾಕ್ಷಮ್ಮ! ಆ . . . . ಗೇನು ಬಂದಿದೆಯಮ್ಮ, ಕೇಡುಗಾಲದ ಬುದ್ಧಿ! ಒಂದು ದಿನವಾದರೂ ಹಣೆಯ ತುಂಬ ಕುಂಕುಮ, ಕೈಕಾಲುಗಳಿಗೆ ಅರಿಸಿನ ಹಚ್ಚಿಕೊಂಡುದನ್ನು ನಾನು ನೋಡಿಲ್ಲವಮ್ಮ! ನಮ್ಮ ಮನೆಯವರಿದ್ದಾಗ,—

ಮೀನಾಕ್ಷಮ್ಮ:— ಅದು ಹೋಗಲಿ, ಅವಳ ವಿಷಯವೇನು? ಹೇಳಬಾರದೆ?

ಗಿರಿಯಮ್ಮ:—ಅದು ತುಂಬಾ ಗುಟ್ಟಾಗಿರಬೇಕಮ್ಮ.

ವೆಂಕಮ್ಮ:—ಹಾಗಿದ್ದರೆ, ಮೆಲ್ಲಗೆ ಹೇಳಿ; ಅವಳ ಗಂಡನು ಹಜಾರದಲ್ಲಿರುವನು. ನಿಮ್ಮ ಮನೆಯವರೂ ಇರುವರು.

ಗಿರಿಯಮ್ಮ:—ಅವರಿಗೆ ನಾನು ಹೆದರಲೊ? ಆ ಪೋರ ನನ್ನ ಮುಂದಿನವನು. ನಮ್ಮ ಮನೆಯವರಿಗೆ ಎಲ್ಲಾ ವಿಷಯವೂ ತಿಳಿದೇ ಇದೆ.

ಮೀನಾಕ್ಷಮ್ಮ:—ಹಾಗಾದರೆ ಹೇಳಿಯೇ ಬಿಡಿ?

ಗಿರಿಯಮ್ಮ:—ಅವಳು ಯಾವನನ್ನೋ ಎತ್ತಿಕೊಂಡು ಓಡಿಹೋಗಲು ಸಮಯ ನಿರೀಕ್ಷಣೆಯಲ್ಲಿರುವಳು.

ವೆಂಕಮ್ಮ:—ಯಾರನ್ನು? ಯಾರು ಹೇಳಿದರು?

ಗಿರಿಯಮ್ಮ:—ಯಾವನೋ ಒಬ್ಬ ತಲೆಮಾಸಿದವನನ್ನು! ಯಾವರಂಡೆ ಬಲ್ಲಳು? ಯಾರೋ ಹೇಳಿದರು. ನಿನ್ನೆಯೇ ಓಡಿಹೋಗಬೇಕೆಂದಿದ್ದಳು. ಪಾಪ! ಅವನು ಒಳ್ಳೆಯವನಾಗಿದ್ದುದರಿಂದ ಹೆದರಿ, ಮತ್ತೆ ಬರುವೆನೆಂದು ಹೇಳಿ ಬಂದನಂತೆ! ತುಂಟನಾಗಿದ್ದರೆ,—

ವೆಂಕಮ್ಮ—ಕುಲದ ಗೌರವವನ್ನು ಹಾಳುಮಾಡುವವಳು ಇದ್ದರೇನು? ಸತ್ತರೇನು? ಅವಳ ಗಂಡನಿಗೇನು ಬುದ್ಧಿಯಿಲ್ಲವೆ? ಅವನೇನು ಬಳೆ ತೊಟ್ಟಿರುವನೇ? ಎಂತಹ ಷಂಡ......?

ವಿನೋದನಿಗೆ ಭಯವಿಸ್ಮಯಗಳು ಹೆಚ್ಚಿದುವು. ಮೇಲಕ್ಕೆದ್ದು ಘಟ್ಟಿಯಾಗಿ ಹೇಳಿದನು,—'ಅಮ್ಮ! ಗಿರಿಯಮ್ಮ! ಒಂದೇ ಒಂದು ಪ್ರಶ್ನೆಯನ್ನು ಕೇಳಬೇಕು; ದಯೆಯಿಟ್ಟು ಸ್ವಲ್ಪ ಇತ್ತಬನ್ನಿರಿ.?'

ಗಿರಿಯಮ್ಮನು ಬಂದು ದರ್ಪಿತಸ್ವರದಿಂದ,—'ಏನಪ್ಪ, ಅದು? ಉಡುಗೊರೆ!'

ವಿನೋದ—ಸಂಕುಚಿತಭಾವದಿಂದ,—"ನನ್ನ ಪತ್ನಿಯ ವಿಚಾರವಾಗಿ ತಾವು ಹೇಳಿದುದೆಲ್ಲಾ ನಿಜವೆ? ಏನಾದರೂ ಸಾಕ್ಷ್ಯವುಂಟೇ! ಅವಳು ನಿಜವಾಗಿಯೂ ಪಾತಿವ್ರತ್ಯವನ್ನು ಕಳೆದುಕೊಂಡಿರುವಳೆ?

ಗಿರಿಯಮ್ಮ:—ಮೊಗದಿರುಹಿ "ನಿನ್ನ ಹೆಂಡತಿಯ ಗುಣವನ್ನು ನೀನೇ ಹೊಗಳಿಕೊಳ್ಳಬೇಕು. ಅವಳ ಗುಣಗಳಲ್ಲಿ ಒಂದನ್ನೊಂದು ಮೀರಿಸುತ್ತಿದೆ. ಇರಲಿ; ಹೋಗಪ್ಪ! ಸಾಕು! ಸಾಕು!!

ವಿನೋದ:—ಇದೆಲ್ಲವೂ ಏಕೆ? ನೀವೇನಾದರೂ ನಿಜವಾದ ಸಂಗತಿಯನ್ನು ಬಲ್ಲಿರೊ?

ಗಿ॥ಯಮ್ಮ:—ಸುಳ್ಳನ್ನು ಹೇಳಿ ನನ್ನ ಮನೆಗೆ ಚಿನ್ನದ ಕಳಸವನ್ನು ಹಾಕಿ ಸುತ್ತೀನಪ್ಪ! ಅವಳು ನಿನ್ನೆಯ ರಾತ್ರಿ ನಿನ್ನ ಷಡ್ಡಕ ತಂತ್ರನಾಥನೊಡನೆ ಓಡಿಹೋಗಲು ಸಿದ್ಧಳಾಗಿದ್ದಳು. ನಾನೇ ನೋಡಿದೆ. ಅವನು ಧರ್ಮಕ್ಕೂ ನಿನಗೂ ಹೆದರಿ, ಹೇಗೋ ತಪ್ಪಿಸಿಕೊಂಡು ಓಡಿಬಂದನು. ಲಜ್ಜೆಗೆಟ್ಟು ಬೀದಿಯಲ್ಲಿ ನಿಲ್ಲದಿದ್ದರೂ, ಒಳಗೇ ಎಂತೆಂತಹ ಕೆಲಸಗಳನ್ನು ಮಾಡುವಳೆಂದು ಬಲ್ಲೆ? ನೀನಂತು, ನಿಮ್ಮ ಅಪ್ಪ ಅಜ್ಜಂದಿರು ಗಳಿಸಿಟ್ಟಿದ್ದ ದ್ರವ್ಯವೆಲ್ಲವನ್ನೂ ಕಸಕ್ಕೂ ಕಡೆಯಾಗಿ ಹಾಳುಮಾಡುತ್ತಿರುವೆ! ನಿಮ್ಮಿಬ್ಬರ ದುರ್ವರ್ತನದಿಂದ ನಮ್ಮ ಜನಕ್ಕೇ ಅಗೌರವವುಂಟಾಗಿದೆ.' ಹೀಗೆ ಹೇಳುತ್ತಿದ್ದಂತೆಯೇ ಗಿರಿಯಮ್ಮನ ಮುಖವು ಕೆಂಪೇರಿ ಕೋಪದಿಂದ ಮಯ್ನಡುಗುವಂತಾಯ್ತು, ಗಂಡನ ಕಡೆಗೆ ತಿರುಗಿ ಕರ್ಕಶಸ್ವರದಿಂದ 'ನಿಮಗೆ ಸ್ವಲ್ಪವೂ ಬುದ್ಧಿಯಿಲ್ಲ! ಇಂತಹ ಪೋಕರಿ ಹುಡುಗರನ್ನೆಲ್ಲ ಮನೆಗೆ ಸೇರಿಸುವಿರಿ! ಇಂತವರಿಂದ ನಿಮಗಾಗುವ ಆದಾಯವೇನು? ಈಗಳೂ ಹೊರಗೆ ಕಳಿಸಬಾರದೆ? ನಿಮಗೇಕೆ ಈ ಮಂಕುಬುದ್ಧಿ?'

ವಿನೋದನು ಕ್ಲೇಶರೋಷಳಿಂದ ಮಯ್ಮರೆತು.—'ಅಮ್ಮ! ಸಾಕು! ಸಾಕು!! ನಿಮಗೂ, ನಿಮ್ಮ ಮಾತುಗಳಿಗೂ, ನಿಮ್ಮ ಮನೆಗೂ, ಇದೊ ಇದೊ ಅನೇಕಾನೇಕ ವಂದನೆಗಳು!!!' ಎಂದು ಕೈಮುಗಿದು, ಅಲ್ಲಿ ನಿಲ್ಲದೆ ಹೊರಟುಹೋದನು.

ಸಿದ್ಧಾಂತಿ:—ಖಿನ್ನಮನಸ್ಕನಾಗಿ ಸುಮ್ಮನೆ ಕುಳಿತುಬಿಟ್ಟನು.

ಗಿರಿಯಮ್ಮನು ಸಂತೋಷಾತಿಶಯದಿಂದ ಸಭಾಂಗಣಕ್ಕೆ ಹೋಗಿ ತನ್ನ ಪ್ರಭಾವವನ್ನು ಪ್ರಕಾಶಪಡಿಸಿಕೊಂಡು ಅಂದಿನ ಸಭೆಯನ್ನು ವಿಸರ್ಜಿಸಿದಳು.

ಸುಹೃದಯ ಸೋದರಿಯರೇ!

ನೀವೂ ಇಂತಹ ಸಭೆಗೆ ಸಂಬಂಧಿಸಿದವರೇ ಆಗಿದ್ದರೆ, ನಮ್ಮ ಮೇಲೆ ನಿಮಗೆ ಅತ್ಯಾಗ್ರಹವಿರಬಹುದು! ಆದರೆ ನಾವೇನು ಮಾಡುವ? ಒಂದು

ಸಂಸಾರ ಚಿತ್ರದ ಸ್ವರೂಪವನ್ನು ಯಥಾವತ್ತಾಗಿ ನಿಮ್ಮ ಮುಂದಿಟ್ಟಿರುವೆವಲ್ಲದೆ ಬೇರಿಲ್ಲ. ಆದರೂ, ಪ್ರಕೃತಿಯು ಒಬ್ಬೊಬ್ಬನಿಗೆ ಒಂದೊಂದು ಬಗೆಯಾಗಿ ಕಾಣುವಂತೆ ಇದೂ ಕಾಣುತ್ತಿರಬಹುದು. ಸಂಸಾರಸಾಗರದಲ್ಲಿ ಮುಳುಗಿ ತೇಲುತ್ತಿರುವ ಮಹಾಶಯರಿಗೆ ಇದು ಸುಳ್ಳಾಗಿ ತೋರಲಾರದು. ಹಾಗಾದರೆ ನಿಮ್ಮಲ್ಲಿ ಇಂತಹ ಸಭಾಸದರಾಗಿರುವವರಿದ್ದರೂ—ಅವರು, ಇಂದೇ ದೃಢಸಂಕಲ್ಪದಿಂದ ಅನಂಗೀಕಾರ ಪತ್ರವನ್ನು ಬರೆದು ಕಳಿಸಿಬಿಡಬೇಕೆಂಬುದೇ ನಮ್ಮ ಪ್ರಾರ್ಥನೆ.

ಷಷ್ಠಪರಿಚ್ಛೇದ.

(ದುರಾಗ್ರಹದಲ್ಲಿ)

ರಾತ್ರಿ ಎಂಟುಗಂಟೆ ಹೊಡೆದುಹೋಗಿದೆ. ವಿನೋದನು ಇನ್ನೂ ಮನೆಗೆಬಂದಿಲ್ಲ. ಸುಶೀಲೆಯು 'ವಿನೋದಿನೀ' ಎಂಬ ಪತ್ರಿಕೆಯನ್ನು ಕಯ್ಯಲ್ಲಿ ಹಿಡಿದು ಅಂಗಳದಲ್ಲಿ ದೀಪದ ಮುಂದೆ ಕುಳಿತಿದ್ದಳು. ಬಳಿಯಲ್ಲಿಯೇ ಮಯೂರಿಯು ಕುಳಿತು ಮಾತನಾಡುತ್ತಿದ್ದಳು.

ಮಯೂರಿ:—'ಅಮ್ಮಾ ! ಹೀಗೇಕೆ ? ಅವರು ಮನೆಗೆ ಬಾರದಿದ್ದರೆ ನೀವು ಊಟಮಾಡಬಾರದೇ ? ಇಂದೋ ನಾಳೆಯೋ ಕೋಪವು ಶಾಂತವಾಗಬಹುದು. ಉಪವಾಸ ಮಾಡಿದರೆ ಏನಾದೀತು ?

ಸುಶೀಲೆ:—ಉಪವಾಸವೆಲ್ಲಿಯದು ? ನಾನು ಉಪವಾಸವಿಲ್ಲ.

ಮಯೂರಿ:—ಉಪವಾಸವಿಲ್ಲದೆ ಮತ್ತೇನು ? ದೇವರ ನಿವೇದನೆಗೆ ಇಟ್ಟಿದ್ದ ಆರೆಪಾವು ಹಾಲನ್ನು ಕುಡಿದರೆ ಹೊಟ್ಟೆ ತುಂಬುವುದೆ ? ನಿನ್ನೆ

ಮಾಡಿದ ಅಡಿಗೆಯೆಲ್ಲಾ ನಮ್ಮ ಪಾಲಾಯ್ತು. ಇಂದು ಒಲೆಯನ್ನೇ ಹತ್ತಿಸಿಲ್ಲ.

ಸುಶೀಲೆ:—ಆರಿಗಾಗಿ ಅಡಲಿ ? ಆರಿಗೆ ಬಡಿಸಲಿ ? ಹೇಳು ಮಯೂರಿ ?

ಮಯೂರಿ:—ನಿಮಗೆ ಅವಶ್ಯಕವಿಲ್ಲವೇಸು ?

ಸುಶೀಲೆ: —ನನಗೆ ಬುದ್ಧಿ ಸ್ವಾಧೀನದಲ್ಲಿದ್ದರಲ್ಲವೆ ? ಈಗ ನೋಡು ! ನನ್ನ ಸ್ವಾಮಿಗೆ ನನ್ನಮೇಲೆ ಕೋಪವೆಷ್ಟು ಹೆಚ್ಚಾಗಿದೆ ? ನಿನ್ನೆ ಮಧ್ಯಾಹ್ನದಲ್ಲಿ ಊಟಕ್ಕೆ ಬರುವುದಾಗಿ ಹೇಳಿ ಹೋಗಿದ್ದರು, ಬರಲಿಲ್ಲ. ರಾತ್ರಿ ಹನ್ನೊಂದು ಗಂಟೆಗೆ ಬಂದು ನಡೆಯಿಸಿದುದೆಲ್ಲವನ್ನೂ ನೀನೇ ಕಣ್ಣಾರೆ ಕಂಡಿರುವೆ ? ಇಂದು ಇನ್ನೂ ಬಂದಿಲ್ಲ. ನಿನ್ನೆ ಅವರು ಬರುವರೆಂದು ಇದಿರುನೋಡುತ್ತೆ ಹಸಿದಿದ್ದೆನು. ಇಂದು ಹಸಿದಿಲ್ಲ. ಪ್ರಾಣಾಧಾರಕ್ಕಾಗಿ ತಕ್ಕಷ್ಟು ಆಹಾರವನ್ನು ತೆಗೆದುಕೊಂಡಿರುವೆನು. ನನಗೆ ಅಡುಗೆ ಮಾಡಲು ಮನಸ್ಸು ಒಪ್ಪಲಿಲ್ಲ. ಮಯೂರಿ ! ಗಂಡನಿಲ್ಲದ ವೇಳೆಯನ್ನೇ ನೋಡುತ್ತಿದ್ದು ತನಗೆ ಬೇಕಾದುದನ್ನು ಮಾಡಿ ತಿನ್ನುವ ಭಂಡೆಯೆಂದು ನನ್ನನ್ನು ತಿಳಿಯದಿರು ? ಅವರು ಮನೆಗೆ ಬಂದು ಊಟಮಾಡುವೆನೆಂದು ಹೇಳುವವರೆಗೂ ನಾನು ಅಡಲೊಲ್ಲೆನೆಂದು ತಿಳಿ.

ಇವರ ಮಾತು ಮುಗಿವುದರಲ್ಲಿಯೇ ಸುಮಾರು ಇಪ್ಪತ್ತು ವರ್ಷದ ಯುವತಿಯಾದ ವಿಧವೆಯೊಬ್ಬಳು ಬಂದು ಸುಶೀಲೆಯಿದಿರೆ ನಿಂತಳು.

ಮಯೂರಿ:—ಸುಶೀಲೆಯನ್ನು ಕುರಿತು—‘ ಅಮ್ಮ ! ನಿಮ್ಮ ಬಾಲ್ಯಸ್ನೇಹಿತೆ ಬಂದಿರುವಳು.

ಸುಶೀಲೆ: — ತಲೆಯೆತ್ತಿ ಮೆಲ್ಲನೆ, ‘ಚಪಲೆ! ಕುಳಿತುಕೊ !’

ಚಪಲೆ:—ಅದೇನು ? ನಿನ್ನ ಕಯ್ಯಲ್ಲಿ ಈ ತಿಂಗಳ ‘ ವಿನೋದಿನಿ ’ ಯೊ ?

ಸುಶೀಲೆ:—ಅಹುದು.

ಚಪಲೆ:—ಈ ಪತ್ರಿಕೆ ಈಚೆಗೆ ಕೆಟ್ಟುಹೋಯ್ತು. ನಮಗೆ ಬೇಕಾದ ವಿಷಯವಾವುದೂ ಇರುವುದಿಲ್ಲ. ಈಗ ನಾನು ಅದನ್ನು ತರಿಸುವುದನ್ನೇ ಬಿಟ್ಟುಬಿಟ್ಟೆನು.

ಸುಶೀಲೆ:—ಒಬ್ಬರಿಗೆ ಒಂದು ಸಮಯಲ್ಲಿ ಮಹೋಪಯೋಗವೂ, ಮಹಿಮಾಪ್ರದವೂ ಆಗಿ ತೋರುವ ವಸ್ತು, ಮತ್ತೊಂದು ವೇಳೆಯಲ್ಲಿ ಅವರಿಗೇ ಬೇರೆಯಾಗಿ ಕಂಡುಬರುವುದುಂಟು.

ಚಪಲೆ:—ಯಾವ ಯಾವ ಕಾಲದಲ್ಲಿ ಹೇಗೆ ಹೇಗೆ ಕಾಣುವುದು ? ಹೇಳಬಲ್ಲೆಯೊ ?

ಸುಶೀಲೆ:—ಹೇಳಿ ಫಲವಿಲ್ಲ ; ಹೇಗೆಂದರೆ,—ಒಬ್ಬ ಸತ್ಯಸಂಧನು 'ಸತ್ಯಂವದ' ಎಂದು ಬರೆದಿರುವ ಉಪನ್ಯಾಸವನ್ನು ಕುರಿತು ಓದುವಾಗ ಆ ಉಪನ್ಯಾಸದಲ್ಲಿರುವ ಸದ್ಗುಣಗಳನ್ನು ಗ್ರಹಿಸಿ ಅದನ್ನು ಸರ್ವೋತ್ತಮವಾದುದೆಂದು ಹೊಗಳುವನು. ಅವನೇ ಸಹವಾಸದೋಷದಿಂದ ಸುಳ್ಳನ್ನೇ ಅವಲಂಬಿಸಿದರೆ ಆ ಉಪನ್ಯಾಸವು ಅವನಿಗೆಂತೂ ರುಚಿಸದು. ಆಗ ಅವನು ಅದರಲ್ಲಿರುವ ದೋಷಗಳನ್ನೇ ಹುಡುಕುತ್ತ ಬರುವನು. ಹೀಗೆಯೇ ಎಲ್ಲವನ್ನೂ ತಿಳಿಯಬೇಕು.

ಚಪಲೆ:—ಆಗಲಿ ; ನಾನು ಮೊದಲು ಸದ್ಗುಣಿಯಾಗಿದ್ದೆನೊ ? ಈಗ ಆಗಿರುವೆನೊ ?

ಸುಶೀಲೆ:—ಉದಾಸೀನದಿಂದ,—ನಾನದನ್ನು ಹೇಳಲಾರೆನು. ನೀನೇ ತಿಳಿದುನೋಡಿದರೆ ಲೇಸಾದೀತು.

ಚಪಲೆ:—ನಿನ್ನ ಗಂಡನೆಲ್ಲಿ ?

ಸುಶೀಲೆ:—ಮನೆಯಲ್ಲಿಲ್ಲ.

ಚಪಲೆ:— ಇನ್ನೂ ಬರಲೇ ಇಲ್ಲವೆ ? ಈ ದಿನವೂ ಬರುವನೋ? ಇಲ್ಲವೊ ?

ಸುಶೀಲೆ:—ಈ ವರೆಗೂ ಬಂದಿಲ್ಲ, ಬರಬಹುದೋ-ಇಲ್ಲವೊ ತಿಳಿಯದು.

ಚಪಲೆ:—ಭಲೆ! ನಿನ್ನ ಗಂಡನನ್ನು ಬಲುಚೆನ್ನಾಗಿ ವಶಮಾಡಿಕೊಂಡಿರುವೆ!

ಸುಶೀಲೆ:—ಚಪಲೆ! ನೀನು ಚಿಕ್ಕಂದಿನ ಒಡನಾಡಿಯಾದುದರಿಂದ ಈ ಮಾತನ್ನಾಡಿದರೂ ಕೇಳಿಕೊಂಡು ಸುಮ್ಮನಿರಬೇಕಾಗಿದೆ. ನೀನು ಈ ರೀತಿ ಮಾತನಾಡಬಾರದು! ನನ್ನ ಸ್ವಾಮಿ, ನನ್ನ ವಶವಾಗಿರಬೇಕೆಂದಾಗಲೀ, ನನ್ನ ಆಜ್ಞಾನುಸಾರ ನಡೆಯಬೇಕೆಂದಾಗಲೀ ನಾನೆಂದೂ ಮನಸ್ಸಿನಲ್ಲಿಯೂ ಭಾವಿಸಲೊಲ್ಲೆನು. ಆ ನನ್ನ ಸ್ವಾಮಿಯ ಶ್ರೇಯೋಭಿವೃದ್ಧಿ ಚಿನ್ತನೆಯೊಂದೇ ನನ್ನ ನಿರಂತರದ ಪ್ರಾರ್ಥನೆಯಾಗಿದೆ. ಸ್ವಾಮಿಯಲ್ಲಿ ನನಗೆ ಎಂದೆಂದಿಗೂ ಈ ದೈನ್ಯವೃತ್ತಿಯೇ ಸ್ಥಿರವಾಗಿರಲಿ!

ಚಪಲೆ:—ಆ ವಿಷಯ ಹೋಗಲಿ; ಈ ದಿನ ಹರಿಕಥೆ! ನಾನು ಹೊರಟಿರುತ್ತೇನೆ. ನೀನೂ ಬರುವೆಯೊ?

ಸುಶೀಲೆ:—ಏಕೆ ಹೋಗಬೇಕು? ನಾನು ಬರುವುದಿಲ್ಲ.

ಚಪಲೆ:—ಹರಿಕಥಾಶ್ರವಣದಿಂದ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಲಿಕ್ಕಾಗಿಯೇ ಹೋಗುವುದು.

ಸುಶೀಲೆ:—ಹರಿಕಥೆಯಾಗುವ ಸ್ಥಳಕ್ಕೆ ಹೋಗಿಯೇ ಜ್ಞಾನವನ್ನು ವೃದ್ಧಿಹೊಂದಿಸಬೇಕೆ? ಮನೆಯಲ್ಲಿದ್ದೇ ಸದ್ಗ್ರಂಥಾವಲೋಕನದಿಂದ ವೃದ್ಧಿಪಡಿಸಿಕೊಂಡರಾಗದೆ? ನನ್ನ ಅಭಿಪ್ರಾಯದಲ್ಲಿ—ಯುವತಿಯರು,—ಹಾಗೂ ನಿಮ್ಮಂತಹರು ಅಲ್ಲಿಗೆ ಹೋಗಬಾರದು.

ಚಪಲೆ:—ಅದೆಲ್ಲಾ ನನಗೇಕೆ? ಹೋಗಲಿ! ಪರಮಾತ್ಮನ ಸ್ಮರಣೆಯಾದರೂ ಆಗುವುದೋ ಇಲ್ಲವೊ?

ಸುಶೀಲೆ:—ನಿಜ! ಆಗುವುದು! ಆದರೆ ಆ ಸ್ಮರಣೆಯನ್ನು ಮನೆಯಲ್ಲಿಯೇ ಮಾಡಲಾಗದೊ? ಈ ಕಾಲದಲ್ಲಿ ಕಥೆಗೆ ಬರುವವರೆಲ್ಲರೂ ಹರಿಕಥೆಗಾಗಿಯೇ ಬರುವವರಾಗಿಲ್ಲ. ಆದುದರಿಂದ ನಮ್ಮಂತಹರು ಹರಿಕಥೆ, ನಾಟಕಗಳಿಗೆಂದು—ಎಂದೂ ಹೋಗದೆ ಇರುವುದೇ ಒಳ್ಳೆಯದು.

ಚಪಲೆ:—ಹೇಗೆ ? ಏತಕ್ಕಾಗಿ ?

ಸುಶೀಲೆ:—ನಮ್ಮಲ್ಲಿ ಅನೇಕರಿಗೆ ದಾಸರು ಹೇಳುವ ನೀತಿಬೋಧೆಯಲ್ಲಿ ಗಮನವಿರುವುದಿಲ್ಲ. ಅವರಿಗಾವಾಗಳೂ ಉಪಕಥೆ, ಶೃಂಗಾರವರ್ಣನೆಗಳಲ್ಲಿಯೇ ಗಮನವು ಹೆಚ್ಚಾಗಿರುವುದು. ನಮ್ಮ ಸ್ತ್ರೀಯರು ಹರಿಕಥೆ, ಪುರಾಣಗಳೆಂದು ಹೋಗುವುರಷ್ಟೆ ! ಅಲ್ಲಿ ಊರಲ್ಲಿರುವವರ ಗೃಹಕೃತ್ಯವೆಲ್ಲವೂ ನಡೆವುವು. ಪುರಾಣದಲ್ಲಿ ಗಮನವೇ ಇರುವುದಿಲ್ಲ. ಹರಿಕಥೆಗೆ ಹೋಗಿ ಬಂದ ಅನೇಕರನ್ನು ನಾನು ಪ್ರಶ್ನೆ ಮಾಡಿರುತ್ತೇನೆ. ಅವರಿಗೆ ಇಂತಹ ಕಥೆಯೆಂದು ಹೇಳುವುದಕ್ಕಾದರೂ ಬರುವುದಿಲ್ಲ. ಏಕೆಂದರೆ ಅವರು ಅದನ್ನು ಗಮನವಿಟ್ಟು ಕೇಳದುದರಿಂದಲೇ ! ಹೀಗೆಯೇ ನಮ್ಮಲ್ಲಿ ಅನೇಕ ಕುಂದುಕೊರತೆಗಳಿವೆ. ಅದು ಹೋಗಲಿ ; ಕುಲವಧುವಿಗೆ ಸ್ವಾಮಿಯೇ ಸರ್ವಸ್ವವು. ಆತನಿಂದಲೇ ಪುರಾಣ-ಪುಣ್ಯ ಕಥೆಗಳನ್ನು ತಿಳಿದುಕೊಳ್ಳಬಹುದು. ಆದುದರಿಂದಲೇ ನಾನು ಎಲ್ಲಿಗೂ ಬರಲೊಪ್ಪುವುದಿಲ್ಲ. ನೀನೂ ರಾತ್ರಿ ಇಷ್ಟುಹೊತ್ತಿನಲ್ಲಿ ಒಬ್ಬಳೇ ಹೋಗುವುದು ನನಗೆ ಸಮ್ಮತವಾಗಿಲ್ಲ.

ಚಪಲೆ:—ಹೆದರಿಕೆಯೇನು ?

ಸುಶೀಲೆ:—ಹೆಂಗಸರಿಗೆ ಎಂದೂ ಹೆದರಿಕೆಯಿದ್ದೇ ಇರಬೇಕು. ಏಕೆಂಬೆಯೋ ? ಅವರೆಂದೂ ಅಬಲೆಯರು. ದುಷ್ಟರು, ಕುಡಿದವರು, ಹುಚ್ಚರು, ಮೊದಲಾದ ಪೋಲಿಗಳಾರಾದರೂ ಅತ್ಯಾಚಾರವನ್ನು ನಡೆಯಿಸಲು ಪ್ರಯತ್ನಪಟ್ಟರೆ, ಅವರೇನು ಮಾಡಬಲ್ಲರು ? ಇದಕ್ಕಾಗಿಯೇ ಒಂಟಿಯಾಗಿ ಹೆಂಗಸು ಹೊರಗೆ ಹೋಗಬಾರದೆನ್ನುವರು.

ಚಪಲೆ:—ಇದಕ್ಕೆಲ್ಲಾ ಹೆದರಿಕೊಂಡು ಕುಳಿತಿರು. ನನಗೆ ಧೈರ್ಯವಿದೆ ! ನಾನು ಗಂಡುಬೀರಿ ! ದುಷ್ಟೆ !! ಏನೋ-ಜತೆಗಾತಿಯೆಂದು

ಕರೆಯೆ ಬಂದುದಕ್ಕೆ ಒಳ್ಳೆ ಮರ್ಯಾದೆಯನ್ನೇ ಮಾಡಿದೆಯಮ್ಮ! ಸಾಕು ! ಸಾಕು ! ನೀನೇ ಮಹಾ ಸತ್ಯವಂತೆ!

ಮಯೂರಿ:—ಚಪಲೆಯನ್ನು ಕುರಿತು—“ ಅಮ್ಮ ! ಸುಮ್ಮನೆ ಕೋಪ ಮಾಡಬಾರದು. ಇವರು ಹೇಳಿರುವುದರಲ್ಲಿ ತಪ್ಪೇನು ? ಇವರು ಹೇಳಿದುದೆಲ್ಲವೂ ಒಳ್ಳೆಯದೇ ಅಲ್ಲದೆ ಸ್ತ್ರೀ ಪ್ರಪಂಚಕ್ಕೆಲ್ಲಾ ಅತ್ಯು ಪಯುಕ್ತವಾದುದೇ ಆಗಿರುವುದೆಂದು ತಿಳಿಯಿರಿ. ನಿಮ್ಮಾ ಬಾ ಹ್ಯಾಡಂಬರದ ಕೆಲಸಗಳು ಅವರಿಗೆ ಸಂತೋಷಪ್ರದವಾದುವಲ್ಲ. ಅಷ್ಟಕ್ಕೆ ಆಗ್ರಹವೇಕೆ ?

ಚಪಲೆ:—ತನ್ನ ಚಂಚಲ ಕಟಾಕ್ಷಬಾಣನ್ನು ಆಕರ್ಣಾಂತವಾಗಿ ಸೆಳೆದು ಬಂದು ಬಾರಿ ಪ್ರಯತ್ನಪುರಸ್ಸರವಾಗಿ ಬೀದಿಯ ಕಡೆಗೆಸೆದು, ಮತ್ತೆ ಸುಶೀಲೆಯ ಕಡೆಗೆ ತಿರುಗಿ-‘ಎಲೆ, ಸುಶೀಲೆ! ನಿನ್ನ ದುರ್ಗು ಣಗಳನ್ನು ಯಾರೂ ಕಾಣರೊ? ನಿನ್ನ ಬೂಟಕವನ್ನೆಲ್ಲರೂ ಬ ಲ್ಲರು .... ನಿನ್ನ ದುರಾಚಾರಕ್ಕೆ ಈ ಮಯೂರಿಯೂ ಸಹಕಾರಿಯೆಂಬುದು ಲೋ ಕಕ್ಕೇ ತಿಳಿದಿದೆ.’

ಚಪಲೆಯ ಮಾತು ಮುಗಿವುದಕ್ಕೆ ಮೊದಲೇ ಕ್ರೋಧಾ ವೇಶದಿಂದ ಬೀಗಿದ್ದ ವಿನೋದನು ಬಂದು ಕೆಂಗಣ್ಣಿಳಿಂದೆ ಬಿರಬಿರನೆ ನೋ ಡುತ್ತೆ ನಿಂತನು. ವಿನೋದನ ವೇಷ ಮುಖಭಾವಗಳನ್ನು ನೋಡಿ ಸುಶೀ ಲೆಗೆ ಭಯ-ವಿಸ್ಮಯ-ಪರಿತಾಪಗಳೇಕಕಾಲದಲ್ಲಿ ಹೃದ್ಗತವಾಗಲು ಸ್ತಬ್ಧ ಳಾಗಿ ನಿಂತಳು. ಮಯೂರಿಯೂ ಅಂಜಿಕೆಯಿಂದ ನಡಗುತ್ತೆ ಸರಿದು ನಿಂತಳು. ಆದರೆ, ಚಪಲೆಯ ಮುಖದಲ್ಲಿ ಉತ್ಸಾಹವೇ ತೋರುತ್ತಿದ್ದುದ ಲ್ಲದೆ ಸ್ವಲ್ಪವೂ ಹೆದರಿದಂತೆ ತೋರಲಿಲ್ಲ. ಸುಶೀಲೆಯ ಕಡೆಗೆ ತಿರುಗಿ— ‘ ಸುಶೀಲೆ ! ನಿನ್ನ ಗಂಡನೇ ಬಂದನು. ಅವನಿಂದೇ ಹರಿಕಥೆಯನ್ನು ಕೇಳಮ್ಮ ?’

ಸುಶೀಲೆ:—ನಿರುತ್ತರಳಾಗಿ ತಲೆಬಾಗಿ ನಿಂತಿದ್ದಳು.

ವಿನೋದ:—ವಿಕಾರವಾಗಿ ನಗುತ್ತೆ,–'ಚಪಲೆ! ಯಾವನೊಡನೆಯೋ ಓಡಿ ಹೋಗಲು ಸಿದ್ಧವಾಗಿರುವವಳೊಡನೆ ನಿನಗೇಕೆ ಮಾತು?

ಚಪಲೆ:—ಅದೇಕೆ? ಅವಳು ಮಹಾಪತಿವ್ರತಾ ಶಿರೋಮಣಿ! ನನ್ನಂತೆ ಕೆಟ್ಟವಳೇ?

ವಿನೋದ:—ಅಹುದು; ಬಹು ಪತಿವ್ರತೆ!

ಚಪಲೆ:—ಕೊರಳನ್ನು ಕೊಂಕಿಸಿ,—' ನಿಮ್ಮ ನಿಮ್ಮ ಸಂಸಾರತಾಪಗಳು ನಿಮಗೆ! ಹೇಗಾದರೂ ಮಾಡಿರಿ! ನನಗೇನು?' ಎಂದು ಹೇಳಿ ಅಲ್ಲಿ ನಿಲ್ಲದೆ ಹೊರಟುಹೋದಳು.

ವಿನೋದ:—ಮಯೂರಿಯ ಕಡೆಗೆ ತಿರುಗಿ ಹಲ್ಕಡಿಯುತ್ತೆ,—" ಎಲೆ, ದುಷ್ಟೆ! ಕುಟಿಲೆ!! ನಿಜವನ್ನು ಹೇಳು? ಇವಳು ಯಾರೊಡನೆ ಓಡಿಹೋಗಬೇಕೆಂದಿದ್ದಳು? ಅದಕ್ಕಾಗಿ ಆವಾವ ಸನ್ನಾಹಗಳನ್ನು ನಡೆಯಿಸಿದಿರಿ?"

ಮಯೂರಿ:—ಅನುಕಂಪಿತ ಸ್ವರದಿಂದ,—' ರಾಮ! ರಾಮ! ನೀನೇ ಸಾಕ್ಷಿಯಾಗಿರುವೆ? ದುಷ್ಟರಿಗೆ ಜಗತ್ತೇ ದೋಷಮಯವಾಗಿ ಕಾಣುತ್ತಿರಬೇಕಲ್ಲವೆ? ಈ ಸಾಧ್ವಿಯಲ್ಲಿ ಹೀಗೆ ಕಲಂಕವನ್ನು ಚಿನ್ತಿಸುವುದೇಕೆ? ಈ ದುರ್ಭಾವನೆಯುಂಟಾಗಿರುವುದು ಯಾರ ದೌರ್ಭಾಗ್ಯದಿಂದ? ಇದಕ್ಕೆಂತೂ ನನ್ನಿಂದ ಉತ್ತರವು ದೊರೆಯಲಾರದು.........'

ವಿನೋದ:—ಕಣ್ಗುಡ್ಡೆಗಳನ್ನು ತಿರುಗಿಸುತ್ತೆ,—' ಏನೆಂದೆ? ದುಷ್ಟಪಿಶಾಚಿ! ತಲೆಯೆತ್ತಿ ನೋಡು! ನಾನು ಎಂದಿನಂತೆ ಇಂದು ಮನೆಗೆ ಬಂದಿಲ್ಲ. ಇದೊ, ನನ್ನ ಕಯ್ಯಲ್ಲಿರುವ ಕಯ್ಗತ್ತಿಯನ್ನಾದರೂ ನೋಡಿ ಮಾತಾಡು. ಹೇಗೂ ನೀನೂ ನಿನ್ನ ಯಜಮಾನಿಯೂ ಯಮನೆಡೆಗೆ ಹೋಗುವುದು ನಿಜ.

ಮಯೂರಿ:—ತಿರಸ್ಕಾರದಿಂದ,–‘ದುಡುಕಿ ಕೆಡಲೇಕೆ? ನಾನು ನ್ಯಾಯಕ್ಕೆ ಮಾತ್ರವೇ ದಾಸಿಯಲ್ಲದೆ, ಅನ್ಯಾಯಕ್ಕಲ್ಲ. ಸುಶೀಲೆಗೆ ನಾನು ಕೇವಲ ದಾಸಿಯಲ್ಲ. ಅವಳ ಪ್ರಾಣಾಪ್ತ ಸಖಿಯೇ ಸರಿ. ಕರ್ಮ ಫಲವು ಯಾರಿಗೂ ತಪ್ಪಲಾರದು. ಆ ಬಳಿಕ ನೀವೇ ಪಶ್ಚಾತ್ತಾಪ ಪಡಬೇಕಾದೀತು! ಎಚ್ಚರಿಕೆ! ಎಂದು ಹೇಳಿ ಬೀದಿಗೆ ಹೊರಟುಹೋದಳು.

ವಿನೋದನು ದುರಾಗ್ರಹದಿಂದ ಮಾತಿಲ್ಲದೆ ಸುಶೀಲೆಯ ಕೈಯನ್ನು ಬಿಗಿಯಾಗಿ ಹಿಡಿದು ಮಲಗುವ ಮನೆಗೆ ಎಳೆದೊಯ್ದನು.

ಸುಹೃದಯರೇ!

ಅವಿಚಾರದಿಂದ ಈ ಬಗೆಯಾಗಿ ಸತೀಮಣಿಯಲ್ಲಿ ಕಲಂಕವನ್ನು ಚಿನ್ತಿಸುವರು, ಈಗಳೂ ಇರುವರೇನು? ಹಾಗಿದ್ದರೂ, ಮುಂದೆಯಾದರೂ ಅವರು ವಿಚಾರವಿಮರ್ಶೆಯನ್ನು ಮಾಡುವವರಾದಾರಲ್ಲವೆ?

ಸಪ್ತಮ ಪರಿಚ್ಛೇದ.

(ಘೋರಕೃತ್ಯ)

ಪ್ರಿಯ ಸೋದರಿಯರೇ!

ನಮಗೆ ಶತ್ರುಗಳಾರು? ಮಿತ್ರರಾರು? ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯರೆಂಬ ಈ ಆರುಮಂದಿಯೇ ನಮಗೆ ಪ್ರಬಲ ಶತ್ರುಗಳಲ್ಲವೇನು? ಇವರನ್ನು ಬಿಟ್ಟು ಶತ್ರುಗಳಿನ್ನಾರು? ಕಿವಿಗೆ ಪ್ರಿಯವಾಗಿ ತೋರುವ ಮಾತುಗಳಿಂದ ಮರುಳ್ಮಾಡಿ ಹಳ್ಳಕ್ಕೆ ಕೆಡಹುವಂತಹ ಹಿತಶತ್ರುಗಳಂತಿರುವವರೇ ಕಾಮಕ್ರೋಧಾದಿಗಳಲ್ಲವೇನು? ಇವರಿಂದ ಆಗದ ಕೆಟ್ಟಕಾರ್ಯಗಳಾದರೂ ಯಾವುವು? ಕಾಮದಿಂದ ಕ್ರೋಧವು ಹುಟ್ಟುವುದು. ಕ್ರೋಧಕ್ಕೂ ಹೆಚ್ಚಾದ ಪಾತಕವು ಮತ್ತೊಂದಿಲ್ಲ.

ಕ್ರೋಧಾನ್ವಿತನೇ ವಿಚಾರಶೂನ್ಯನಾದ ಕುರುಡನು. ಕುರುಡನಿಂದಾಗುವ ಸತ್ಕಾರ್ಯವಾವುದೂ ಇಲ್ಲವಾದರೂ ಕುರುಡನಿಗೆ ಇತರ ವಿಷಮಗುಣಗಳೂ ಸೇರಿದರೆ ಹುಚ್ಚನೇ ಆಗುವನು. ಹುಚ್ಚನಾದವನು ಮಾಡುವ ಭಯಂಕರ ವಾದ ಕೆಲಸಗಳನ್ನು ಸಾಮಾನ್ಯವಾಗಿ ಎಲ್ಲರೂ ತಿಳಿಯಬಲ್ಲರಲ್ಲವೆ ? ಆದರೆ, ಕೋಪವನ್ನು ತಡೆಯಬಲ್ಲ ಧೀರರು ನಮ್ಮವರಲ್ಲಿ ವಿರಳವಾಗಿದ್ದರೂ, ಕೋಪದಲ್ಲಿ ದುಡುಕಿ ಮಾಡಿದ ಕೆಟ್ಟಕೆಲಸಕ್ಕಾಗಿ ಆ ಬಳಿಕ ಆಮರಣಾಂತವಾದ ಅನುತಾಪದಿಂದ ಕಂದಿಕುಂದುತ್ತಿರುವವರನ್ನು ನೋಡಿಯಾದರೂ ಕೋಪವನ್ನು ತಡೆಗಟ್ಟಲು ಪ್ರಯತ್ನ ಪಡಬೇಕಾದುದೇ ನಮ್ಮವರ ಕರ್ತವ್ಯವೆನ್ನಿಸಿದೆಯಲ್ಲವೆ ? ಇದಕ್ಕಾಗಿಯೇ 'ತಡೆದುನೋಡು, ಹಿಡಿದುಮಾಡು' ಎಂಬ ನೀತಿ ಹುಟ್ಟಿರುವುದು. ಈ ನೀತಿಯನ್ನು ಅನುಸರಿಸದೆ ನಡೆದವರಿಗೆ ಎಡರೂ ತಪ್ಪದಿರುವುದು.

ಪ್ರಕೃತದಲ್ಲಿ ಜ್ಞಾನಶೂನ್ಯನಾದ ವಿನೋದನು ಸುಶೀಲೆಯ ಕೈಹಿಡಿದು, ಬೆನ್ನಮೇಲೆ ಬಲವಾಗಿ ಗುದ್ದಿ ' ಪಾತಕಿ ! ಹೇಳು ? ನಿನಗೆ ಬದುಕಿರಲು ಇಷ್ಟವಿದೆಯೊ ? ಇಲ್ಲವೊ ?

ಸುಶೀಲೆ:—ಇಷ್ಟರ ಕೋಪಕ್ಕೆ ಕಾರಣವೇನು ? ನಾನು ಸಾಯಬೇಕೆಂದರೆ ಸಾಯುವೆನೆ ?

ವಿನೋದ:—ಈಗ ನಿನ್ನ ಪ್ರಾಣವು ನನ್ನ ಕಯ್ಯಲ್ಲಿದೆ. ಸುಳ್ಳಾಡಿದರೆ ನಿಜವಾಗಿಯೂ ಸಾಯುವೆ !

ಸುಶೀಲೆ:—ನಾನು ಎಂದೂ ಸುಳ್ಳಾಡುವುದಿಲ್ಲ.

ವಿನೋದ:—ನಿನ್ನೆ ನೀನು ನಡೆಯಿಸಿದ ದುರಭಿಸಂಧಿಯೇನು ?

ಸುಶೀಲೆ:—ಮತ್ತೇನೂ ಇಲ್ಲ. ಭಗವಂತನಲ್ಲಿ ತಮಗೆ ಸದಸದ್ವಿವೇಚನೆಯುಂಟುಮಾಡೆಂದು ಪ್ರಾರ್ಥಿಸಿದುದೇ !

ವಿನೋದ:—ನಿಜವೇ ? ನೀನು ಯಾರನ್ನೂ ಪ್ರೀತಿಸಿಲ್ಲವೆ ? ಯಾರೊಡನೆಯೂ ಓಡಿಹೋಗಲು ಪ್ರಯತ್ನಪಡಲಿಲ್ಲವೆ ?

ಸುಶೀಲೆ:—ಪ್ರೀತಿಯನ್ನೂ-ನನ್ನ ಸರ್ವಸ್ವವನ್ನೂ ತಮ್ಮಲ್ಲಿಯೇ ಸಮರ್ಪಿಸಿರುವೆನು. ಮತ್ತಾರನ್ನೂ ಪ್ರೀತಿಸಬೇಕಾದುದಿಲ್ಲ. ತಮ್ಮ ಸೇವೆಯೊಂದಲ್ಲದೆ ನಾನು ಮತ್ತಾರನ್ನೇ ಆದರೂ ಸೇವಿಸಬೇಕಾದುದಾಗಲೀ-ಪ್ರೀತಿಸಬೇಕಾದುದಾಗಲೀ ಇರುವುದಿಲ್ಲ. ನಾನು ಹೇಳಬೇಕಾದುದು ಇಷ್ಟೇ! ಓಡಿಹೋಗಬೇಕೆಂಬ ದುರಾಶೆ, ನನ್ನನ್ನು ಕನಸಿನಲ್ಲಿಯೂ ಮುಟ್ಟುವಂತಿಲ್ಲ. ತಮ್ಮ ಇಂದಿನ ಉದ್ವೇಗ-ಸಂದೇಹಗಳಿಗೆ ಕಾರಣವನ್ನು ತಿಳಿಸಿದರೆ,........

ವಿನೋದ:—ತಿಳಿಸಿದರೇನು ಮಾಡುವೆ ?

ಸುಶೀಲೆ:—ನಾನೇನು ಮಾಡಬಲ್ಲೆ ? ಆಜ್ಞಾನುಸಾರ ನಡೆಯಲು ಸಿದ್ಧಳಾಗಿರುವೆನು. ತಪ್ಪಿದ್ದರೆ ಕ್ಷಮೆಯನ್ನು ಬೇಡುವೆನು.

ವಿನೋದ:—ದುಷ್ಟೆ ! ನೀನು ನನ್ನ ಕಣ್ಣಿಗೆ ಶೂಲವಾಗಿ ಕಾಣುತ್ತಿರುವೆ! ನಿನ್ನ ಮಾತುಗಳು ಕರಗಿಸಿದ ಸೀಸದಂತೆ ನನ್ನ ಕಿವಿಯನ್ನು ಸುಡುತ್ತಿವೆ. ನೀನೇ ನನ್ನ ದಾರಿಗೆ ಮುಳ್ಳು. ನಿನ್ನಿಂದಲೇ ನಾನು ಅಪನಿಂದೆಗೆ ಗುರಿಯಾಪೆನು. ನೀನು ನನ್ನನ್ನು ಮದುವೆಯಾಗಲು ಇಷ್ಟವಿಲ್ಲದವಳಾಗಿದ್ದರೆ, ಆಗಲೇ ಹೇಳಬಾರದಾಗಿತ್ತೇಕೆ ? ಈಗಳೂ ಇಷ್ಟವಿಲ್ಲದಿದ್ದರೆ ಹೇಳು. ಆ ತಂತ್ರನಾಥನೊಡನೆಯೇ ಹೊರಟುಹೋಗು! ಇಲ್ಲವಾದರೆ ಖಂಡಿತವಾಗಿಯೂ ಈ ದಿನ ಬದುಕಲಾರೆ ; ಮೃತ್ಯುವು ನಿನ್ನನ್ನು ಕರೆಯುತ್ತಿದೆಯೆಂದೇ ತಿಳಿ.

ಸುಶೀಲೆ:—ಗದ್ಗದಸ್ವರದಿಂದ,-‹ಸ್ವಾಮಿನ್ ! ತಮಗೆ ನನ್ನ ವಿಷಯವಾಗಿ ಹುಟ್ಟಿರುವ ಈ ಸಂದೇಹಕ್ಕೆ ನನ್ನ ಪ್ರಾರಬ್ಧವೇ ಕಾರಣವೆನ್ನಬೇಕಲ್ಲದೆ ಮತ್ತಾರನ್ನೂ ದೂರತಕ್ಕುದಿಲ್ಲ. ಆತ್ಮಸಾಕ್ಷಿಯಾಗಿಯೂ ನಾನು, ಕರಣತ್ರಯ- ಕಾಲತ್ರಯ - ಅವಸ್ಥಾತ್ರಯಗಳಾವುದರಲ್ಲಿಯೂ ತಮಗೆ ಅಹಿತವನ್ನು ಚಿನ್ತಿಸುವಳಾಗಿಲ್ಲ. ತಮ್ಮ ಕ್ಷೇಮಲಾಭವೊಂದೇ ನನ್ನ ಚಿನ್ತೆಗೊಳಪಟ್ಟುದಲ್ಲದೆ ಮತ್ತಾವುದೂ ಇಲ್ಲ.

ನನ್ನ ಮೇಲಿನ ಸರ್ವಾಧಿಕಾರವನ್ನೂ ವಹಿಸಿರುವ ತಾವು ಏನನ್ನಾದರೂ ಮಾಡಬಹುದು ; ನನ್ನ ಆಕ್ಷೇಪವಿಲ್ಲ. ಹುಟ್ಟಿನೊಡನೆಯೇ ಸಾವೂ ಇರುವುದು. ಸಾವಿಗಾಗಿ ಹೆದರುವುದು ನನ್ನ ಶೀಲವಲ್ಲ. ತಮ್ಮಿದಿರೆ,-ತಮ್ಮ ಈ ಮೂರ್ತಿಯನ್ನು ನೋಡುತ್ತಿರುವಂತೆಯೇ ಉಂಟಾಗುವ ಸಾವು, ಹಾಗೂ ತಮ್ಮ ಕಯ್ಯಿಂದೆ ಉಂಟಾಗುವ ಸಾವು, ನನಗೆ ಬ್ರಹ್ಮಾನಂದಕ್ಕೂ ಮಿಗಿಲಾದುದೇ ಸರಿ! ಆದರೆ ನನ್ನ ಕಡೆಯ ಭಿಕ್ಷೆಯೊಂದನ್ನು ಮಾತ್ರ ದಯಪಾಲಿಸಬೇಕೆಂದು . . . .

ವಿನೋದ:—ಕ್ರೋಧಾಧಿಕ್ಯದಿಂದ ಉನ್ಮತ್ತನಂತೆ ವಿಕೃತಸ್ವರದಲ್ಲಿ,—ಸಾಕು ! ನಿಲ್ಲಿಸು ! ನಿನ್ನೀ ಕುಟಿಲನಟನೆಯಿಂದ ನಾನು ಶಾಂತನಾಗುವಂತಿಲ್ಲ. ನಿನ್ನನ್ನು ಕೊಲ್ಲುವವರೆಗೂ ನನಗೆ ಸುಖಸಮಾಧಾನವಿಲ್ಲ. ಸ್ವೈರಿಣಿಯಾಗಿರುವ ನಿನ್ನ ಮುಖವನ್ನು ನೋಡುವುದೂ ನನಗೆ ಯೋಗ್ಯವಲ್ಲ. ಭ್ರಷ್ಟೆ ! ಪಾತಕಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಹೊಂದು?' ಎಂದು ಹೇಳುತ್ತಿದ್ದಂತೆಯೇ ಕಯ್ಗತ್ತಿಯಿಂದ ಸುಶೀಲೆಯನ್ನು ತಿವಿಯಲು ಯತ್ನಿಸಿದನು. ಸುಶೀಲೆಯೂ ಧೈರ್ಯವನ್ನವಲಂಬಿಸಿ, ಪತಿಯ ಕಯ್ಯನ್ನು ಬಲವಾಗಿ ಹಿಡಿದು, ಮೃದುಮಧುರವಾಣಿಯಿಂದ—“ ಸ್ವಾಮಿನಾಥ ! ನನಗೆ ಸಾವನ್ನು ಕುರಿತು ಹೆದರಿಕೆಯಿಲ್ಲ. ಈಗಲೇ ಸಾಯುವುದಕ್ಕೂ ಸಂತೋಷಿಸುತ್ತಿರುವೆನು. ಪ್ರಭುಹಸ್ತದಿಂದ ಕೊಡಲ್ಪಡುವ ಮರಣವು ನನಗೆ ಶ್ರೇಯಸ್ಕರವೆಂದೂ ದೃಢವಾಗಿ ಹೇಳುವೆನು. ಆದರೂ ಈಗಳಾದರೂ ನನ್ನ ಅಂತ್ಯಪ್ರಾರ್ಥನೆಯನ್ನು ನಡೆಯಿಸಿಕೊಡಬೇಕೆಂದು ಬೇಡುವೆನು. ತಾವು ಸತ್ಕುಲಪ್ರಸೂತರಾಗಿಯೂ ಪೂರ್ಣ ವಿದ್ಯಾಸಂಪತ್ತಿಯಿಂದ ಕೂಡಿದವರಾಗಿಯೂ, ತಕ್ಕಷ್ಟು ಪ್ರಾಪಂಚಿಕ ತತ್ವವನ್ನು ತಿಳಿದವರಾಗಿಯೂ ಇರುವಿರಿ. ಆದರೂ

ಸಹವಾಸ ದೋಷದಿಂದ ಸದ್ವ್ಯಸ್ಥಿತಿಯಲ್ಲಿ ಅವುಗಳು ಬದಲಾಯಿಸಿ ರುವುವು. ಹೀಗಾದುದೂ ನನ್ನ ದುಷ್ಕರ್ಮಪರಿಪಾಕವೆಂದೇ ತಿಳಿ ದಿರುವೆನು. ಇಂದು ನಾನು ಸತ್ತರೂ, ಮುಂದೆ ಎಂದಾದರೂ ತಾ ವು ನನ್ನ ನಿಜವನ್ನು ತಿಳಿಯದಿರಲಾರಿರಿ. ಈ ದಾಸಿಯ ಅಕೃತ್ರಿಮ ವಾದ ಅನನ್ಯಭಾವದ ಭಕ್ತಿಗಾಗಿ ತಾವು ಸ್ವಲ್ಪಕ್ಕೆ ಸ್ವಲ್ಪವಾದರೂ ಶೋಕಾಶ್ರುವನ್ನು ಸುರಿಯಿಸದಿರಲಾರಿರಿ. ತಮಗೆ ವಿಷಯಲಾಲಸೆ ಯಲ್ಲಿ ಆತ್ಯಾಸಕ್ತಿಯಿದ್ದರೆ, ಕುಲೀನೆಯಾದ ಕನ್ಯೆಯನ್ನೇ ಮದುವೆ ಯಾಗಿ ಸುಖಿಸಿರಿ. ಅದರಿಂದ ನನಗೂ ಆನಂದವುಂಟು. ಹಾಗ ಲ್ಲದೆ ತಾವು ಪರಸ್ವಾಪಹಾರಕ್ಕೆ ಹಾಗೂ ಕುಲಟಾಂಗನಾಸಂಗಕ್ಕೆ ತಿರುಗುತ್ತಿರುವುದು ಸರ್ವಥಾ ಸರಿಯಲ್ಲ. ದುಷ್ಟರ ಅಪಲಾಪದಿಂದೆ ಕೆರಳಿ, ನನ್ನಲ್ಲಿ ಮಾಡುತ್ತಿರುವ ಈ ಘೋರಕೃತ್ಯಕ್ಕೆ ಅನು ತಾಪವು ತಪ್ಪದು. ಲಾಲಿಸಿರಿ, ವಿಚಾರಮಾಡಿನೋಡಿರಿ ! ಇದನ್ನು ನಾನು ಮರಣದ ಭಯದಿಂದಾಗಲೀ, ಸ್ವಪ್ರತಿಷ್ಠೆಯಿಂದಾಗಲೀ ಹೇಳಿದುದೆಂದು ತಿಳಿಯಬೇಡಿರಿ. ಇದು ನನ್ನ ಕರ್ತವ್ಯವೆಂದು ತಿಳಿದೇ ಹೇಳಿರುವೆನು. ನಾನು ತಮ್ಮ ಸಹಧರ್ಮಿಣಿಯೆಂದೂ ಹಿತೈಷಿಣಿಯೆಂದೂ ತಿಳಿದು ಇಷ್ಟರ ಸ್ವಾತಂತ್ರ್ಯವನ್ನು ವಹಿಸಿ ದೆನು. ಇನ್ನು ತಮ್ಮ ಕಾರ್ಯವೇನಿದ್ದರೂ ನೆರವೇರಿಸಿಕೊಳ್ಳಬಹುದು. ಎಂದು ಹೇಳಿ ಪತಿಯ ಪಾದಧೂಳಿಯನ್ನು ಶಿರಸಾಧಾರಣೆಮಾಡಿ, ಮೃತ್ಯುವನ್ನಿದಿರ್ಗೊಳ್ಳಲು ಸ್ಥಿರಭಾವದಿಂದ ನಿಂತಳು.

"ಕೆಡುವವಗೆ ಹಿತರಿಲ್ಲ, ಸಾಯುವವಗೆ ಮದ್ದಿಲ್ಲ" ವೆಂಬಂ ತೆಯೇ ವಿಚಾರಹೀನನಾದ ವಿನೋದನಿಗೆ ಪತ್ನಿಯ ಹಿತಬೋಧೆಯಲ್ಲಿ ವಿಶ್ವಾಸವುಂಟಾಗಲಿಲ್ಲ. ಮತ್ತೂ ಕೆರಳಿ ಮಯ್ಮರೆದು, ಕಯ್ಗತ್ತಿಯಿಂದ ಸುಶೀಲೆಯ ತೊಡೆಗೆ ಬಲವಾಗಿ ತಿವಿದನು. ಸುಶೀಲೆ, ಕೆಳಗೆ ಬಿದ್ದು ಮೂ ರ್ಛಿತೆಯಾದಳು.

ವಿನೋದನು ಅಷ್ಟಕ್ಕೂ ತೃಪ್ತನಾಗಲಿಲ್ಲ. ಪತ್ನಿಯ ತೊಡೆಯಲ್ಲಿ ನಾಟಿದ್ದ ಕತ್ತಿಯನ್ನು ಹೊರಗೆಳೆದು ಮತ್ತೆ ಮೇಲಕ್ಕೆ ಎತ್ತಿ, 'ದ್ರೋಹಿ ! ನಡೆ ! ಹೊರಡು !! ನರಕದ ಬಾಗಿಲು ನಿನಗಾಗಿಯೇ ತೆರೆದಿರುವುದು. ನಿನ್ನ ಮರಣದ ಮೇಲಾದರೂ ನನಗೆ ಸುಖವುಂಟಾಗಬಹುದು ! ಇನ್ನು,– ವಿನೋದನ ಮಾತು ಅಷ್ಟಕ್ಕೆ ತಡೆಯಲ್ಪಟ್ಟಿತು. ಮೊದಲು ಧಿಕ್ಕರಿಸಿ ಹೊರಟುಹೋಗಿದ್ದ ಮಯೂರಿ, ಮುಂದಣಾಲೋಚನೆಯಿಂದ ಠಾಣೆಗೆ ಹೋಗಿ ಪೊಲೀಸು ಅಧಿಕಾರಿಯನ್ನೇ ಕರೆತಂದು ಅಂಗಳದಲ್ಲಿ ನಿಲ್ಲಿಸಿ– ತಾನು ಮುಂದಾಗಿ ಬಂದು ನೋಡಿ ಘರ್ಜಿಸಿ ಹೇಳಿದಳು. 'ಓಹೋ ! ಸಾಹಸವಿಷ್ಟೇ ಸಾಕು ! ಸಾಧ್ವೀಮಣಿಯನ್ನು ಕೊಲ್ಲುವುದಕ್ಕೆ ಸಾಹಸ ಪಟ್ಟೆಯಲ್ಲವೆ ? ಕರ್ಮಫಲವಿದೊ ಸಿದ್ಧವಾಗಿದೆ. ಅನುಭವಿಸು ! ವಿಚಾರ- ಶೂನ್ಯರಿಗೆ ಮರ್ಯಾದೆಯೂ ಸಲ್ಲದು. ತಿರುಗಿನೋಡು ನಾನಾರು ?'

ವಿನೋದನು ಕ್ರೋಧಾವೇಶದಿಂದ ಸ್ಮೃತಿಯಿಲ್ಲದೆ ಕತ್ತಿಯನ್ನು ತಿರುಹುತ್ತೆ–'ಮಯೂರಿ ! ಮತ್ತೆ ಬಂದೆಯಾ ? ಬಾ, ಇವಳ ಪಾತಕಕೃತ್ಯಕ್ಕೆ ಸಹಕರಿಸುತ್ತಿದ್ದ ನಿನ್ನನ್ನೇ ಮೊದಲು ಕೊಂದಲ್ಲದೆ ನನ್ನ ಕಾರ್ಯವು ಸಫಲವಾಗದು. ಎಂದು ಹಾರಿ ಬಂದು ಮಯೂರಿಯ ತಲೆಕೂದಲನ್ನು ಹಿಡಿದೆಳೆದು ನಿಲ್ಲಿಸಿದನು.

ಮಯೂರಿ:—ನಿಶ್ಚೇಷ್ಟಿತೆಯಾಗಿ ನೆಲದಲ್ಲಿ ಬಿದ್ದಿದ್ದ ಸುಶೀಲೆಯನ್ನು ನೋಡಿ ಶೋಕದಿಂದ ಕಂಗೆಟ್ಟು ವಿನೋದನನ್ನು ಕುರಿತು ''ಸುಖಬಾಹಿರ ! ನಾನು ಧರ್ಮಪಾಲನೆಗಾಗಿಯೇ ಇಲ್ಲಿರುವವಳಲ್ಲದೆ ನಿನ್ನ ದಾಸ್ಯ ವೃತ್ತಿಗೆಂದು ತಿಳಿಯದಿರು. ನಾನು ಸುಶೀಲೆಗೆ ಪ್ರಾಣಾಪ್ತಸಖಿ ಸುಶೀಲೆಯೇ ನನ್ನ ಪ್ರಾಣ. ಕುಲಗೇಡಿಗಳ ಸಹವಾಸದಲ್ಲಿ ಸೇರಿ ದಾಗಲೇ ನಿನಗೆ ಸುಖವು ದೂರವಾಯ್ತು. ಈಗಳಂತೂ ನಿನಗೆ ನರಕಯಾತನೆಯು ತಪ್ಪುವಂತಿಲ್ಲ. ಹೊರಗೆ ನೋಡು ಬೀದಿಯಕಡೆ ಪೊಲೀಸು ಇನ್ಸ್ಪೆಕ್ಟರರೂ ಜವಾನರೊಡನೆ ಬಂದಿರುವರು. ಇನ್ನು ನಿನಗಾಗುವ ಅವಸ್ಥೆಯೇನೆಂಬುದನ್ನು ತಿಳಿದುಕೊ !

ಮಯೂರಿಯ ಮಾತಿಗೆ ವಿನೋದನು ಭಯದಿಂದ ಬೆದರಿ ನೋಡುತ್ತ—"ಏನು ? ಪೋಲೀಸರು ! ನನ್ನನ್ನು ಹಿಡಿಯಲು ? ಹಾ-ಪೋಲೀಸರೆ ?" ಎಂದು ಹೇಳುತ್ತಿದ್ದಂತೆಯೇ ಹಿಂದುಮುಂದು ನೋಡದೆ ಹಿತ್ತಿಲ ಕದವನ್ನು ತೆರೆದು ಹೊರಬಿದ್ದು ತಲೆತಪ್ಪಿಸಿಕೊಂಡುಬಿಟ್ಟನು. ಮಯೂರಿ, 'ಓಡಿದನು-ಹಿತ್ತಲ ಕಡೆಯಿಂದ ಓಡಿದನು-ಹಿಡಿಯಿರಿ !-ಹಿಡಿಯಿರಿ !!' ಎಂದು ಕೂಗಿ ಹೇಳಿ ಸುಶೀಲೆಯನ್ನುಪಚರಿಸಲುದ್ಯುಕ್ತೆಯಾದಳು.

ಪೋಲೀಸ್ ಇನ್‌ಸ್ಪೆಕ್ಟರನ ಆಜ್ಞೆಯಂತೆ ಪೋಲೀಸು ಜವಾನರೂ ವಿನೋದನ ಬೆನ್ನಟ್ಟಿ ಹೋದರು. ಇನ್‌ಸ್ಪೆಕ್ಟರನು ಸುಶೀಲೆಯನ್ನು ವಿಚಾರಿಸಲು ನಡೆದನು.

ಆರ್ಯಭ್ರಾತೃಗಳೇ !

ವಿನೋದನಂತಹ ಸುಖಬಾಹಿರರು ಎಷ್ಟೋಮಂದಿ ಈಗಳೂ ಇರಬೇಕಲ್ಲವೆ ? ಅಂತವರನ್ನು ಆವ ಧನ್ಯವಾದದಿಂದ ಸಂಸ್ತುತಿಸಿ, ಧನ್ಯರಾಗುವ ? ಹೋಗಲಿ, ಉಳಿದವರಾದರೂ, ತಮ್ಮ ತಮ್ಮ ಸತೀಮಣಿಯರಲ್ಲಿ ಮುಳಿದು ಮನಬಂದಂತೆ ಮಾಡುವ ಕೆಟ್ಟಕೆಲಸಗಳನ್ನು ಬಿಟ್ಟುಬಿಡಬಹುದಷ್ಟೆ ? (ಹಾಗಾಗಲಿ)

ಅಷ್ಟಮ ಪರಿಚ್ಛೇದ.

(ಪಾಪಪಂಕ)

ಮಲೆಯಪುರದ ಮಂಗಳವಾರಪೇಟೆಗೆ ಸೇರಿದ 'ಒಣಿ ಬೀದಿಯಲ್ಲಿಯ ಒಂದು ಮನೆ. ಮನೆಯೇನೂ ಅಷ್ಟು ದೊಡ್ಡದಲ್ಲ. ಮಹಡಿಯ ಮನೆಯಾದುದರಿಂದ ನೋಡಲಿಕ್ಕೆ ಇಕ್ಕಟ್ಟಾಗಿ ಕಾಣುತ್ತಿಲ್ಲ, ಮನೆಯ ಹೊರಗಡೆ

ಗಳಿಂದ ನಲಿನಲಿದಾಡುತಿದ್ದರೂ, ಶೂನ್ಯಾಂತರಂಗದ ಮಲಿನತೆಯೇ ತೋರಿಬರುತ್ತಿರುವಂತೆ ಅವಳ ಮನೆಯೂ ಕಾಂತಿಹೀನವಾಗಿತ್ತೆಂದರೆ ಸಾಕು.

ಚಪಲೆ, ಬೀದಿಯ ಬಾಗಿಲ ನಡುವೆ ಕಿರುಮನೆಯಲ್ಲಿ, ತಂತ್ರನಾಥನೊಡನೆ ಲಲ್ಲೆಯಲ್ಲಿದ್ದಳು. ತಂತ್ರನಾಥ-ಚಪಲೆ-ಇಬ್ಬರ ಮುಖಗಳಲ್ಲಿಯೂ ಉತ್ಸಾಹವು ಹೊರಹೊಮ್ಮುತಿತ್ತು. ಈ ಕೂರ್ಮೆಗಾರರ ಕುಹುಕವೇನೆಂಬುದನ್ನು ನಮ್ಮ ವಾಚಕವರ್ಗವು ಚೆನ್ನಾಗಿ ತಿಳಿದಿರುವುದೊಳ್ಳಿತಲ್ಲವೆ?

ಚಪಲೆ:—ನೀವು ನನ್ನ ಮಾತನ್ನು ಮೀರುವುದಿಲ್ಲವಷ್ಟೆ?

ತಂತ್ರ:—ಎಂದೂ ನಿನ್ನ ಮಾತನ್ನು ಮೀರುವುದಿಲ್ಲ. ನೀನು ನನ್ನ ಕೋರಿಕೆಯನ್ನು ನೆರವೇರಿಸಿಕೊಟ್ಟರೆ............

ಚಪಲೆ:—ನಗುತ್ತ—"ಆ ವಿಷಯದಲ್ಲಿ ಪ್ರಾರ್ಥಿಸಬೇಕಾದುದಿಲ್ಲ. ಅದಿರಲಿ; ನೀವು ಪುನಃ ಸಂಸಾರಕ್ಕೆ ಸಿಕ್ಕಿ, ಕಡೆಗೆ ನನ್ನನ್ನು ಮರೆತರೂ ಮರೆಯಬಹುದು! ನಿಮ್ಮ ಹೆಂಡತಿ ಇನ್ನೂ ಹುಡುಗಿ, ಆದರೂ ಅವಳು ಪ್ರಾಯಸಮರ್ಥೆಯಾದ ಬಳಿಕ ನೀವು ನನ್ನ ಕಯ್ಬಿಟ್ಟರೆ ನಾನು ಮಾಡುವುದೇನು? ಈಗ ನೋಡಿರಿ! ವಿನೋದನು ನನ್ನಿಂದ ಎಷ್ಟೋ ಸುಖವನ್ನು ಅನುಭವಿಸಿರುವನು. ಆದರೂ ಅದೆಲ್ಲವನ್ನೂ ಮರೆತು ಹೆಂಡತಿಯ ಮಾತಿಗೆ ಮರುಳಾಗಿ, ಇಲ್ಲಿಗೆ ಬರುವುದನ್ನೇ ಕಡಿಮೆ ಮಾಡಿರುತ್ತಾನೆ. ಆದರೆ ನಾನು ಚಾಕಚಕ್ಯದಿಂದ ಅವನಿಗೆ ಹೆಂಡತಿಯಲ್ಲಿ ದ್ವೇಷವುಂಟಾಗುವಂತೆ ಮಾಡಿರುವೆನು. ನಿನ್ನೆಯೇ ಅವಳ ಮೇಲೆ ಅಲ್ಲದಸಲ್ಲದ ದೋಷವನ್ನು ಹೊರೆಯಿಸಿ ಅವನನ್ನು ಚೆನ್ನಾಗಿ ಕೆರಳಿಸಿ ಕಳಿಸಿಕೊಟ್ಟೆನು. ಆದರೂ ನಿನ್ನೆ ಅವನು ಏತರಿಂದಲೋ ದುಡುಕಲಿಲ್ಲ. ಈ ದಿನ ನಿಮ್ಮ ಸಲಹೆ ದೊರೆತುದರಿಂದ ನಾನೇ ಹೋಗಿ, ಅಡಗಿದ್ದ ಉರಿಯನ್ನು ಮತ್ತೆ ಹುರಿಮಾಡಿ ಹಬ್ಬಿ

ಸಿಬಿಟ್ಟು ಬಂದೆನು. ಇಷ್ಟುಹೊತ್ತಿಗಾಗಲೇ ಅವನ ಕೋಪಾಗ್ನಿಗೆ ಸಿಕ್ಕಿ ಸುಶೀಲೆ ಸುಟ್ಟುಹೋಗಿರಬೇಕು! ಅಲ್ಲದೆ ಮಯೂರಿಯೂ ಬಲಿಯಾಗಿರಬೇಕು. ಅವನ ಕೃತಘ್ನತೆಗೆ ಇದೇ ಪ್ರತೀಕಾರವಲ್ಲವೆ?"

ತಂತ್ರ:—ಅದೇನು ?

ಚಪಲೆ:—ನೀವು ಮಾತ್ರ ಹಾಗೆ ಮಾಡಬೇಡಿರಿ, ಅವನು ತನ್ನ ಆಸ್ತಿಯೆಲ್ಲ ವನ್ನೂ ನನ್ನ ಹೆಸರಿಗೆ ಬರೆದು ರೆಜಿಸ್ತರ್ ಮಾಡಿಸಿ ಕೊಡುವೆನೆಂದು ಹೇಳಿ, ಸುಖಪಟ್ಟು, ನನ್ನನ್ನು ಮೋಸಮಾಡಿರುವನು. ಅವನಿಂದಾದ ಜಿಂಸೆ ನನಗೆ ಅಷ್ಟಿಷ್ಟಲ್ಲ!! ಅದಕ್ಕೆ ಪ್ರತೀಕಾರ ಮಾಡಬೇಕೆಂದೇ ನಾನು ಈ ದಿನ ತಮ್ಮ ಸಹಾಯದಿಂದ ಮಾಡಿದ ಹೂಟವು ಹೇಗೂ ತಪ್ಪಿಹೋಗುವುದಿಲ್ಲವೆಂದು ನಂಬುವೆನು. ಇದಕ್ಕಾಗಿ ನಾನು ತಮಗೆ ಕೃತಜ್ಞಳಾಗಿರುವೆನು.

ತಂತ್ರನಾಥನು ಚಪಲೆಯ ಬೆನ್ನುತಟ್ಟಿ,—"ಭಲೆ! ಚಪಲಾ! ಭಲೆ!! ಈಗ ನಿನ್ನ ಮಾಟದ ಹೂಟವು ತಿಳಿಯಿತು. ಬಂದವರನ್ನು ಆದರಿಸುವುದರಲ್ಲಿಯೂ, ಸಂತೋಷಪಡಿಸುವುದರಲ್ಲಿಯೂ ನಿನಗಿರುವ ಚಾತುರ್ಯವು, ನುತ್ತಾರಲ್ಲಿಯೂ ಇರಲಾರದು. ನಿನ್ನನ್ನು ನೋಡಿದಂದಿನಿಂದ ನನಗೆ ಮನೆ-ಹೆಂಡತಿ-ಮಕ್ಕಳು-ಮರಿಗಳೆಲ್ಲರೂ ಮರೆತೇಹೋಗಿರುವರು. ಯಾವಾಗಲೂ ನಿನ್ನ ಬಳಿಯಲ್ಲಿಯೇ ಇರಬೇಕೆಂಬ ಕುತೂಹಲವುಂಟಾಗಿರುವುದು. ನಿನಗೆ ಏನುಬೇಕಾದರೂ, ಸಂತೋಷವಾಗಿ ಕೊಡಲು ಸಿದ್ಧವಾಗಿರುವೆನು' ಎಂದು ಚಪಲೆಯ ಮುಖವನ್ನೇ ನೋಡುತ್ತ ಕುಳಿತನು.

ಪಾಠಕವರ್ಗ!

ಇಲಿ, ಹಾವುಗಳು ತಲೆತಪ್ಪಿಸಿಕೊಳ್ಳಬೇಕಾದರೆ, ಬಿಲವನ್ನೂ, ಹುತ್ತನ್ನೂ ಹುಡುಕುವುದು ಸ್ವಭಾವವಲ್ಲವೆ? ಕಳ್ಳರಿಗೂ ಕೊಲೆಪಾತಕರಿಗೂ ತಲೆತಪ್ಪಿಸಿಕೊಳ್ಳುವುದಕ್ಕೆ ಕೂಡ, ಅಂತಹ ಸ್ಥಳಗಳನ್ನೇ ಹುಡುಕಬೇಕಾದುದೂ ಸಹಜವಾದುದಲ್ಲವೆ? ಪತ್ನೀಘಾತಕನಾದ ವಿನೋದನಿಗಾದರೂ,

ಗ್ರಾಮರಕ್ಷಕರ (Police) ಕಯ್ಯಿಂದ ತಪ್ಪಿಸಿಕೊಳ್ಳುವುದಕ್ಕೆ ಚಪಲೆಯ ಮನೆಯೇ ಸರಿಯಾಗಿ ಕಂಡುಬಂದುದರಿಂದ ಓಡಿಬಂದನು. ಬಂದವನು ಆ ತುರದಿಂದ ಬಾಗಿಲನ್ನು ಬಲವಾಗಿ ಒದ್ದನು. ಹಳೆಯದಾಗಿದ್ದುದರಿಂದ ಕದವು ಒಡೆದುಹೋಯಿತು. ಒಡನೆ ಒಳಹೊಕ್ಕನು, ನೋಡಿದನು; ಸರಸ ಸಲ್ಲಾಪದಲ್ಲಿದ್ದ ತಂತ್ರನಾಥ-ಚಪಲೆಯರ ತಾತ್ಕಾಲಿಕ ಸ್ಥಿತಿಗತಿಗಳನ್ನು ಕಂಡನು. ಆಗಲೇ ಚಪಲೆಯ ನೈಚ್ಯಭಾವವೂ ಹೃದ್ಗತವಾಯ್ತು. ಆ ವೇಳೆಯಲ್ಲಿ ವಿನೋದನಿಗೆ ಹೇಗಾಗಿರಬೇಕೆಂಬುದನ್ನು ಗ್ರಾಹಕರೇ ಊಹಿಸುವುದು ಲೇಸು! ಹೇಗೂ ಕ್ರೋಧ-ವಿಸ್ಮಯ-ಭಯ-ಶೋಕಗಳಿಂದ ಜಡನಂತಾಗಿ ಅಡ್ಡಗಟ್ಟಿ ನಿಂತನು.

ಚಪಲೆ:—ಚಕಿತಭಾವದಿಂದ—‘ ಇದೇನು ? ವಿನೋದ ! ಇಷ್ಟು ರೌದ್ರಾವೇಶವೇಕೆ ? ಏನುಮಾಡಿದೆ ? ಮುಗಿಸಿಬಿಟ್ಟೆಯಾ ? (ಅತ್ತಿತ್ತ ನೋಡಿ)-ಅಯ್ಯೋ ! ಪ್ರಮಾದ !! ಪ್ರಮಾದ !!! ಕೊಲೆಮಾಡಿರುವನು ! ಕೊಲೆ !! ಯಾರೂ ಇಲ್ಲವೆ ? ಹಿಡಿಯಿರಿ ! ಹಿಡಿಯಿರಿ !!’ ಎಂದು ಕೂಗಿದಳು.

ತಂತ್ರ:—“ ಓಹೋ ! ನಿಜ ! ಸುಳ್ಳಲ್ಲ. ಕೊಲೆಮಾಡಿರುವನು. ಇವನಿಂದ ನಮಗೂ ಹಾನಿತಪ್ಪದು. ಮೊದಲು ಪೋಲೀಸಿಗೆ ಹಿಡಿದು ಕೊಡಬೇಕು.

ವಿನೋದನ ಸ್ಥಿತಿ ಹೇಗಾಯ್ತೆಂಬುದನ್ನು ಹೇಳಬೇಕೆ ? ಕೋಪಾನುತಾಪಗಳಿಂದ ಕಂಪಿಸುತ್ತ—‘ ಹಾನಿಯೆ ? ನಿನಗೆಂದೂ ಹಾನಿಯು ತಪ್ಪದುದಲ್ಲ ! ಕುಲನಾಶಿನಿ ! ಮಾಯಾವಿನಿ ! ಈ ದುರಭಿಸಂಧಿಗೆಂದು ಎಂದಿನಿಂದ ಚಿನ್ತಿಸುತ್ತಿದ್ದೆ ? ಢಾಕಿನಿ ! ನಿನ್ನ ಈ ವಂಚನೆಯನ್ನು ತಿಳಿಯದೆ ನೀನೇ ನನ್ನ ಸುಖದ ಸಾರವೆಂದಿದ್ದೆನಲ್ಲವೆ ? ನನ್ನ ಹಾಲಿನಂತಿದ್ದ ಸಂಸಾರದಲ್ಲಿ ವಿಷವನ್ನು ಬೆರಸಿದ ಪಾತಕಿ, ನೀನೇ ಅಲ್ಲವೆ ? ನನ್ನ ದುರಾಚಾರ-ದುಷ್ಕೀರ್ತಿ-ದುಃಖ-ದೌರ್ಭಾಗ್ಯಗಳಿಗೆಲ್ಲಕ್ಕೂ ನೀನೇ ಹೇತುವೆಂಬುದು

ಈಗಳಲ್ಲವೇ ನಿರ್ಧರವಾದುದು ? ಪಾಪಿನಿ! ನಿನ್ನ ಈ ದುಷ್ಕರ್ಮಕ್ಕೆ ಪ್ರಾಯಶ್ಚಿತ್ತವನ್ನು ಮಾಡದೆ ಬಿಡುವೆನೇನು ?

ತಂತ್ರ:—ಛೀ! ಕೊಲೆಗಡುಗ! ಕೈಹಿಡಿದ ಹೆಂಡತಿಯನ್ನೇ ಕೊಂದು ಬಂದಿರುವ ನೀನು ಇಲ್ಲಿ ಕ್ಷಣಮಾತ್ರವೂ ನಿಲ್ಲಲಾಗದು. ಹೊರಟು ಹೋಗು! ಇಲ್ಲವಾದರೆ ಪೊಲೀಸಿನವರನ್ನು ಕರೆತರುವೆನು.

ವಿನೋದ:—ಗರ್ವದಿಂದ ನಕ್ಕು, "ಪಾಮರ! ಸರ್ವಸ್ವಾಪಹಾರಿಣಿಯಾದ ಈ ಧೂರ್ತೆಯ ಮಾತಿಗೆ ಮರುಳಾಗಿ, ನನ್ನ ಸಂಸಾರವನ್ನು ನಾಶಮಾಡಿಸಿದೆಯಲ್ಲವೆ ? ಪಾಪಿ! ಇವಳನ್ನು ಉಳಿಸಿಕೊಳ್ಳಲು ನಿನಗೆ ಶಕ್ತಿಯುಂಟೆಂದಿರುವೆಯೊ ? ತೊಲಗತ್ತ !

ಚಪಲೆ:—ತಂತ್ರನಾಥನನ್ನು ನೋಡುತ್ತ,—'ಪ್ರಿಯತಮ! ಮೊದಲೇ ಇವನು ತಿಳಿಗೇಡಿ! ಸಾಲದುದಕ್ಕೆ ಈಗತಾನೇ ಹೆಂಡತಿಯನ್ನು ಕೊಂದೂ ಬಂದಿರುವನು. ಮೊದಲು ಇವನನ್ನು ಹೊರಡಿಸುವುದೊಳ್ಳೆಯದು. ಉಳಿದುವು ಆಬಳಿಕಾಗಬಹುದು.

ಚಪಲೆಯ ಈ ಬಗೆಯ ಕ್ರೂರ ವಾಕ್ಯಗಳಿಂದ ವಿನೋದನು ಮರ್ಮಾಹತನಾದನು. ಸಾಧ್ವೀಮಣಿಯಾದ ತನ್ನ ಹೆಂಡತಿಯ ಹಿತಬೋಧೆಗಳು ನೆನಪಿಗೆ ಬಂದು, ಅನುತಾಪಾಗ್ನಿಯಿಂದ ಸುಡತೊಡಗಿದುವು. ಯಾತನಾಧಿಕ್ಯದಿಂದ ನಿಲ್ಲಲಾರದೆ ಕ್ಷಣಕಾಲ ಗೋಡೆಯನ್ನು ನೆಮ್ಮಿ, ಎಡಗಯ್ಯಿಂದೆ ತಲೆಯನ್ನು ಬಲವಾಗಿ ಹಿಡಿದು ನಿಂತಿದ್ದು, ಆ ಬಳಿಕ ತನ್ನಲ್ಲಿ ತಾನೇ ತಿಳಿದೆಚ್ಚೆತ್ತು, ನಿಟ್ಟುಸಿರಿಟ್ಟು-'ದುಷ್ಟೆ! ನನ್ನ ಧರ್ಮಪತ್ನಿ, ನನ್ನನ್ನು ಕುರಿತು ಅಡಿಗಡಿಗೂ ಹೇಳುತ್ತಿದ್ದ ಹಿತವಾದಗಳು ಈಗಲೀಗ ನನಗೆ ಹೃದಯಂಗಮವಾಗುತ್ತಿವೆ! ನಿನ್ನ ಕುಟಿಲನಟನೆಗೆ ಮರುಳಾಗಿ ನಿನ್ನನ್ನೇ ನಂಬಿ ನನ್ನ ಸರ್ವಸ್ವವನ್ನೂ ನಿನಗೆ ಕೊಡಬೇಕೆಂದಿದ್ದೆನು. ನಿನ್ನ ಸಂಸರ್ಗದಿಂದ ಈ ಬಗೆಯ ಸಹಿಸಲಾರದ ಸಂತಾಪಕ್ಕೆ ಪಕ್ಕಾದೆನಲ್ಲದೆ, ಪತ್ನಿಯನ್ನೂ ಮೃತ್ಯುಮುಖದಲ್ಲಿ ಬಿಟ್ಟುಬಂದೆನು. ಇನ್ನು ನನಗುಳಿದಿರುವುದು

ಮರಣವೊಂದೆ !! ಇದೇ ನನ್ನ ಘೋರಕರ್ಮಕ್ಕೆ ಪ್ರಾಯಶ್ಚಿತ್ತವು. ಆದರೂ, ಈ ನನ್ನ ಸಂಕಟಕ್ಕೆ ಕಾರಣಳಾದ ನಿನ್ನನ್ನು ಕಡಿದಲ್ಲದೆ ನನ್ನ ಆತ್ಮಕ್ಕೆ ತಣಿವಾಗದೆಂದು ತಿಳಿ.' ಎಂದು ಚಪಲೆಯ ಮುಂದೆ ನಿಂತನು.

ತಂತ್ರ:—ಹಿಂದಿನಿಂದ ಬಂದು ತನ್ನ ತೋಳುಗಳಿಂದ ವಿನೋದನನ್ನು ಬಲವಾಗಿ ಬಿಗಿದು,-‹ಚಪಲೆ ! ಆ ಮೂಲೆಯಲ್ಲಿರುವ ಕೊಡಲಿಯನ್ನು ತೆಗೆದುಕೊಂಡು ಬಾ ! ಮೊದಲು ಇವನನ್ನು ಕೊನೆಗಾಣಿಸು.'

ವಿನೋದನು ಉನ್ಮತ್ತನಂತೆ ವಿಕಾರವಾಗಿ ನಕ್ಕು, ತಂತ್ರನಾಥನ ಬಾಹುಬಂಧನದಿಂದ ಸುಲಭವಾಗಿ ಬಿಡುಗಡೆ ಹೊಂದಿ, ಕಯ್ಯಲ್ಲಿದ್ದ ಕತ್ತಿಯಿಂದ ತಂತ್ರನಾಥನ ತೋಳನ್ನು ತಿವಿದು ಕೆಳಗುರುಳಿಸಿದನು ; ಮತ್ತೆ ಚಪಲೆಯ ಜಡೆಯನ್ನು ಎಡಗಯ್ಯಿಂದ ಹಿಡಿದೆಳೆದು-‹ ಚಪಲೆ ! ನಿನ್ನ ದುರ್ಬೋಧನೆಯಿಂದೇ ನಾನು ಕುಲ, ಮಾನ, ಧನ, ಕೀರ್ತಿ, ಗೌರವ, ಸುಖ, ಭೋಗಗಳೆಲ್ಲವನ್ನೂ ಕೆಡಿಸಿಕೊಂಡುದಲ್ಲದೆ, ಆನಂದಕ್ಕೆ ಆಧಾರವಾಗಿದ್ದ ಆರಾಮುವನ್ನೂ ಹಾಳುಮಾಡಿದೆನು! ನಿನ್ನ ಕುಟಿಲಪ್ರೀತಿಯನ್ನು ನಿಜವೆಂದೇ ನಂಬಿ, ನಿನ್ನ ಮುಖಬೋಲಾಸಕ್ಕಾಗಿ, ಎಷ್ಟೋ ಕೆಟ್ಟಕೆಲಸಗಳನ್ನು ಮಾಡಿಬಿಟ್ಟೆನು! ಅಷ್ಟಕ್ಕೂ ತಣಿಯದೆ ನೀನು ನನ್ನ ಪತ್ನಿಯಮೇಲೆ ಮಿಥ್ಯಾಪವಾದವನ್ನು ಹೊರೆಯಿಸಿ, ಅವಳ ಪ್ರಾಣವನ್ನು ನನ್ನ ಕಯ್ಯಿಂದೆ ತೆಗೆಯಿಸಲು ಪ್ರಯತ್ನಪಟ್ಟೆ ! ಆಗಲಿ; ಈಗ ಆ ಕರ್ಮಗಳಿಗೆ ಫಲವನ್ನು ಅನುಭವಿಸು!'' ಎಂದು ಹೇಳುತ್ತಿದ್ದಂತೆಯೇ ಒಮ್ಮೆ ಚಪಲೆಯ ಮುಖವನ್ನು ನೋಡಿದನು. ಈತನ ಕ್ರೂರದೃಷ್ಟಿಗೆ ಚಪಲೆಯು ಗದಗದಿಸುತ್ತೆ ತಪ್ಪಿಸಿಕೊಳ್ಳಲು ಪ್ರಯತ್ನಪಟ್ಟಳು ; ಸಾಧ್ಯವಾಗಲಿಲ್ಲ. ಇವಳ ಪ್ರಯತ್ನದಿಂದ ಮತ್ತೂ ಕುಪಿತನಾದ ವಿನೋದನು ‹ ಮರುಳೆ? ನೀನೀ ಅಂತಕನ ಕಯ್ಯಿಂದ ಬಿಡಿಸಿಕೊಳ್ಳಬಲ್ಲೆಯಾ ? ನಿನ್ನಿಂದಾದೀತೆ ? ಎಂದಿಗೂ ಸಾಗದು ! . . . . . .

ವಿನೋದನ ಮಾತು ಮುಗಿಯುವುದಕ್ಕೆ ಮೊದಲೇ, ಪೆಟ್ಟುತಿಂದು ನೆಲದ ಮೇಲೆ ಬಿದ್ದಿದ್ದ ತಂತ್ರನಾಥನು ಮೇಲಕ್ಕೆದ್ದುಬಂದು ತಾನೇ ಕೊ

ಡಲಿಯನ್ನು ತಂದುದಲ್ಲದೆ, ಅದನ್ನೇ ವಿನೋದನ ತಲೆಯ ಮೇಲೆ ಗುರಿಯಿಟ್ಟು ಹೊಡೆಯಲೆತ್ತಿದನು.

ವಿನೋದನು ಈ ಸುಳಿವನ್ನು ಮುಂದಾಗಿ ತಿಳಿದು, ಕೊಡಲಿಯೇಟು ತನ್ನ ಕಡೆಗೆ ಬೀಳುವ ವೇಳೆಗೆ ಸರಿಯಾಗಿ ಬಲಗಡೆಗೆ ಸರಿದನು; ಆದರ ಬಲವಾದ ಏಟು ಗುರಿತಪ್ಪಿಹೋಗಿ ಚಪಲೆಯ ಮೇಲೆಯೇ ಬಿದ್ದು, ಅವಳು ವಿಗತಪ್ರಾಣಳಾಗಿ ಕೆಳಗೆ ಬೀಳುವಂತೆ ಮಾಡಿಬಿಟ್ಟಿತು. 'ವಿನೋದನು' ತಂತ್ರನಾಥನನ್ನು ಕೊಲ್ಲಹೋದನು. ಆದರೆ ತಂತ್ರನಾಥನು, ಚಪಲೆಯ ಕೊಲೆಗೆ ತಾನೇ ಕಾರಣನೆಂದರಿತೂ ತಪ್ಪಿಸಿಕೊಳ್ಳುವುದಕ್ಕಾಗಿ ಅಲ್ಲಿ ನಿಲ್ಲದೆ ಬೀದಿಗೆ ಬಂದು, 'ಕೊಲೆ, ಕೊಲೆ!' ಎಂದು ಕೂಗಿಕೊಂಡನು. ಹತ್ತಿರದಲ್ಲಿಯೇ ಬರುತ್ತಿದ್ದ ಪೊಲೀಸಿನವರು ಆಗಳೇ ಮನೆಯೊಳ ಹೊಕ್ಕು ನೋಡಿದರು. ಅಷ್ಟರಲ್ಲಿ ತಂತ್ರನಾಥನು ಹೊರಟುಹೋಗಿದ್ದುದರಿಂದ ಮನೆಯಲ್ಲಿ ಚಪಲೆಯ ವೃತದೇಹದ ಬಳಿಯಲ್ಲಿಯೇ ಸಂಭ್ರಾಂತನಾಗಿ ನಿಂತಿದ್ದ ವಿನೋದನನ್ನು ಕಂಡರು. ಆ ಬಳಿಕ ವಿನೋದನು ಅವರಿಂದ ಬಂಧಿತನಾಗಿ ಒಯ್ಯಲ್ಪಟ್ಟನೆಂಬುದನ್ನು ಹೇಳಬೇಕಾದುದಿಲ್ಲವಷ್ಟೆ.

ಮಹೋದಯರೇ !

ವಿಚಾರಶೂನ್ಯರಿಗಾಗುವ ಫಲವೆಂತಹುದೆಂಬುದು, ಈಗಳಲ್ಲವೇ ತಿಳಿಯಬೇಕು ? ಮಾಡತಕ್ಕದೇನು ? ಕರ್ತವ್ಯಜ್ಞಾನಶೂನ್ಯತೆಯಿಂದ ವಿನೋದನಿಗುಂಟಾದ ವಿಪತ್ತಿಗಾಗಿ ಮರುಮರುಗುವುದೊಂದೇ ಮಾಡತಕ್ಕದು ; ಮುಂದೆಯಾದರೂ ಜ್ಞಾನಾಮೃತವರ್ಷದಿಂದ ಸುಖಸಂಗತಿ ಸಂಗಡಿಸಬೇಕಲ್ಲವೇ ? (ಅಂತಾಗಲಿ.)

ನವಮಪರಿಚ್ಛೇದ.

(ಕರ್ಮಫಲ)

ಸುಶೀಲೆಯ ತಂದೆಯ ಹೆಸರು ಸುಜ್ಞಾನಶರ್ಮ; ಮಲಯಪುರಕ್ಕೆ ಮೂರು ಹರದಾರಿ ದೂರದಲ್ಲಿರುವ ಮಹಾನಂದ ಗ್ರಾಮದಲ್ಲಿಯೇ ಈತನು ವಾಸವಾಗಿರುವುದು. ಈತನು ಆಗರ್ಭಶ್ರೀಮಂತನೂ, ವಿದ್ಯಾವಿನಯಾದಿ ಸುಗುಣಸಂಪನ್ನನೂ ಆದ ಗಣ್ಯಪುರುಷನು. ಅಲ್ಲದೆ ಗ್ರಾಮಕ್ಕೆ ಮುಖ್ಯಸ್ಥನಾಗಿ ಗೌರವಿಸಲ್ಪಟ್ಟು, ಎಷ್ಟೋ ಸಭೆಗಳಿಗೆ ಸಹಾಯಕ ಕಾರ್ಯದರ್ಶಿಯೂ ಆಗಿದ್ದವನು.

ಸುಶೀಲೆ, ದಯಾಳುಗಳಾದ ಪೊಲೀಸಿನವರ ಸಹಾಯದಿಂದ ಮಯೂರಿಯೊಡನೆ ಪಿತೃಗೃಹವನ್ನು ಸೇರಿದಳು. ಮಗಳ ಬಾಯಿಂದೆಯೂ ಮಯೂರಿಯ ಬಾಯಿಂದೆಯೂ ವಿಷಯವನ್ನು ತಿಳಿದ ಸುಜ್ಞಾನಶರ್ಮನು ಅಳಿಯಂದಿರ ಅವಿವೇಕಕ್ಕೂ, ಮಗಳ ಆಪತ್ತಿಗೂ ಮರುಗುತ್ತೆ, ಮಗಳನ್ನು ಬಹುವಿಧದಿಂದ ಸಮಾಧಾನ ಪಡಿಸಲು ಪ್ರಯತ್ನಿಸಿದನು.

ಹೇಗೂ ಸುಶೀಲೆ, ಪಿತೃಗೃಹವನ್ನು ಸೇರಿ ಇಂದಿಗಾಗಳೇ ಎರಡು ವಾರಗಳು ಕಳೆದುಹೋದುವು. ಆದರೂ ಪತಿಯ ಸಂದರ್ಶನವು ದೊರೆಯಲಿಲ್ಲ; ತೊಡೆಯ ಗಾಯವೂ ಚೆನ್ನಾಗಿ ಮಾಗಿಲ್ಲ; ಮನೋವ್ಯಾಕುಲವನ್ನೆಂತೂ ವಿವರಿಸುವಂತಿಲ್ಲ. ಅಹೋರಾತ್ರಿಯೂ ಹಾಸಿಗೆಯ ಮೇಲೆ ಹೊರಳಾಡುತ್ತೆ, ಪತಿಯ ದುರ್ದಶೆಗಾಗಿ ಕಣ್ಣೀರು ಸುರಿಸುತ್ತಿದ್ದಳು. ಮಯೂರಿ, ಕ್ಷಣಮಾತ್ರವೂ ಸುಶೀಲೆಯನ್ನು ಬಿಟ್ಟು ಅತ್ತಿತ್ತಕಡೆಗೆ ಹೊಗದೆ ಕಾವಲಿದ್ದಳು.

ಸುಶೀಲೆ:—ಕಣ್ಣೀರು ಸುರಿಸುತ್ತೆ ಕುಗ್ಗಿದ ಕಂಠದಿಂದ,–‹ಮಯೂರಿ ನನ್ನ ಸ್ವಾಮಿ, ಈಗ ಇರುವುದೆಲ್ಲಿ ? ಹದಿನೈದು ದಿನಗಳಾದರೂ

ನನಗೇಕೆ ಕಾಣಿಸುತ್ತಿಲ್ಲ? ಏನಾಗಿರುವರು? ಹೇಳು! ಆ ನನ್ನ ಪ್ರಭು, ಸುಖವಾಗಿರುವರೆಂದು ತಿಳಿವವರೆಗೂ, ನನ್ನೀ ರೋಗವು ಗುಣವಾಗುವಂತಿಲ್ಲ. ಅವರು ನನ್ನನ್ನು ಕ್ಷಮಿಸಿ, ಶಾನ್ತಚಿತ್ತರಾಗಿ ವಿವೇಕವನ್ನು ಹೊಂದಿರುವರೆಂದು ಕೇಳಿದಾಗಳೇ ನಾನು ಸುಖಿಯಾಗಬೇಕು. ಮಯೂರಿ! ನಿಜವಾಗಿ ಹೇಳು! ನನಗಷ್ಟರ ಭಾಗ್ಯವುಂಟಾದೀತೆ? ಎಂದಿಗೆ? ಹೇಗೆ?

ಮಯೂರಿ:—ತಾಯಿ! ಚಿನ್ತಿಸಬಾರದು. ನಿಮ್ಮ ಸ್ವಾಮಿಗೆ ಏನೂ ಕೇಡಾಗದು. ನಿಮ್ಮ ಸಾಕ್ಷ್ಯಪತ್ರದ ಬಲವೇ ಅವರನ್ನು ಸುರಕ್ಷಿತರನ್ನಾಗಿ ಮಾಡಬಲ್ಲುದೆಂದು ವಿಚಾರಣಾಕರ್ತರು ದೃಢವಾಗಿ ಹೇಳುತ್ತಿರುವರು. ನಿಮ್ಮ ಶೀಲ-ಸತ್ಯ-ಶ್ರಮಸಹಿಷ್ಣುತೆ-ಇವುಗಳ ಪ್ರಭಾವವೇ ನಿಮ್ಮನ್ನು ಈ ವಿಪತ್ತಿನಿಂದ ಪಾರಾಗಿಸತಕ್ಕುದಾಗಿದೆ. ಅಂಜಬೇಡಿರಿ!'' ಎಂದು ಹೇಳಿ, ಹಾಲನ್ನು ತರುವೆನೆಂದು ಬೇರೆ ಕಡೆಗೆ ಹೋದಳು. ಸುಶೀಲೆಯೊಬ್ಬಳೇ ಮಲಗಿದ್ದಳು.

ದ್ರೋಹಿಯಾದ ತಂತ್ರನಾಥನು ಇದೇ ಸಮಯವನ್ನೇ ನೋಡುತ್ತಿದ್ದನೆಂದು ತೋರುವುದು. ಹೇಗೂ ಮಯೂರಿ ಅತ್ತ ಹೋಗಲು, ಇವನಿತ್ತ ಬಂದೇಬಂದನು. ಬಂದವನು ಸುಶೀಲೆ ಮಲಗಿದ್ದೆಡೆಗೆ ಬಂದು, ಮೆಲ್ಲನೆ "ಸುಶೀಲೆ! ಹೇಗಿರುತ್ತೀಯೆ? ವ್ರಣವಿನ್ನೂ ಮಾಗಿಲ್ಲವೆ?''

ಸುಶೀಲೆ, ಭಯ-ರೋಷಗಳಿಂದ ಕಂಪಿಸುತ್ತೆ,-"ಪ್ರಾಣವು ಹೋಗುವವರೆಗೂ ವ್ರಣವೂ ಮಾಗುವಂತಿಲ್ಲ.''

ತಂತ್ರ:—ಪ್ರಾಣಭಯವಿಲ್ಲವೆಂದು ಈಗಲೇ ಪಂಡಿತರಿಂದ ತಿಳಿದುಬಂದಿರುವೆನು. ಹೆದರಬೇಡ.

ಸುಶೀಲೆ:—ಉದಾಸೀನದಿಂದ-ಸಾಯಬೇಕೆಂದೇ ಇರುವ ನನಗೆ ಪ್ರಾಣಭಯವೆಳ್ಳಷ್ಟೂ ಇಲ್ಲ.

ತಂತ್ರ:—ಸುಶೀಲೆ! ಆಗ ನೀನು ನನ್ನ ಮಾತನ್ನು ಕೇಳಿದ್ದರೆ ಇಷ್ಟರ ತೊಂದರೆಗಳುಂಟಾಗುತ್ತಿರಲಿಲ್ಲ!! ಈ ರೋಗಕ್ಕೆ ನೀನು ತುತ್ತಾಗುತ್ತೆ

ಯೂ ಇರಲಿಲ್ಲ. ನಿನ್ನ ಗಂಡನು, ಮರಣಭೀತಿಯಿಂದ ನರಳುತ್ತಿರುವುದಕ್ಕೂ ಅವಕಾಶವಿರುತ್ತಿರಲಿಲ್ಲ !!! ಅಂದೇ ನೀನು ನನ್ನೊಡನೆ ಬಂದಿದ್ದರೆ ಎಷ್ಟು ಸುಖವಾಗಿರಬಹುದಾಗಿತ್ತು ? ಆ ಮರುದಿನವೆ ನಿನ್ನ ಗಂಡನು ಚಪಲೆಯನ್ನು ಕೊಂದನು. ಕೊಲೆಯನ್ನು ಮಾಡಿದುದಕ್ಕಾಗಿ ಕಾರಾಗಾರದಲ್ಲಿ ನರಲುತ್ತಿರುವನು. ಮರಣದಂಡನೆಯಾದರೂ ಆದೀತು ! ಈಗಳಾದರೂ ನನ್ನ ಮಾತನ್ನು ಕೇಳು ? ಬಾಳುವ ದಾರಿಯನ್ನು ತೋರುವೆನು.

ಸುಶೀಲೆ:—ತಿರಸ್ಕಾರಭಾವದಿಂದ–‘ ಮೂರ್ಖ ! ಇಲ್ಲಿಗೇಕೆ ಬಂದೆ ? ನಿಲ್ಲದೆ ಹೊರಟುಹೋಗು. ಇಹಸೌಖ್ಯವು ಸ್ಥಿರವಲ್ಲ. ನಶ್ವರಸುಖಕ್ಕಾಶೆಪಟ್ಟು ಪಾಮರನಾಗುವುದು ಮಾನವಧರ್ಮವಲ್ಲ. ಎಷ್ಟೇ ಕಷ್ಟನಷ್ಟಗಳುಂಟಾದರೂ ಕರ್ತವ್ಯವನ್ನು ಮೀರದೆ ನಡೆಯಿಸಿದರೆ ಶಾಶ್ವತವಾದ ಪರಸೌಖ್ಯವುಂಟಾಗುವುದು. ಕರ್ಮಕ್ಕೆ ತಕ್ಕ ಫಲಾನುಭವವು ಆರಿಗೂ ತಪ್ಪುವುದಿಲ್ಲವಾದುದರಿಂದ ನನ್ನ ಸ್ವಾಮಿ, ಕುತ್ಸಿತರ ಸಹವಾಸದಿಂದ ಮಾಡಿದ ಕರ್ಮಗಳಿಗೆ ಪ್ರಾಯಶ್ಚಿತ್ತವನ್ನು ಅನುಭವಿಸಿಯೇ ತೀರಬೇಕು. ನಾನು ಆತನೆ ಗತಿಯನ್ನು ಅನುವರ್ತಿಸದೆ ಸ್ವಧರ್ಮ, ನೀತಿ, ತತ್ವಗಳನ್ನು ತೊರೆದು, ದುರ್ಮಾರ್ಗದಲ್ಲಿ ಬಿದ್ದು ಅತ್ಯುತ್ತಮವಾದ ಸುಖಾನಂದಕ್ಕೆ ಬಾಹಿರೆಯಾಗುವಂತಹ ದುರಾಶೆಯು ನನಗೆ ಕನಸಿನಲ್ಲಿಯಾದರೂ, ಎಳ್ಳಷ್ಟೂ ಉಂಟಾಗದೆಂದು ತಿಳಿದಿರು ; ಹುಚ್ಚ ! ಸಾರಿ ಸಾರಿ ಹೇಳುವೆನು. ಒಂದು ವೇಳೆ, ನನ್ನ ಸ್ವಾಮಿಗೆ ಮರಣದಂಡನೆಯೇ ವಿಧಿಸಲ್ಪಟ್ಟರೂ ನನಗೂ ಮರಣವು ಮುಂದಾಗಿಯೇ ಲಭಿಸುವುದು. ನನಗದರಿಂದ ದುಃಖವಾಗುವಂತಿಲ್ಲ. ನಿನ್ನ ದುರಾಶೆ, ಸ್ವಪ್ನದಲ್ಲಿಯೂ ಸಫಲವಾಗದೆಂದು ನಂಬಿ ಹೊರಟುಹೋಗು.

ತಂತ್ರ:—ಸುಶೀಲೆ! ಹಟಮಾಡಿ ಕೆಡಬೇಡ !! ಇದರಿಂದ ಮತ್ತಷ್ಟು ಕಷ್ಟವುಂಟಾಗುವುದು. ನನ್ನ ಮನಸ್ಸಂತೋಷಪಡಿಸದೆ ಇದ್ದರೆ, ನಿನಗೆಂ

ದಿಗೂ ಸುಖವುಂಟಾಗಲಾರದೆಂದು ನಂಬಿರು. ನೀನು ಇಷ್ಟು ಕಾಠಿಣ್ಯವನ್ನು ವಹಿಸಿ, ನಿಷ್ಠುರವಾಡುತ್ತಿದ್ದರೂ ನಿನ್ನ ಮೇಲಿರುವ ಅಭಿಮಾನದಿಂದ ಅವೆಲ್ಲವನ್ನೂ ಸಹಿಸಿ, ನಿನ್ನನ್ನೂ ಜೀವಸಹಿತ ಬಿಟ್ಟಿರುವೆನಲ್ಲದೆ ಬೇರೆಯಿಲ್ಲ. ಈಗಳೂ ನನ್ನ ಮಾತನ್ನು ಕೇಳಿದರೆ ಬದುಕುವೆ, ಇಲ್ಲವಾದರೆ ಸಾಯುವೆ.

ಸುಶೀಲೆ:—ತಿರಸ್ಕಾರದಿಂದ,-‹ಉನ್ಮತ್ತ ! ನಿನ್ನೀ ಉನ್ಮಾದಪ್ರಲಾಪವಿನ್ನು ಸಾಕು ! ತೊಲಗು. ನನ್ನನ್ನು ನೀನು, ಈಗಲೇ ಕೊಂದರೂ ಸರಿಯೆ, ನಾನೆಂದೂ ನಿನಗೆ ಒಳಗಾಗಲೊಲ್ಲೆನು. ವಿಚಾರವಾಡದೆ ನೀನು ದುಡುಕಿ, ನನ್ನನ್ನು ಮುಟ್ಟಬಂದರೂ ಹಾನಿ ತಪ್ಪದು. ನನ್ನ ಸ್ವಾಮಿಯ ಸುಖಕ್ಕಾಗಿ, ನನ್ನ ಸತೀತ್ವರಕ್ಷಣೆಗಾಗಿ ನಾನೀ ಪ್ರಾಣವನ್ನಾದರೂ ಬಿಡಬಲ್ಲೆನು. ನನ್ನ ಮರಣದಿಂದ ನನ್ನ ಸ್ವಾಮಿಗೆ ಸುಖವೇ ಆದೀತು! ಹೊರಟುಹೋಗು. ನಿಲ್ಲಬೇಡ.

ತಂತ್ರನಾಥನಿಗೆ ಕ್ರೋಧವು ಮಿತಿಮೀರಿತು. ಅಭಿಮಾನವೊಂದೆಡೆಯಲ್ಲಿಯೂ, ಶೋಕವು ಮತ್ತೊಂದೆಡೆಯಲ್ಲಿಯೂ, ಆಗ್ರಹವಿನ್ನೊಂದೆಡೆಯಲ್ಲಿಯೂ, ಅಸೂಯೆ ಮುನ್ನೊಂದೆಡೆಯಲ್ಲಿಯೂ, ಹೇಗೂ ನಾಲ್ಕು ಕಡೆಯಲ್ಲಿಯೂ ಜ್ವಾಲೆಯಂತೆ ಸುತ್ತಿ ತಪಿಯಿಸುತ್ತಿದ್ದುವು. ಕಾಮಮೋಹಿತನಾದ ತಂತ್ರನಾಥನು ಮುಂದಣಾಲೋಚನೆಯಿಲ್ಲದೆ, ಸುಶೀಲೆಯ ಕೊರಲನ್ನು ಎಡಗಯ್ಯಿಂದೆ ಬಿಗಿಯಾಗಿ ಹಿಡಿದು, ಬಲಗಯ್ಯನ್ನು ಮೇಲಕ್ಕೆತ್ತಿ ಎದೆಯ ಮೇಲೆ ಗುದ್ದಲು, ಸರಿಯಾಗಿ ಹಿಡಿದನು. ಆದರೆ ಆಪದ್ಬಂಧುವಾದ ಮಯೂರಿ, ಅಷ್ಟರಲ್ಲಿಯೇ ಬಂದುದರಿಂದ ದೂರದಲ್ಲಿಯೇ ತಂತ್ರನಾಥನ ಪ್ರಯತ್ನವನ್ನು ನೋಡಿ ಅವಸರದಿಂದ ಓಡಿಹೋಗಿ ಸುಶೀಲೆಯ ತಾಯ್ತಂದೆಯರನ್ನು ಕರೆತಂದು ತೋರಿಸಿ, ಹಿಂದಿನಿಂದ ಬಂದು, ತಂತ್ರನಾಥನನ್ನು ಹಿಡಿದೆಳೆದು ಕೆಳಗೆ ಕೆಡಹಿದಳು.

ಸುಶೀಲೆಯ ತಂದೆಯಾದ ಸುಜ್ಞಾನಶರ್ಮನು, ಕೆಳಗೆಬಿದ್ದಿದ್ದ ತಂತ್ರನಾಥನನ್ನು ನೋಡಿ, ಕರ್ಕಶಸ್ವರದಿಂದ,-‹ ಕೃತಘ್ನ ! ಪಾಷಂಡ !!

ಘಾತಕ !!! ನಿನ್ನೀ ದುರ್ಜೀವಿತಕ್ಕೆ ಧಿಕ್ಕಾರ ! ನಿನ್ನ ಮಾನವ ಜನ್ಮಧಾರಣೆಗೆ ಧಿಕ್ಕಾರ !! ಧಿಕ್ ! ಧಿಕ್ !! ವಿದ್ರೋಹಿ ! ನಿನಗಿದೊ ಸಹಸ್ರಶಃ ಧಿಕ್ ! ನಿನ್ನೀ ಘೋರಕೃತ್ಯಕ್ಕೆ ಪ್ರಾಯಶ್ಚಿತ್ತವನ್ನು ಹೊಂದು!' ಎಂದು ಹೇಳುತ್ತೆ ತಂತ್ರನಾಥನ ಕಯ್ಕಾಲುಗಳನ್ನು ಕಟ್ಟಿ ಕೆಡಹಿದನು.

ಸುಶೀಲೆಯ ತಾಯಿ,—ಅಳಿಯನ ದುರವಸ್ಥೆಗೆ ರೋಷ-ಕ್ಲೇಶಗಳಿಂದ ಕಣ್ಣೀರು ಸುರಿಸುತ್ತೆ ನಿಟ್ಟುಸಿರಿಟ್ಟು,-" ನಿರ್ಭಾಗ್ಯ ! ನಿನ್ನೀ ದುರ್ನಡತೆಗಾಗಿ ನನಗೆಷ್ಟು ದುಃಖವೆಂಬುದನ್ನು ಬಲ್ಲೆಯಾ ? ನನ್ನ ಮಗಳು ಬದುಕಿದ್ದರೆ ನಿನ್ನೀ ದುರಾಚಾರಕ್ಕಾಗಿ ಎಷ್ಟು ದುಃಖಿಸುತ್ತಿದ್ದಳೋ ಸ್ವಲ್ಪ ಭಾವಿಸಿನೋಡು ! ಅವಳು ಅಳಿದು ಪುಣ್ಯವತಿಯೆನ್ನಿಸಿದಳಲ್ಲವೆ ? ಪಾಪಿ ! ನಮ್ಮ ಭಾಗ್ಯದೇವತೆಯಾದ ಸುಶೀಲೆಯ ಈ ವಿಪತ್ತಿಗೆ ನೀನಲ್ಲವೆ, ಕಾರಣಭೂತನೂ, ಕಾರ್ಯಕಾರಿಯೂ ಆದವನು? ನಿನಗೀ ದುರ್ಬುದ್ಧಿಯುಂಟಾದುದು-ನಿನ್ನ ನಾಶಕ್ಕಲ್ಲದೆ ಮತ್ತೆ ಬೇರಿಲ್ಲ, ಅನುಭವಿಸು."

ಮಯೂರಿ:—ಅಮ್ಮಾ ! ಈ ಘಾತಕನಿಗಾಗಿ ಕನಿಕರಪಡಬಾರದು. ಇವನ ದುಷ್ಕಾರ್ಯಕ್ಕೆ ಎಂತಹ ಶಿಕ್ಷೆಯಾಗಬೇಕೋ ತಿಳಿಯದು. ಇವನನ್ನು ಈಗಲಾದರೂ ಹಿಡಿದು ಶಿಕ್ಷಿಸದಿದ್ದರೆ, ಸಮಾಜಕ್ಕೂ-ನ್ಯಾಯಕ್ಕೂ-ಹಾನಿತಪ್ಪದು. ಇವನು ಮತ್ತೆ ತಪ್ಪಿಸಿಕೊಂಡರೆ ಸುಶೀಲೆಗೆ ಮೃತ್ಯುವೆಂದೇ ತಿಳಿಯಬೇಕು. ಹಿಂದಿನ ಮಮತೆ ಈಗ ಸಲ್ಲದು. ಈಗಲೇ ಇವನನ್ನು ಪೊಲೀಸಿನವರ ಕಯ್ವಶಪಡಿಸಿದರೆ ನಾಳೆಯದಿನದ ವಿಚಾರಣೆಯಲ್ಲಿ ನೈಜಸಂಗತಿಯೂ ಹೊರಬೀಳುವಂತಾದೀತು. ಇವನ ವಿಚಾರಣೆಯಿಂದ ವಿನೋದನಿಗೆ ನಿಜವಾಗಿಯೂ ಸುಖಸಂಗತಿಯಾಗಲು ಸಂಶಯವಿಲ್ಲ.

ಸುಜ್ಞಾನಶರ್ಮನು ಮಯೂರಿಯ ಹಿತಬೋಧನೆಗೆ ಸಮ್ಮತಿಸಿ, ತಂತ್ರನಾಥನನ್ನು ಪೊಲೀಸಿನವರ ವಶಕ್ಕೊಪ್ಪಿಸಿದನು. ಅಂದು ತಲೆತಪ್ಪಿಸಿಕೊಂಡರೂ, ಇಂದು ಪಾಪ ! ಜ್ಞಾನಮಂಟಪ ಪ್ರವೇಶವು, ತಂತ್ರನಾಥನಿಗೆ ತಪ್ಪಲಿಲ್ಲ. ಇದಕ್ಕೆಂದಲ್ಲವೇ ಕಳ್ಳನೆಂದಿದ್ದರೂ ಸಿಕ್ಕುವನೆಂದಾಡುವುದು ?

ಸುಹೃದರೆ !

"ಕಾಮಾತುರಾಣಾಂ ನ ಭಯಂ ನ ಲಜ್ಜಾ" ಎಂಬುದರಲ್ಲಿ ಸಂಶಯವೇನು ? ಕಾಮಮೋಹಿತನಿಗೆ ಭಯ, ಲಜ್ಜೆಗಳು ಮಾತ್ರವಲ್ಲ; ಉಚಿತಾನುಚಿತ ವ್ಯಾಪಾರದ ಪ್ರಜ್ಞೆಯೇ ಇರುವುದಿಲ್ಲ. ಏಕೆಂದರೆ— "ಕ್ಷುಧಾತುರಾಣಾಂ ನ ರುಚಿರ್ನಪಕ್ವಂ" ಹಸಿದು ಬಳಲಿದಾತನಿಗೆ ರುಚಿಯೂ, ಪಕ್ವವೂ ತಿಳಿಯದೆಂಬುದು ನಿಜವಷ್ಟೆ ? ಹಾಗೆಯೇ ಕಾಮಾಂಧನಿಗೂ ಯುಕ್ತಾಯುಕ್ತ ವಿಚಾರವೇ ಇಲ್ಲದೆ, ವಿಷಯಾತುರವೆಂಬ ಕ್ಷುದ್ಬಾಧೆಯೊಂದೇ ಮುಂದಾಗಿ, ಆವುದನ್ನಾದರೂ ಮಾಡಿಸಿಬಿಡುವುದು. ಇಂತಹ ಕಾಮಾತುರರಾದವರಿಂದ ಈ ಜಗತ್ತಿನಲ್ಲಿ ಎಂತೆಂತಹ ಕಾರ್ಯಗಳು ನಡೆಯುತ್ತಿರುವುವೆಂಬುದನ್ನು ಇಲ್ಲಿ ಹೇಗೂ ಹೇಳಿ ಮುಗಿಯುವಂತಿಲ್ಲ. ಕಾಮಕ್ಕೆ ಅಧೀನರಾಗದೆ, ಶತ್ರುಸ್ವರೂಪವಾದ ಅರಿಷಡ್ವರ್ಗವನ್ನು ಜಯಿಸಿರತಕ್ಕವರಾರೋ, ಅವರೇ ಸಿದ್ಧರು ! ಅವರೇ ಪರಮಪುರುಷರು !! ಅಂತಹ ಧನ್ಯಾತ್ಮರಿಗೆ ನಮ್ಮ ಸಹಸ್ರವಂದನೆಗಳು !:!

ದಶಮಪರಿಚ್ಛೇದ.

(ನ್ಯಾಯಸ್ಥಾನ)

ಒಂದು ಮಲಯಪುರದ ನ್ಯಾಯಸ್ಥಾನ (Court) ದಲ್ಲಿ ಧರ್ಮಾವತಾರನ (Judge) ಮುಂದೆ ಅಪರಾಧಿಗಳ ವಿಚಾರಣೆಯಾಗಬೇಕು. ಗಿರಿಯಮ್ಮ, ತಂತ್ರನಾಥ, ವಿನೋದ, ಮಯೂರಿ, ಸುಜ್ಞಾನಶರ್ಮ ಇವರ ವಿಚಾರಣೆಯೇ ಮುಖ್ಯವಾದುದು.

ಧರ್ಮಾವತಾರನ ಮುಂದೆ, ಮೊದಲು ಗಿರಿಯಮ್ಮನು ಕರೆಯಿಸಲ್ಪಟ್ಟಳು. ವಿಚಾರಕ್ಕೆ ಮೊದಲಾಯ್ತು ; ಗಿರಿಯಮ್ಮನು ಗದಗದಿಸುತ್ತೆ,

ಮೆಲ್ಲನೆ–“ ಸ್ವಾಮಿ ! ಧರ್ಮಾವತಾರರಾದ ಪ್ರಭುಗಳ ಮುಂದೆ ಸುಳ್ಳಾಡ ಲಾರೆನು.” ಎಂದು ಹೇಳಿ, ತನ್ನ ಸಂಕಲ್ಪ, ತಂತ್ರನಾಥನ ಕುತಂತ್ರ, ತಾನು ವಿನೋದನಿಗೆ ತಿಳಿಸಿದ ಸಂಗತಿ, ಇನ್ನೂ– ಇವೇ ಮೊದಲಾದ ತನ್ನಿಂ ದೆ ನಡೆಯಿಸಲ್ಪಟ್ಟ ಕೃತ್ಯಗಳೆಲ್ಲವನ್ನೂ ಸ್ವಲ್ಪವೂ ವ್ಯತ್ಯಾಸವಿಲ್ಲದೆ ತಿಳಿಸಿ ಬಿಟ್ಟಳು.

ಆ ಬಳಿಕ ಧರ್ಮಾವತಾರನ ಮುಂದೆ ಮಯೂರಿ ಕರೆಯಿಸಲ್ಪ ಟ್ಟಳು. ವಿಚಾರಕ್ಕೆ ಮೊದಲಾಯ್ತು ; ಜಡ್ಜಿಯ (ಧರ್ಮಾವತಾರ– ನ್ಯಾಯಾಧಿಕಾರಿ) ಪೃಚ್ಛೆಗೆ ಮಯೂರಿ, ಸ್ಥಿರಭಾವನೆಯಿಂದ ತನಗೆ ತಿಳಿದ ಸಂಗತಿಯೆಲ್ಲವನ್ನೂ, ಗಿರಿಯಮ್ಮ–ಸುಶೀಲೆಯರ ಸಂವಾದ ಮೊದಲ್ಗೊಂಡು, “ ತಂತ್ರನಾಥನ ಆಗಮನ, ಅವನ ದುರಭಿಸಂಧಾನಕ್ರಮ, ವಿನೋದನ ಆಗ್ರಹ, ಪರಿಣಾಮ, ತಾನು ಇನಸ್ಪೆಕ್ಟರನ್ನು ಕರೆತಂದ ಕಾರಣ,” ಇವೆಲ್ಲವನ್ನೂ ತಿಳಿಸಿದಳು. ಆ ಬಳಿಕ ಇನಸ್ಪೆಕ್ಟರ ವಿಚಾರಣೆಯಾಗಿ ಆತನು ಮಯೂರಿಯಿಂದ ತನಗೆ ತಿಳಿದುಬಂದ ಘಾತವೃತ್ತಾಂತವನ್ನು ಯಥಾವತ್ತಾಗಿ ತಿಳಿಸಿದುದಲ್ಲದೆ, ಚಪಲೆಯ ಮರಣವು ತಂತ್ರನಾಥನ ಕ ಯ್ಯಿಂದೆಯೇ ನಡೆಯಿತೆಂಬುದನ್ನು ದೃಢಪಡಿಸಿದನು.

ನಾಲ್ಕನೆಯವನಾಗಿ ಸುಜ್ಞಾನಶರ್ಮನು ಬಂದು, ಸುಶೀಲೆಯನ್ನು ಮಯೂರಿಯೊಡನೆ ಇನಸ್ಪೆಕ್ಟರು ತನ್ನ ಮನೆಗೆ ಕಳಿಸಿದುದನ್ನೂ ಹೊಂಚಿ ನಿಂದ ಸಂಚುಕಾಯುತ್ತಿದ್ದ ತಂತ್ರನಾಥನು, ಸುಶೀಲೆಯ ಮೇಲೆ ನಡೆಯಿಸ ಲೆತ್ನಿಸಿದ ಅತ್ಯಾಚಾರವನ್ನೂ ವಿವರಿಸಿದನು. ಅಲ್ಲದೆ ಕೃತಘ್ನನಾದ ತಂತ್ರ ನಾಥನಿಗೆ ತಕ್ಕ ಶಿಕ್ಷೆಯಾಗದೆ ಹೋದರೆ ಸುಶೀಲೆಗೂ, ಸಮಾಜಕ್ಕೂ ಹಾ ನಿ ತಟ್ಟುವುದೆಂದೂ ಮನವಿಮಾಡಿಕೊಂಡನು.

ಇದಾದ ಬಳಿಕ, ತಂತ್ರನಾಥನು ಕರೆಯಿಸಲ್ಪಟ್ಟನು. ಆ ವೇಳೆ ಯಲ್ಲಿ ಆತನು ಹೇಗಾಗಿದ್ದನೆಂಬುದನ್ನು ತಿಳಿಯಹೇಳಲು, ನಮಗೆಂತೂ ಅಳವಲ್ಲ, ಗ್ರಾಹಕಶಕ್ತಿಯಿದ್ದಷ್ಟೂ ಊಹಿಸಿ ತಿಳಿದುಕೊಳ್ಳಬೇಕು.

ಹೇಗೂ, ತಂತ್ರನಾಥನು ಕಂದುಬಣ್ಣಕ್ಕೆ ತಿರುಗಿ, ಸುಕ್ಕಿಹೋಗಿದ್ದ ಮುಖ ವನ್ನು ಮೇಲಕ್ಕೆತ್ತಿ ನ್ಯಾಯಾಧಿಕಾರಿಯನ್ನು ದೈನ್ಯದೃಷ್ಟಿಯಿಂದೆ ನೋಡು ತ್ತೆ, ಕೇಳಿಕೊಂಡನು.—“ ಧರ್ಮಪ್ರಭೊ ! ನಾನು ನಡೆಯಿಸಿರುವ ಕೆಲಸ ಗಳೆಲ್ಲವನ್ನೂ ನಿಜವಾಗಿ ಹೇಳುವೆನು. ಆದರೆ ನನ್ನನ್ನು ಬಿಡುವುದಾಗಿ ಮೊ ದಲು ವಾಗ್ದಾನಮಾಡಬೇಕು.” ಧರ್ಮಾವತಾರನು “ ಆಗಬಹುದು ” ಎಂದು ಅಭಯವಿತ್ತನು. ಅಲ್ಲದೆ ಈ ವರೆಗೆ ತನ್ನ ಅಕ್ರಮಸಂಬಂಧವಾಗಿ ಇತರರಿಂದ ಕೊಡಲ್ಪಟ್ಟ ಸಾಕ್ಷ್ಯಗಳಿಂದ ತಾನು ಹೇಗೂ ತಪ್ಪಿಸಿಕೊಳ್ಳು ವಂತಿಲ್ಲವೆಂಬುದು ತಂತ್ರನಾಥನ ಮನದಲ್ಲಿ ನೆಟ್ಟುಹೋಗಿದ್ದುದು. ಇನ್ನು ಮಾಡುವುದೇನೆಂಬುದೇ ತಿಳಿಯದೆ ಎಲ್ಲವನ್ನೂ ಸಂಗ್ರಹವಾಗಿ ಹೇಳಿ ಸುಮ್ಮ ನಾದನು.

ಕಡೆಗೆ ವಿನೋದನು ಕರೆಯಿಸಲ್ಪಟ್ಟು, ಅಪರಾಧಿ ಸ್ಥಾನದಲ್ಲಿ ತಲೆ ಬಾಗಿನಿಂತನು. ಮೊದಲು ಅವನಲ್ಲಿ ವಿದ್ಯಾವೈಭವಪ್ರದರ್ಶಕವಾಗಿದ್ದ ಕಾಂತಿ ಯಾಗಲೀ, ಉತ್ಸಾಹವಾಗಲೀ, ಶಕ್ತಿಯಾಗಲೀ ಯಾವುದೂ ಕಾಣುತ್ತಿಲ್ಲ. ಮುಖವು ಬಾಡಿಹೋಗಿದೆ! ಕಾಂತಿಹೀನವಾದ ಕಣ್ಣುಗಳಿಂದ ನೀರು ಸೋರು ತ್ತಿದೆ !! ಕ್ಷಣಕ್ಷಣಕ್ಕೂ ನಿಟ್ಟುಸಿರು ಹೊರಹೊರಡುತ್ತಿದೆ !!! ಇಂತಿರುವ ವಿನೋದನನ್ನು ನೋಡಿ ಸಹಿಸಬಲ್ಲವರಾರು ? ಆದರೆ ಮಾಡತಕ್ಕುದೇನು ? ಆಟ್ಟುದನ್ನು ಉಣದಿದ್ದರಾದೀತೆ ? ಪಾಪ ! ವಿನೋದನು, ಧರ್ಮಾವ ತಾರನನ್ನು ನೋಡುತ್ತೆ ಕ್ಷೀಣಸ್ವರದಿಂದ ಹೇಳತೊಡಗಿದನು.—“ ಧರ್ಮಾ ವತಾರ! ನಾನು ಮಹಾಪರಾಧಿ! ನನ್ನ ಪೂರ್ವಸ್ಥಿತಿಗತಿಗಳನ್ನು ನೆನೆನೆನೆದು ಈಗ ನಾನು ಸಂತಪಿಸುತ್ತಿರುವೆನು. ಮಾಯಾವಿನಿಯಾದ ಚಪಲೆಯ ಕುಟಿ ಲೋಕ್ತಿಗಳಿಗೆ ಮರುಳಾದ ನಾನು, ಗಿರಿಯಮ್ಮ-ತಂತ್ರನಾಥರ ಹೇಳಿಕೆ ಯೆಲ್ಲವೂ ನಿಜವಾದುವುವೆಂದೇ ನಂಬಿ, ದುಡುಕಿ ಕೆಟ್ಟೆನು. ಕಾಮಮೋಹಿ ತನಾದ ನನಗೆ, ಆ ನನ್ನ ಧರ್ಮಪತ್ನಿಯ ವಿಚಾರವಾಗಿ ಇವರಾಡಿದ ಅಪ ಲಾಪಗಳೆಲ್ಲವೂ ಸತ್ಯವೆಂದು ತಿಳಿದು ಅವಳನ್ನು ದ್ವೇಷಿಸಿದೆನು. ಈಗ

ಅದನ್ನು ಹೇಳಿ ಫಲವಿಲ್ಲ. ನಾನು ಚಪಲೆಯನ್ನು ಕೊಲ್ಲಬೇಕೆಂದಿದ್ದುದು ನಿಜ; ಆದರೆ ಕೊಂದವನು ನಾನಲ್ಲ. ನನ್ನ ಸರ್ವಸ್ವವನ್ನೂ ಅಪಹರಿಸಿ, ನನ್ನನ್ನು ಕೊಲ್ಲಬೇಕೆಂದಿದ್ದ ಚಪಲೆ-ಮತ್ತು ತಂತ್ರನಾಥರನ್ನು ಕೊಲ್ಲಬೇಕೆಂದು ಯೋಚಿಸಿದೆನು. ಅಷ್ಟರಲ್ಲಿ ಚಪಲೆಯೇ ತಂತ್ರನಾಥನ ಸಹಾಯದಿಂದ ನನ್ನನ್ನು ಕೊಲ್ಲಲು ಪ್ರಯತ್ನಪಟ್ಟು ತಾನೇ ಮೃತಳಾದಳು. ಅಂದು ನಾನು ತಂತ್ರನಾಥನ ಕೊಡಲಿಯೇಟನ್ನು ತಪ್ಪಿಸಿಕೊಳ್ಳದಿದ್ದರೆ, ಅದು ಚಪಲೆಯನ್ನು ಕೊಲ್ಲದಿದ್ದರೆ, ನಿಜವಾಗಿಯೂ ನಾನು ಇಂದಿನ ಈ ವಿಚಾರಣೆಗಾಗಿ ಇಲ್ಲಿಯವರೆಗೂ ಬರುವಂತಾಗುತ್ತಿರಲಿಲ್ಲ. ದೈವವಿಲಾಸದಿಂದ ಹಾಗಾಗಲಿಲ್ಲ. ಆ ವೇಳೆಯಲ್ಲಿ ಅವರಿಬ್ಬರನ್ನೂ ಕೊಲ್ಲಬೇಕೆಂದಿದ್ದ ದುರ್ಬುದ್ಧಿಯು ಈಗ ಇಲ್ಲ. ಈಗ ತಂತ್ರನಾಥನನ್ನು ನೋಡಿ ಅತಿಯಾಗಿ ಕನಿಕರಪಡುತ್ತಿರುವೆನಲ್ಲದೆ, ನನ್ನ ಅಕಾರ್ಯಗಳಿಗಾಗಿ ನನ್ನನ್ನು ನಾನೇ ನಿಂದಿಸಿಕೊಳ್ಳುತ್ತಿರುವೆನು.'' ಎಂದು ಹೇಳುತ್ತಿದ್ದಂತೆಯೇ ಅನುತಾಪಾಗ್ನಿಯಿಂದ ಸಂತಪಿಸುತ್ತ ಕೆಲವು ಹೊತ್ತು ಸ್ತಬ್ಧನಾಗಿ ನಿಂತಿದ್ದು, ಮತ್ತೆ ಚೇತರಿಸಿಕೊಂಡು,—‹‹ ಧರ್ಮಪ್ರಭೊ ! ನನ್ನ ಅಪರಾಧಗಳು ಅನೇಕವಾಗಿವೆ. ಧರ್ಮಪತ್ನಿಯಲ್ಲಿ ದ್ರೋಹಿ ! ಸತೀಮಣಿಯಾದ ಪತ್ನಿಯ ಕೊಲೆಗಾಗಿ ಪ್ರಯತ್ನಪಟ್ಟ ಪಾಪಿ !! ಕುಲದ ಮಾನ-ಕೀರ್ತಿಗಳಿಗೆ ಕುಂದನ್ನು ತಂದ ನೀತಿಬಾಹಿರ !!! ಹೆಚ್ಚಾಗಿ ಹೇಳುವುದೇನು ? ಆ ವೇಳೆಯಲ್ಲಿ ನನಗೆ ವಿವೇಚನಾಶಕ್ತಿಯೇ ಲೋಪವಾಗಿತ್ತೆಂದರೆ ಸಾಕಾಗಿದೆ. ಈಗ ಅದಕ್ಕಾಗಿ ಅನುತಾಪಪಟ್ಟು ನರಳುವುದೊಂದೇ ನನಗೆ ಫಲವಾಗಿದೆ. ನನ್ನ ದುಷ್ಕರ್ಮಗಳಿಗಾಗಿ ವಿಧಿಸಲ್ಪಡುವ ಕ್ರೂರಶಿಕ್ಷೆಯನ್ನು ಸಮಾಧಾನದಿಂದ ಅನುಭವಿಸಲು ಸಿದ್ಧನಾಗಿರುವೆನು. ಆದರೆ, ಆ ನನ್ನ ಧರ್ಮಪತ್ನಿಯನ್ನು ಒಮ್ಮೆ ಸಂದರ್ಶಿಸಿ, ಅವಳಲ್ಲಿ ಕ್ಷಮೆಬೇಡಿ, ಅನುಮತಿ ಹೊಂದಿ ಆ ಬಳಿಕ ಯಾವ ಶಿಕ್ಷೆಗೆ ಬೇಕಾದರೂ ಗುರಿಯಾಗುವೆನು. ಆ ಸಾಧ್ವಿಯ ಉಪದೇಶವು, ಪ್ರತಿನಿಮಿಷದಲ್ಲಿಯೂ ನನ್ನ ಹೃದಯದಲ್ಲಿ ದವಾನಲದಂತೆ ಜ್ವಲಿಸುತ್ತಿರುವುದು. ಈ ಸಂತಾಪಶಮನಕ್ಕಾಗಿ ಆ ಪುಣ್ಯಮೂರ್ತಿಯಲ್ಲಿ ನನ್ನ

ಅಪರಾಧಕ್ಷಮೆಯನ್ನು ಪ್ರಾರ್ಥಿಸಲು ನಿಶ್ಚಯಿಸಿರುತ್ತೇನೆ. ಆದುದರಿಂದ ಇದೊಂದು ಕೋರಿಕೆಯನ್ನು ಹೇಗಾದರೂ ಧರ್ಮ ಪ್ರಭುಗಳು ಅನುಗ್ರಹಿಸಬೇಕಾಗಿ ಬೇಡುತ್ತೇನೆ.

ಧರ್ಮಾವತಾರ:—ಪಂಚಾಯಿತರ ಕಡೆಗೆ ತಿರುಗಿ,–‘ವಿನೋದನ ವಿದ್ಯಮಾನವೆಲ್ಲವನ್ನೂ ಕೇಳಿ ತಿಳಿದಿರುವಿರಷ್ಟೆ; ನಿಮ್ಮ ಅಭಿಪ್ರಾಯವೇನು?

ಪಂಚಾಯಿತರು:—ವಿನೋದನು ದೊಡ್ಡ ಮನೆತನಕ್ಕೆ ಸೇರಿದವನೂ, ಶ್ರೀಮಂತನೂ, ವಿದ್ಯಾವಿನಯಸಂಪನ್ನನೂ, ಗೌರವಸ್ಥನೂ ಆಗಿರುವನು. ಈತನ ಈ ಬಗೆಯ ಅಚಾತುರ್ಯಕ್ಕೆ ಚಪಲೆ, ತಂತ್ರನಾಥ, ಗಿರಿಯಮ್ಮ ಇವರೇ ಕಾರಣಭೂತರು. ಇವರುಗಳ ದೋಷಾರೋಪಗಳಿಂದ ವಿನೋದನು ಇಂತಹ ಅಕಾರ್ಯವನ್ನು ಮಾಡಿರುವನು. ಕೃತಘ್ನನೂ, ಘಾತಕನೂ ಆದ ತಂತ್ರನಾಥನೇ ಚಪಲೆಯನ್ನು ಹೊಡೆದು ಕೊಂದನೆಂಬುದಕ್ಕೆ ಸಂಶಯವಿಲ್ಲ. ಪತ್ನಿಯನ್ನೂ ಮತ್ತು ಚಪಲೆಯನ್ನೂ ವಧಿಸಲು ಪ್ರಯತ್ನಿಸಿದ ಅಪರಾಧಗಳು ಮಾತ್ರವೆ ವಿನೋದನಮೇಲೆ ಆರೋಪಿತವಾಗುವಂತವುಗಳು. ಒಂದು ಕೊಲೆ ಮಾಡಿ ತಲೆ ತಪ್ಪಿಸಿಕೊಂಡಿದ್ದು, ಮತ್ತೊಂದು ಕೊಲೆಗೂ ಕಯ್ಯೆತ್ತಿದ ತಂತ್ರನಾಥನು ದಂಡಾರ್ಹನು. ದ್ರೋಹಿಗಳನ್ನು ಆಗಾಗಲೇ ದಂಡಿಸಬೇಕೆಂಬುದು ವಿದಿತವಿಷಯವು. ವಿನೋದನಿಗೆ ಆತನ ವಾಙ್ಮೂಲದಿಂದ ಈಗ ಜ್ಞಾನೋದಯವಾಗಿರುವಂತೆ ತೋರಿಬರುತ್ತಿರುವುದರಿಂದ ಇವನನ್ನು ಸರಿಯಾದ ಹೊಣೆಗಾರರ ನಂಬಿಕೆಯ ಮೇಲೆ ಬಿಟ್ಟರೂ ಬಿಡಬಹುದು.

ಧರ್ಮಾವತಾರ:—ವಿನೋದನ ಕಡೆಗೆ ತಿರುಗಿ,—‘‘ವಿನೋದ! ಸಭಿಕರು ನಿನ್ನನ್ನು ತಪ್ಪಿತಸ್ಥನಾಗಿದ್ದರೂ, ಜ್ಞಾನೋದಯದಿಂದ ಮುಕ್ತಾರ್ಹನೆಂದು ಹೇಳುತ್ತಿರುವುದರಿಂದೆಯೂ, ಕಾಗದಪತ್ರಗಳಲ್ಲಿ ನೀನು ಕೊಲೆಗೆ ಕಾರಣನಲ್ಲವೆಂಬುದು, ಅಷ್ಟಾಗಿ ದೃಢಪಡಿಸುವಂ

ತಿಲ್ಲವಾದುದರಿಂದೆಯೂ, ಈಗ ನಿನ್ನನ್ನು ಅರ್ಥದಂಡದಮೇಲೆ, ಯೋಗ್ಯನಾದ ಒಬ್ಬ ಮನುಷ್ಯನ ಹೊಣೆಯಿಂದ ಮುಕ್ತನನ್ನಾಗಿ ಮಾಡಬೇಕೆಂದಿರುವೆನು. ಇಲ್ಲಿ ಯಾರನ್ನಾದರೂ ಹೊಣೆ ಕೊಡ ಬಲ್ಲೆಯಾ ?

ವಿನೋದ—ಮಹಾಸ್ವಾಮಿ ! ನಾನು, ತಮ್ಮ ಕೃಪೆಗಾಗಿ ಕೇವಲ ವಿಧೇಯನಾಗಿರುವೆನು. ಆದರೆ, ನನ್ನ ಪಾಪಾಚರಣೆಯ ಫಲಾನುಭವಕ್ಕಾಗಿ ನನಗೆ ಮರಣವೇ ವರವಾಗಿರುವುದರಿಂದ ಈಗ ನಾನು, ಯಾರನ್ನೂ ಹೊಣೆಯಾಗಿರಲು ಪ್ರಾರ್ಥಿಸಲಾರೆನು. ಅಂತಹ ಮಹನೀಯರಾರಾದರೂ ಇದ್ದರೂ, ಅವರಿಗೆ ಧನ್ಯವಾದವನ್ನು ಸಮರ್ಪಿಸಿ ಯಾವಜ್ಜೀವವೂ ಅವರಿಗೆ ಕೃತಜ್ಞನಾಗಿರುವೆನು.

ಈವರೆಗೂ ನಡೆಯುತ್ತಿದ್ದ ವಿದ್ಯಮಾನಗಳನ್ನು ನೋಡುತ್ತ ಸಂಭ್ರಾಂತನಾಗಿದ್ದ ಸುಜ್ಞಾನಶರ್ಮನು, ವಿನೋದನ ಮಾತಿಗೆ ಖೇದವೋದಗಳಿಂದ ತಲ್ಲಣಿಸುತ್ತ ಧರ್ಮಾವತಾರನ ಮುಂದೆ ನಿಂತು ವಿನಯದಿಂದ ಕೇಳಿದನು, “ ಸ್ವಾಮಿ ! ಈ ವಿನೋದನಿಗಾಗಿ ನಾನು ಹೊಣೆಯಾಗಿರುವೆನು. ಇನ್ನು ಮುಂದೆ ಈತನಿಂದ ಎಂತಹ ಅಪರಾಧಗಳು ನಡೆಯಿಸಲ್ಪಟ್ಟರೂ ನಾನು ಶಿಕ್ಷೆಗೆ ಬದ್ಧನಾಗಲುಳ್ಳವನು. ಈತನನ್ನು ನನ್ನ ಹೊಣೆಯಮೇಲೆ ಬಿಟ್ಟುಕೊಡಬೇಕಾಗಿ ಕೋರುವೆನು ”

ಧರ್ಮಾವತಾರ—ವಿನೋದನಕಡೆಗೆ ತಿರುಗಿ ;—“ ವಿನೋದ ! ನಿನ್ನಮೇಲೆ ಎರಡು ಅಪರಾಧಗಳು ಆರೋಪಿತವಾಗಿ, ಒಂದೊಂದಕ್ಕೂ ಅಯ್ನೂರು ರೂಪಾಯಿಗಳಂತೆ ಅರ್ಥದಂಡವು ವಿಧಿಸಲ್ಪಟ್ಟು, ಸುಜ್ಞಾನಶರ್ಮರ ಹೊಣೆಯಮೇಲೆ ಬಿಡಲ್ಪಟ್ಟಿರುವೆ ! ಇನ್ನು ಮುಂದೆ ಇಂತಹ ಅಕ್ರಮಕ್ಕೆಡೆಗೊಡದೆ, ನಿನ್ನ ಕುಲದಗೌರವ, ಸಂಪದಗಳನ್ನು ಮತ್ತೆಗಳಿಸಿ, ಯಶೋಭಾಗಿಯಾಗು.”

ವಿನೋದ—ತಲೆಬಾಗಿ ಕಯ್ಮುಗಿದು ಸ್ಥಿರತೆಯಿಂದ, "ಸ್ವಾಮಿಾ! ಎಂದು, ನನಗೀ ಕೃತ್ರಿಮಸಂಧಾನವು ತಿಳಿದುಬಂದುದೋ, ಅಂದೇ ನನಗೆ ಕಾಲದಬೆಲೆ, ಸತ್ಯದಬಲ, ಧರ್ಮದವಿಜಯ, ಸಹೃದಯ ಬಾಂಧವ್ಯದ ನೈಜಸಂಕಲ್ಪಗಳು ಚೆನ್ನಾಗಿ ಹೃದಯಂಗಮವಾದು ಸನ್ಮಿತ್ರ-ಕುಮಿತ್ರರ ಪ್ರಕೃತಿ-ಸ್ವಭಾವ-ತಾರತಮ್ಯಗಳೂ ವ್ಯಕ್ತ ವಾದುವು. ಕ್ಷಣಿಕವಾದ ತುಚ್ಛಸುಖಕ್ಕಾಶೆಪಟ್ಟು ಕುಟಿಲೆಯರ ಬೆಳ್ನುಡಿಗೆ ಮರುಳಾಗಿ, ವಿಚಾರವಿಲ್ಲದೆ ದುಡುಕುವುದರ ಫಲವೂ ಅನುಭವಕ್ಕೆ ಬಂದುದು. ಈಗ ಸರ್ಕಾರದವರ ಆಜ್ಞೆ, ಯಾವರೀ ತಿಯಾದರೂ ಆ ರೀತಿ ನಡೆಯಲು ಸಿದ್ಧನಾಗಿರುವೆನು."

ಧರ್ಮಾವತಾರನು ಸಂತೋಷಾಶ್ಚರ್ಯಗಳಿಂದ,—"ವಿನೋದ! ಸಂತೃಪ್ತನಾದೆನು! ಇನ್ನು ಸಾಕು. ನಿನ್ನನ್ನು ಹಿಂದೆ ಹೇಳಿರುವಂತೆ ಮು ಕ್ತನನ್ನಾಗಿ ಮಾಡಿರುವೆನು."

ಧರ್ಮಾವತಾರನು ಮತ್ತೆ ಗಿರಿಯಮ್ಮನನ್ನು ಕುರಿತು, "ಗಿರಿಯ ಮ್ಮ! ನಿಮ್ಮ ನಡತೆಗೆ ತಕ್ಕ ಶಿಕ್ಷೆ ಅರ್ಥದಂಡವಲ್ಲದೆ, ಯಾವಜ್ಜೀವವೂ, ಜನಾಪವಾದಕ್ಕೆ ಗುರಿಯಾದುದೂ ಆಗಿದೆ. ಈ ಕಲಹಕ್ಕೆ ಬೀಜಪ್ರಾ ಯರಾದ ನಿಮ್ಮಿಂದಲೇ ಈ ಅನಾಹುತವು ಪ್ರಾಪ್ತವಾಯ್ತೆಂದು ತಿಳಿದು ಬಂದಿರುವುದರಿಂದ ನಷ್ಟದ್ರವ್ಯಕ್ಕೆ ನೀವೇ ಹೊಣೆಯಾಗಬೇಕು. ಅರ್ಥದಂ ಡವನ್ನೊಪ್ಪಿಸಿ ಹೋಗಬಹುದು. ವಿದ್ಯಾಗಂಧವನ್ನೇ ತಿಳಿಯದ ನಿಮ್ಮಂ ತಹ ಸ್ತ್ರೀಸಾಮಾನ್ಯರಲ್ಲಿ ನೆಲೆಗೊಂಡಿರುವ ದ್ವೇಷ-ರೋಷ-ಅಭಿಮಾನ- ಪ್ರತಿಷ್ಠೆಗಳಿಂದ ಎಂತೆಂತಹ ಅನರ್ಥಗಳು ಸಂಭವಿಸುವುವೆಂಬುದು ನಿದರ್ಶ ನಕ್ಕೆ ಬಂದುದು. ನಿಮ್ಮ ಮತ್ತು ಚಪಲೆಯಂತವರ ಕುಹುಕಗಳು ಸ್ತ್ರೀಜಗ ತ್ತಿಗೇ ಅಪಕೀರ್ತಿಯನ್ನು ತರತಕ್ಕುವುಗಳೆಂಬುದೂ ನಿರ್ಧರವಾಯ್ತು. ಅಲ್ಲದೆ, ಸುಶೀಲೆ, ಮತ್ತು ಮಯೂರಿಯರಿಗೆ ಎಂತಹ ವಿಪತ್ತು ಪ್ರಾಪ್ತ ವಾಗಿದ್ದರೂ, ಎದೆಗೆಡದೆ, ತಾಳ್ಮೆಯಿಂದ ಕಾರ್ಯವನ್ನು ನಿರ್ವಹಿಸಿದುದು

ಉತ್ತಮಗುಣವೆನ್ನಿಸಿರುವುದಲ್ಲದೆ, ಅವರ ಸದ್ವರ್ತನೆಯು, ಪ್ರಪಂಚಕ್ಕೇ ಪರಮಾದರ್ಶಜೀವನವಾಗಿರುವುದೆಂದು ಹೇಳಲು ಸಂತೋಷಪಡುವೆನು.''

ಹೀಗೆ ಹೇಳಿ, ಮತ್ತೆ ತಂತ್ರನಾಥನನ್ನು ಕುರಿತು,—'' ತಂತ್ರನಾಥ! ನಿನ್ನ ಮೇಲೆ ಮೂರು ಅಪರಾಧಗಳು ಆರೋಪಿತವಾಗಿವೆ. ಇದಕ್ಕೆ ನೀನೇನು ಹೇಳುವೆ?''

ತಂತ್ರ—ಕೋಪದಿಂದ ದರ್ಪಿತಸ್ವರದಲ್ಲಿ, '' ನಾನು ಹೇಳಬೇಕಾದುದು ಇಷ್ಟೆ! ಈ ಕ್ರೂರನಾದ ವಿನೋದ, ನಿಷ್ಠುರೆಯಾದ ಸುಶೀಲೆ, ಇವರಿಬ್ಬರನ್ನೂ ವಧೆಮಾಡಿದಲ್ಲದೆ, ನನ್ನ ಮನಸ್ಸು ಶಾಂತಿಯನ್ನು ಹೊಂದುವಂತಿಲ್ಲ. ನನಗೆ ಮರಣದಂಡನೆಯೇ ವಿಧಿಸಲ್ಪಟ್ಟರೂ, ಈ ಕಾರ್ಯವನ್ನು ಮಾಡಿಯೇ ಮೃತಿಹೊಂದಬೇಕೆಂಬುದು ನನ್ನ ಸಂಕಲ್ಪ.''

ಧರ್ಮಾವತಾರ—ಧಿಕ್ಕಾರಮಾಡಿ ನಕ್ಕು, '' ಈತನು, ಎಂದೆಂದಿಗೂ ನೀಚನೇಸರಿ. ಇವನಲ್ಲಿ ಇನ್ನು ಕನಿಕರಕ್ಕೆ ಅವಕಾಶವಿರುವುದಿಲ್ಲ. ಇಂತಹ ದ್ರೋಹಿಗಳಿಗೆ ಆಮರಣಾಂತವಾಗಿ ಕಾರಾಗಾರವಾಸವನ್ನು ವಿಧಿಸುವುದಕ್ಕಿಂತ ಮರಣದಂಡನೆಯೇ ಉತ್ತಮವಿಧಿ''

ತಂತ್ರನಾಥನಿಗೆ ಮರಣದಂಡನೆಯಾಯ್ತೆಂದು ಮತ್ತೊಮ್ಮೆ ಹೇಳಬೇಕಾದುದಿಲ್ಲವಷ್ಟೆ? ಹೇಗೂ, ಅಂದಿನಿಂದ ಕುಟಿಲ, ಅನೃತ, ಅತ್ಯಾಚಾರಗಳ ನಿಗ್ರಹದಿಂದ ಶಾಂತತೆಯೇ ನ್ಯಾಯಸ್ಥಾನದಲ್ಲಿ ಪೂರ್ಣಾಧಿಕಾರವನ್ನು ವಹಿಸಿ, ಸರ್ವತ್ರ ಪ್ರಕಾಶಿಸಲಾರಂಭಿಸಿತು.

ಪ್ರಿಯಸೋದರಿಯರೇ!

ಸ್ತ್ರೀವಿದ್ಯಾಭ್ಯಾಸವು ದೇಶಕ್ಕೆ ಹಾನಿಯನ್ನುಂಟುಮಾಡುವುದೇನು? ಎಂದಿಗೂ ಇಲ್ಲ. ಅವಿದ್ಯಾವತಿಯರಾದ ಗಿರಿಯಮ್ಮನಂತವರ ಅಹಂಕಾರವಲ್ಲದೆ, ಸುಶೀಲೆಯಂತವರ ವಿದ್ಯಾಭ್ಯಾಸವೆಂದೂ ಹಾನಿಯನ್ನುಂಟುಮಾಡಲೊಲ್ಲವು. ಸನ್ಮಾರ್ಗದಲ್ಲಿ, ಸುಶಿಕ್ಷಾರೂಪದಲ್ಲಿ ಹೊಂದುವ ವಿದ್ಯಾಧನವು,

ದೇಶವನ್ನು ಅತ್ಯುತ್ತಮಸ್ಥಿತಿಗೆ ತರಬಲ್ಲುದೆಂಬಲ್ಲಿ ಏನೂ ಸಂಶಯವಿಲ್ಲ. ಆದರೆ, ಪ್ರಕೃತದಲ್ಲಿ, ಸುಶಿಕ್ಷೆಯೆಂಬುದು, ಮರೆಯಾಗಿ, ಕ್ರಮವಿಲ್ಲದೆ ಕೊಡುವ ವ್ಯಾಸಂಗದಿಂದೆಯೂ, ವಿದ್ಯಾವತಿಯರೆನ್ನಿಸಿದ ಮಹಿಳೆಯರು, ತಮ್ಮ ಕಲಾಕೌಶಲ್ಯವನ್ನು ಸನ್ಮಾರ್ಗದಲ್ಲಿ ವಿನಿಯೋಗಿಸಲಾರದೆ, ದುರ್ವಿನಿಯೋಗಪಡಿಸುತ್ತಿರುವುದರಿಂದೆಯೂ, ಸ್ತ್ರೀವಿದ್ಯಾಭ್ಯಾಸಕ್ಕೆ ಅಪಮಾನವನ್ನೂ, ಆರ್ಯಜನಾಂಗಕ್ಕೆ ಕಳಂಕವನ್ನೂ ತಂದಿರುವುದೆಂಬುದರಲ್ಲಿ ಆಕ್ಷೇಪವೇನು? ಅಷ್ಟುಮಾತ್ರಕ್ಕೆ ಸ್ತ್ರೀವಿದ್ಯಾಭ್ಯಾಸವೇ ಕೆಟ್ಟುದಾಗಲಿಲ್ಲ. ವಿದ್ಯಾವತಿಯರು, ಅಶಿಕ್ಷಿತೆಯರಾಗಿ ಕೆಟ್ಟದಾರಿಯನ್ನು ಹಿಡಿದರೆ, ಅವರಿಂದ ಅದು ಕೆಟ್ಟುದೆನ್ನಿಸುವುದು. ಸನ್ಮಾರ್ಗದಲ್ಲಿ ನಡೆವ ಸತಿಯರ ವಿದ್ಯೆಯು ಸರ್ವೋತ್ತಮವಾದುದೆಂದು ಧೈರ್ಯದಿಂದ ಸಾರಿಸಾರಿ ಹೇಳಬಲ್ಲೆವು. ಇದಕ್ಕೆ ನಿದರ್ಶನಕ್ಕೆಂದರೆ, ಕೆಟ್ಟುದಕ್ಕೆ ಚಪಲೆಯನ್ನೂ, ಒಳ್ಳೆಯದಕ್ಕೆ ಸುಶೀಲೆಯನ್ನೂ ಮಾದರಿಯಾಗಿಟ್ಟು ಭಾವಿಸಿನೋಡಿರಿ !.

ಏಕಾದಶಪರಿಚ್ಛೇದ.

(ಆನಂದಸಾಮ್ರಾಜ್ಯ)

ಇಂದು ವಿನೋದನ ಸೌಭಾಗ್ಯಲಕ್ಷ್ಮಿ, ಪುನರುಜ್ಜೀವಿಸಿರುವಳು. ಸುಜ್ಞಾನಶರ್ಮನ ಮನೆಯೊಳಗಡೆಯ ಕಿರುಮನೆಯಲ್ಲಿ, ಮಂಚದಮೇಲೆ, ಸತೀಮಣಿ ಸುಶೀಲೆ, ಕುಳಿತಿರುವಳು. ಪತ್ನಿಯ ಪಕ್ಕದಲ್ಲಿಯೇ, ಆವಳ ಸಾಕಾರಬ್ರಹ್ಮಸ್ವರೂಪನಾದ ವಿನೋದನು ಕುಳಿತು, ಪತ್ನಿಯ ಕೊರಳ ಮೇಲೆ ತನ್ನ ಎಡದತೋಳನ್ನಿರಿಸಿ, ಬಲಗಯ್ಯಿಂದ ಸುಶೀಲೆಯ ಗಲ್ಲವನ್ನು ಮೇಲಕ್ಕೆತ್ತಿ, "ಪ್ರಿಯೆ! ಕ್ಷಮಿಸಲಾರೆಯಾ? ನನ್ನ ಅಪರಾಧಗಳೆಲ್ಲವನ್ನೂ ಕ್ಷಮಿಸಿ, ಕಟಾಕ್ಷಿಸಲೊಲ್ಲೆಯಾ?" ಎಂದು ಪ್ರಾರ್ಥಿಸುತ್ತಿರುವನು.

ಪ್ರಿಯ ಸೋದರೀ ಸೋದರರೇ !

ಕಾಲಪುರುಷನ ವಿಚಿತ್ರಗತಿಯೇ ಹೀಗಲ್ಲವೆ ? “ ದೈವೀ ವಿಚಿತ್ರಾ ಗತಿಃ ! ” ಎಂಬುದಕ್ಕೆ ಇಷ್ಟೇ ಸಾಲದೆ ? ಲೀಲಾನಂದ ವಿಭೂತಿಯನ್ನೊಳಕೊಂಡಿರುವ ಭಗವನ್ಮಾಯೆಯೂ ಇದೇ ಅಲ್ಲವೇ ? ಈ ಮಾಯೆಯಲ್ಲಿಯೇ ನಾವೆಲ್ಲರೂ ನಲಿನಲಿದಾಡುತ್ತಿರುವೆವೆಂದರೆ ಸಾಕಲ್ಲವೇ ? ಹಾಗಲ್ಲವೆಂದರೆ, ಆವಮೂರ್ತಿಯ ದರ್ಶನ, ಸ್ಪರ್ಶನ, ಸಂಭಾಷಣಾ ಕ್ರಿಯೆಗಳು ವಿನೋದನಿಗೆ ಯಾತನಾರೂಪಗಳಾಗಿ ಪರಿಣಮಿಸಿದ್ದುವೋ, ಅದೇ ಮೂರ್ತಿಯೇ, ಆ ರಮಣೀಮೂರ್ತಿಯೇ, ಈಗ ಆತನ ಹೃದಯದಲ್ಲಿ ಸರ್ವಾಧಿಕಾರವನ್ನೂ ವಹಿಸಿ, ವರಪ್ರದಾನಕ್ಕೆ ಸಂಪ್ರಾರ್ಥಿಸಲ್ಪಡುತ್ತಿರುವುದೆಂದರೆ ನೀವೇನು ಹೇಳುವಿರಿ ? ಆಗಲಿ, ವಿನೋದ ! ಕ್ಷಮಾಪ್ರಾರ್ಥನೆಯಾಗಲಿ !! ಬೇಡು ; ಪಾಪನಿವಾರಣೆಗಾಗಿ, ಮನಸ್ಸಮಾಧಾನಕ್ಕಾಗಿ ವರವನ್ನು ಬೇಡು ಬೇಡು !! ದಯಾಭರಿತೆಯೂ, ಸ್ನೇಹಮಯಿಯೂ, ಆದ ಸಾಧ್ವೀಮಣೀ ಸುಶೀಲೆಯನ್ನು ಪತ್ನಿಯಾಗಿ ಪಡೆದ ನೀನೇ ಧನ್ಯನೆಂದು ತಿಳಿದು, ನಲಿನಲಿದಾಡು.

ವಿನೋದನು ಮತ್ತೆ ; “ ಪ್ರಿಯೆ ! ಕ್ಷಮಿಸಲಾರೆಯಾ ? ಹೇಳು ; ಕ್ಷಮಿಸಿದೆನೆಂದು ಒಮ್ಮೆ ಹೇಳು ? ”

ಸುಶೀಲೆ—ಪತಿಯ ಪಾದದ ಮೇಲೆ ಮಸ್ತಕವನ್ನಿರಿಸಿ, ಬಾಷ್ಪಾಕುಲಿತಲೋಚನೆಯಾಗಿ ಅನುಕಂಪಿತಸ್ವರದಿಂದ, “ ಸ್ವಾಮಿನ್ ! ನಾನು ಕ್ಷಮಿಸಲು ಸತ್ಯವಾಗಿಯೂ ಶಕ್ತಳಲ್ಲ !! ನಾನು, ತಮ್ಮ ಚರಣದಾಸಿ ; ತಮ್ಮ ಕುಂದುಕೊರತೆಗಳನ್ನು ಕ್ಷಮಿಸಬಲ್ಲವನು ಆ ದಯಾಮಯನಾದ ಪರಮಾತ್ಮನಲ್ಲದೆ ಮತ್ತೊಬ್ಬನಿಲ್ಲ !! ಪ್ರಭೋ ! ನಾನು ಕಯ್ಕೊಂಡಿದ್ದ ವ್ರತವು, ಇಂದು ಸಿದ್ಧಿಹೊಂದಿತು. ಇಂದು ನನ್ನ ಸ್ವಾಮಿ, ಸನ್ಮಾರ್ಗಗಾಮಿಯಾದುದನ್ನು ಕಂಡು ಧನ್ಯಳಾದೆನು. ಹತಾಶಳಾಗಿ ಶೋಕದಿಂದ ಸಂತಪಿಸುತ್ತಿದ್ದವಳನ್ನು ಕರುಣಾಕ

ಟಾಕ್ಷದಿಂದ ನೋಡಿದ ಆ ಭಗವಂತನಿಗೆ, ನನ್ನ ಅನಂತಪ್ರಣಾಮಗಳನ್ನು ತಮ್ಮ ಸಮ್ಮುಖದಲ್ಲಿಯೇ ಸಮರ್ಪಿಸುವೆನು. ಕ್ಲೇಶಾಧಿಕ್ಯದಿಂದ ನಾನು, ಎಂದಾದರೂ, ಮಯ್ಯೆರೆತು ಅಪರಾಧವೇನನ್ನಾದರೂ ಮಾಡಿದ್ದರೆಯೂ, ದಯೆಯಿಂದ ಕ್ಷಮಿಸಬೇಕೆಂದು ಬೇಡುವೆನು.''

ವಿನೋದನು, ಸುಶೀಲೆಯ ಮೃದುಮಧುರ ವಚನದಿಂದ ಆನಂದೋದ್ರೇಕವನ್ನು ತಡೆಯಲಾರದೆ, ತನ್ನೆರಡು ತೋಳ್ಗಳಿಂದೆಯೂ ಪತ್ನಿಯನ್ನು ಬಲವಾಗಿ ಬಿಗಿದಪ್ಪಿಕೊಂಡುಬಿಟ್ಟನು. ಸುಶೀಲೆಯೂ, ಉನ್ಮತ್ತೆಯಂತೆ, ಆನಂದಾಶ್ರುವನ್ನು ಸುರಿಸುತ್ತ ಪತಿಯನ್ನು ಗಾಢಾಲಿಂಗನಮಾಡಿಕೊಂಡಳು.

ಆ ಆನಂದಮಂದಿರದಲ್ಲಿ, ಪತಿಯ ಬಾಹುಪಂಜರಮಧ್ಯದಲ್ಲಿ, ಸತೀಮಣಿ ಸುಶೀಲೆಯು, ಆನಂದದಾಯಿನಿಯಾದ ಅಧಿಷ್ಠಾತ್ರಿದೇವತೆಯಂತೆ ಪ್ರಕಾಶಿಸಿದಳು. ನೈಜವಾದ ಪತಿಪತ್ನೀಪ್ರೇಮಾನುಬಂಧವು ಬಹು ಬಲವತ್ತರವಾದುದಲ್ಲವೆ? ಸಂದೇಹವೇನು?

ಸಾಧು! ಸಾಧ್ವೀ! ಸಾಧುಸಾಧು!!! ದುಸ್ಸಹವಾಸದಲ್ಲಿ ಸೇರಿ, ಕುಲಟೆಯ ಕುಟಿಲೋಕ್ತಿಗೆ ಮರುಳಾಗಿ, ಆಪದಕ್ಕೊಳಗಾಗಿ ನರಲುತ್ತಿದ್ದ ಪತಿಯನ್ನು ಸನ್ಮಾರ್ಗಗಾಮಿಯನ್ನಾಗಿ ಮಾಡಿ, ದೇಶಹಿತಕಾರ್ಯದಲ್ಲಿ ಬದ್ಧಾದರನಾಗುವಂತೆ ಮಾಡಿದ ನೀನಲ್ಲವೇ ನಮ್ಮ ಸಾಧುವಾದನಕ್ಕೆ ತಕ್ಕವಳು? ನೀನಲ್ಲವೇ ನಮ್ಮಾ ಸತೀಜೀವನಕ್ಕೆ ಪರಮಾದರ್ಶಳಾದವಳು?

ಸುಶೀಲೆ! ಈ ನಿನ್ನ ಲೋಕೋತ್ತರವಾದ ಅದ್ಭುತಮಹಿಮಾಪ್ರದರ್ಶಕಗಳಾದ ಸತ್ಯ, ಕ್ಷಮಾ ದಮಾದಿ ಮನೋಯೋಗ ಶಕ್ತಿಯಲ್ಲಿ, ಸ್ವಲ್ಪಕ್ಕೆ ಸ್ವಲ್ಪವಾದರೂ, ಆಧುನಿಕಮಹಿಳೆಯರಿಂದ ಅನುಸರಿಸಲ್ಪಟ್ಟರೆ,–ನಮ್ಮಾ ಭಾರತಮಾತೆಯು ಧನ್ಯಳೇಸರಿ! ನಮ್ಮವರನ್ನು ಸುತ್ತಿ ಮುತ್ತಿರುವ ಸ್ವಾಮಿದ್ರೋಹ, ಪರನಿಂದೆ, ಆತ್ಮಸ್ತುತಿ, ಪ್ರಾಣಿಹಿಂಸೆ, ಅಸತ್ಯ, ಅನ್ಯಥಿದ್ರಾನ್ವೇ

ಷಣೆಗಳು ದೂರೀಕರಿಸಲ್ಪಟ್ಟು, ಕರ್ಮಕ್ಷಮತೆ, ಸ್ನೇಹಪರಾಕಾಷ್ಠೆಗಳು ಮುಂದಾಗಿ ನಿಂದಲ್ಲಿ, ನಮ್ಮ ಮಾತೆಯ ಸ್ವರ್ಗಸೌಂದರ್ಯವನ್ನು ಧಿಕ್ಕರಿಸುವ ಪೂರ್ವಸೌಂದರ್ಯವು ಮತ್ತೆ ಪ್ರಕಾಶಿಸುವುದರಲ್ಲಿ ಸಂದೇಹವೇನು ? ಆದರೂ, ನಮ್ಮ ಇದೊಂದು ಕೋರಿಕೆಯನ್ನು ನೆರವೇರಿಸು ? ಸುಶೀಲೆ ! ನಿನ್ನ ಅದ್ಭುತ ತಪಃಪ್ರಭಾವದಿಂದ ಸುಪ್ರಸನ್ನನಾದ ಪರಮಾತ್ಮನ ಕೃಪಾಕಟಾಕ್ಷಕ್ಕೆ ನಮ್ಮವರೆಲ್ಲರನ್ನೂ ಪಾತ್ರರನ್ನಾಗಿ ಮಾಡು ! ದೇವಿ ! ಈ ನಿನ್ನ ದಿವ್ಯಸ್ವರೂಪದಲ್ಲಿಯೇ, ಆನಂದಸಾಮ್ರಾಜ್ಯದಲ್ಲಿ ಸ್ವಾಮಿಯಾದ ವಿನೋದನೊಡಗೊಂಡು ಅಭಿಷಿಕ್ತೆಯಾಗಿ, ಶಾಂತಿ, ಧೃತಿ, ಕ್ಷಮೆ, ಸತ್ಯ, ಸಂತೋಷಗಳೆಂಬ ಪಂಚಾಯುಧಗಳನ್ನು ಧರಿಸಿ, ಸಾರ್ವಭೌಮಪದವಿಯನ್ನಲಂಕರಿಸುತ್ತಿರು ! ನಿನ್ನ ಛತ್ರಛಾಯೆಯನ್ನಾಶ್ರಯಿಸಿಯೇ ನಮ್ಮ ಸ್ತ್ರೀಪ್ರಪಂಚವೂ, ಪ್ರಕಾಶಿಸುವಂತಾಗಲಿ !! (ಅಂತಾಗಲಿ.)

ಕಾಲೇವರ್ಷತುಪರ್ಜನ್ಯಃ ಪೃಥಿವೀಸಸ್ಯಶಾಲಿನೀ |
ದೇಶಸ್ಸ್ಯಾತ್ ಕ್ಷೋಭರಹಿತಃ ಸಧ್ಯಕ್ತಾಸ್ಸಂತುನಿರ್ಭಯಾಃ ||

ಶ್ರೀ ಕೃ ಷ್ಣಾ ರ್ಪ ಣ ಮ ಸ್ತು .

M. Narasimhaiengar, Esq., B.A.,
Sub-Registrar, T. Narasipur.

"..........................The work is really a masterpiece...........I am really very much pleased with the splendid style, in which the work is written, the true incarnation of a feminine virtue that is expected from an ideal wife. The plot though simple is an example of an ordinary life consisting of human weakness and feminine jealousy. On the whole, the work is splendid, giving a good moral lesson as to how a wife should be towards her husband....................

(Sd.) M. NARASIMHIENGAR.

Dec. 2nd 1913

M. D. Alasinglachar, Esq.,
Senior Kannada Pandit,
Christian College,
Madras.

"............... ....It was with great pleasure that I perused your Canarese Novel, 'ಸುಶೀಲಾ' a copy of which you were kind enough to send me. I was very much pleased with the correctness of your grammar and the clearness with which you have narrated the story. I believe this will greatly contribute to the progress of Canarese language. I hope you will continue to write canarese novels on similar lines and if you do so, I shall be glad to be a subscriber to them."

22nd Dec. 1915. (Sd) M. D. ALASINGLA CHAR.

ಸುಶೀಲೆಯು ವಿಷಯವಾಗಿ ಬಂದಿರುವ ಪಂಡಿತರ ಸದಭಿಪ್ರಾಯಗಳಲ್ಲಿ ಕೆಲವು.

"......ಭಗಿನಿ !

ತಾವು ವಿಶ್ವಾಸವಿಟ್ಟು ಕಳುಹಿಸಿದ ಗ್ರಂಥಮಾಲೆಯ ಪ್ರಥಮಸಂಚಿಕೆಯನ್ನು ಅತಿ ಕುತೂಹಲದೊಡನೆ ಓದಿನೋಡಿದೆನು. ಇಷ್ಟು ಕಾಲಾನಂತರವಾದರೂ ಸುಶಿಕ್ಷಿತ ಕರ್ನಾಟಕ ಸ್ತ್ರೀಮಂಡಲಿಯಲ್ಲಿ ನಿಜವಿದ್ಯಾಭ್ಯಾಸದ ಇಚ್ಛಿತಫಲವು, ಪರಿಪಕ್ವಸ್ಥಿತಿಗೆ ಬಂದುದನ್ನು ಕಂಡು ಅತ್ಯಾನಂದಗೊಂಡೆನು. ಯೋಚಿಸಿದೆನು:—" ಅಹುದು ! ಇದೀಗೆ ಘನಮನಸ್ಥೈರ್ಯ! ಅಹುದು ! ಇದೀಗ ಸಾರ್ಥಕಶೌರ್ಯ ! ಅಹುದು ! ಇದೀಗ ಸ್ತೋತ್ರಾರ್ಹಕಾರ್ಯ !! ಪರಂತು, ಲೋಕವೇನೆಂಬುದೊ ? ಭಗಿನಿಯರೇನ ಬಗೆವರೊ ! ಹಳಿವರೊ ! ಹೊಗಳುವರೊ ? ಮಾನಿನೀಜನ ಮಾರ್ಗದರ್ಶಿನಿಯೆಂದು ತಿಳಿವರೊ ; ತಿಳಿಯರೊ ! ಕನ್ನಡ ಸರಸತಿಯ ಮೊದಲಮಗಳೆಂದು ಮನ್ನಿಪರೊ ! ಮಾನಿಸರೊ ! ಮುದ್ದು ಮೊಗುವಿಗಾಭರಣಂಗಳನ್ನಣಿಮಾಡಿ ಇಡುವರೊ ! ಕೈಬಿಡುವರೊ ! ಕಣ್ದೆರೆದು, ಕೈಚಾಚಿ, ಕರುಣದಿಂದ ದಾನಕೊಡುವರೊ ! ಒದ್ದು ಕೆಡಹುವರೊ !" ಎಂದೂ—"ಎಷ್ಟಾದರೂ 'ಹೆಂಗರುಳು ಮೃದು'ವೆಂದು ಲೋಕಪ್ರಸಿದ್ಧವಷ್ಟೆ ! ಅದನ್ನು ಪರೀಕ್ಷಿಸುವುದು ಇನ್ನೆಂದು ?" ಎಂದೂ—" ಆಧುನಿಕವಿದ್ಯೆಯ ಸಲುವಾಗಿ ಓದಿಓದಿ, ಸೊರಗಿ ಕೊರಗಿ, ಕಣ್ಣು ಕೆಡಿಸಿಕೊಂಡು, ತದ್ವಾರಾ ಸಂಪಾದಿಸಿದ ಸುಜ್ಞಾನ ಜಡಿತ ಹೃದಯಮಧ್ಯದಲ್ಲಿ, ಮಾತೃಸ್ಥಾನಾನ್ವೇಷಣ ಮಾಡಲು ಇದೊಂದು ಒರೆಗಲ್ಲು" ಎಂದೂ, 'ನವನಾಗರಿಕತೆ'ಯ ಲಕ್ಷಣವೆಂಬುದು ಉಂಡು, ತಿಂದು, ಕುಡಿದು, ಸುಖಿಸುವುದರಲ್ಲಿಯೂ ಕೈಕುಲುಕಿಸುವುದೇ ಮೊದಲಾದ ನವೀನಾಚಾರಗಳನ್ನನುಕರಿಸುವುದರಲ್ಲಿಯೂ ಮಾತ್ರವೇ ಕೊನೆಗಾಣುವುದಾದರೆ,—

ಇತರ ಆರ್ಯಮಹಿಳೆಯರ ಭಾಷಾಭಿಮಾನದ ವಿಚಾರವನ್ನು ಕಂಡು, ಕೇಳಿ, ತಿಳಿದಿದ್ದರೂ, ಕುರುಡ, ಕೆಪ್ಪ, ಮೂಕರಂತೆ, ಮೌನಧಾರಿಣಿಯರಾಗುವುದಾದರೆ ಕೊನೆಗೆ ಶೈಲಿ, ಕಥಾಭಾಗ ಮೊದಲಾದುವು, ಸ್ವೀಕಾರಾರ್ಹವಲ್ಲವೆಂದರೂ, " ಪ್ರಥಮ ಭಗಿನಿಯ ಪ್ರಥಮ ಪ್ರಯತ್ನ " ವೆಂದಾದರೂ ಮನ್ನಿಸಲು ಮನವೊಪ್ಪದಿದ್ದರೆ, ಭಾರತಭೂಮಿಯ ಕನ್ನಡಿಗರದೆಂತು ದೇಶೋದ್ಧಾರ ಕಾರ್ಯದಲ್ಲಿ ಸಹಕಾರಿಗಳಾಗುವರೊ, ಬಲ್ಲವರಾರು ? " ಎಂದೂ ಬಗೆಬಗೆಯಾಗಿ ಯೋಚಿಸಿದೆನು. ಆದರೇನು? ಈ ನನ್ನ ಯೋಚನೆಗಳಿಗೆಲ್ಲ ಸಮಾಧಾನವು ಸಿಗುವುದಕ್ಕೆ ಬಹುಕಾಲವು ಬೇಕಾಗಿಲ್ಲ. " ಅಳಿಯನು ಕುರುಡನಾಗಿದ್ದರೆ ಬೆಳಗಾದೊಡನೆ ತಿಳಿವುದಲ್ಲವೆ? " ಅದು ಹೇಗೂ ಇರಲಿ. ಮುಖ್ಯವಾಗಿ " ದೇಶ, ಭಾಷೆ, ಸಮಾಜ "ದ ಉನ್ನತಿಗೋಸುಗ ಉದಾರ ಮನಸ್ಸಿನಿಂದ ಉದ್ಯೋಗವನ್ನು ಉಪಕ್ರಮಿಸಿರುವ ಈ ತಮ್ಮ ಸ್ವಚಾತುರ್ಯನಿರ್ಮಿತವಾದ ಶುದ್ಧ ಸರಳ ಲಲಿತಶೈಲಿಯನ್ನೊಳಕೊಂಡಿರುವ ಮನೋಹರವಾದ ಮತಾನುಸಾರವಾದ, ನೀತಿಕದಂಬವನ್ನು, ಪತ್ಯಹದ ಪ್ರತ್ಯಕ್ಷ ಉದಾಹರಣೆಗಳ ಮೂಲಕ ಬೋಧಿಸುತಲಿರುವ ' ಸುಶೀಲೆ 'ಯು--ಏಕೆ--ಸತೀಹಿತೈಷಿಣೀ ಗ್ರಂಥಗಳೆಲ್ಲವೂ ಸಕಲ ಗ್ರಹಚಾರಮುಕ್ತ-ಸಕಲ ಜನಾದರಣೀಯ-ಸಕಲಜನ ಮನೋರಂಜಕ-ಸಕಲ ಗೃಹಾಧಿದೇವತೆಗಳಾಗಿ ಬಹುಕಾಲ ಬೆಳಗಲೆಂದು ಭಗವಂತನನ್ನು ಭಕ್ತಿಪೂರ್ವಕವಾಗಿ ಬೇಡುತ್ತಿರುವೆನು.

6-12-13
Calicut.

H. Bheema Row,
Kannada Munshi, B.G.M. College.

ಸತೀಹಿತೈಷಿಣೀ ಗ್ರಂಥಮಾಲಾ.

ನಮ್ಮ ಸ್ತ್ರೀ ಜನಾಂಗದ ಅಭ್ಯುದಯಕ್ಕೆಂದೇ ಹೊರಟಿರುವ ಈ ಗ್ರಂಥಮಾಲೆಯ ಪ್ರತಿ ಗ್ರಂಥವೂ ಮತ-ನೀತಿಬೋಧಕಗಳಾದ ಸಾಂಸಾರಿಕ-ಸಾಮಾಜಿಕ ತತ್ವಗಳನ್ನೊಳಕೊಂಡು, ಯುಕ್ತಿಯುಕ್ತ ವಿಚಾರಗಳಿಂದ ಸರ್ವರಿಗೂ ಸಂಗ್ರಾಹ್ಯವೆನಿಸತಕ್ಕವುಗಳಾಗಿವೆ.

ಈ ಗ್ರಂಥಮಾಲೆಯ ಪ್ರತಿಗ್ರಂಥವೂ ದೇಶ ಮತ್ತು ಭಾಷಾ ಸೇವೆಗೆ ತಕ್ಕಮಟ್ಟಿಗೂ ಸಹಕಾರಿಯಾಗುವಂತೆ ಪ್ರಯಾಸಪಟ್ಟು ಬರೆಯಲ್ಪಡುವುದಲ್ಲದೆ ಉತ್ತಮ ಪತ್ರದಲ್ಲಿಯೇ ಮುದ್ರಿಸಲ್ಪಟ್ಟು ಸುಮನೋಹರವಾಗಿರುವುದು.

ಈ ಮಾಲೆಯ ಪ್ರಥಮ ಗ್ರಂಥವಾದ ಸುಶೀಲೆ ಯೆಂಬುದು ದ್ವಿತೀಯ ಮುದ್ರಣದಲ್ಲಿ ಮತ್ತೂ ಉಪಯುಕ್ತವೂ, ರಮ್ಯವೂ ಆಗಿರುವುದೆಂದು ಬೇರೆ ಹೇಳಬೇಕಾದುದಿಲ್ಲ.

ಗ್ರಂಥಮಾಲೆಯ ಎಲ್ಲಾ ಗ್ರಂಥಗಳನ್ನು ಸುಲಭಕ್ರಯಕ್ಕೆ ಪಡೆಯಲೆಳಸುವವರು ನಾಲ್ಕಾಣೆ ಮುಂಗಡವಾಗಿ ಕೊಟ್ಟು ಚಂದಾದಾರರಾಗಬಹುದು. ವಿಶೇಷ ವಿಷಯಗಳನ್ನು ತಿಳಿಯಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಈ ವರೆಗೆ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ ಗ್ರಂಥಗಳು.

1. ಸುಶೀಲೆ	ಕ್ರಯ	0—6—0		0—4—0
2. ಸಭಾ	...	0—8—0	ಚಂದಾ	0—5—6
3. ವಿದ್ಯುಲ್ಲತಾ	...	0—14—0	ದಾರರಿಗೆ	0—10—0
4. ವಿರಾಗಿಣಿ	...	1—0—0		0—12—0

ವಿಳಾಸ:—ಕಾರ್ಯದರ್ಶಿ, ಸತೀಹಿತೈಷಿಣೀ ಕಾರ್ಯಾಲಯ,

ನಂಜನಗೂಡು (ಮೈಸೂರು ಡಿಸ್ಟ್ರಿಕ್ಟ್.)